ಆಶ್ವಯುಜಮಾಸ

ಆಶ್ವಯುಜಮಾಸದಲಿ (ನವರಾತ್ರಿ) **ರಾಗ: ಕುರಂಜಿ**

ಆಶ್ವಯುಜಮಾಸದಲಿ ಆ ಶುದ್ದ ಪಾಡ್ಯದಲಿ ಭೂಷಣ ವಸ್ತ್ರವನ್ ನೆರಿವಿಡಿದುಡಿಸೆ। ಆಶ್ರಯದ ಭಕ್ತರಿಗಭಯವನೀವ ಮಾಯಾ ಮಾಯಿಗೆ। ಮಹೇಶ್ವರಿ ಬಂದಳೊ ನಮ್ಮ ಮನೆಗೆ ಜಯಮಂಗಳೇ ನಿತ್ಯ ಶುಭಮಂಗಳೇ।। ಮರುದಿವಸ ಬಿದಿಗೆಯಲಿ ಹರನ ಪಟ್ಟದ ರಾಣಿ ವರ ಶಂಖಾದ್ಯಾಯುಧಗಳನು ಧರಿಸಿ। ಸಿರಿಯು ಸಂಪತ್ತನ್ನು ತನ್ನ ಭಕ್ತರಿಗೀವ ವರಲಕ್ಷ್ಮೀ ಬಂದಳೋ ನಮ್ಮ ಮನೆಗೆ।। ಜಯ ಮಂಗಳೇ ನಿತ್ಯ ಶುಭಮಂಗಳೇ।। ಮೂರನೇ ತದಿಗೆಯಲಿ, ಸಾರಾವಾಳಿಯನುಟ್ಟು। ಮೂರುಕಣ್ಣುಳ್ಳವನ ಪಟ್ಟದರಸೀ। ವಾರುಣೀ ಇಂದ್ರಾಣಿ ವಿಜಯಲಕ್ಷ್ಮೀಯ ಸಹಿತ। ಪಾರ್ವತಿ ಬಂದಳೋ ನಮ್ಮ ಮನೆಗೆ ಜಯಮಂಗಳೇ ನಿತ್ಯ ಶುಭಮಂಗಳೇ।। ನಾಲ್ಕನೇ ಚೌತಿಯಲಿ ಏಕದಂತನ ಮಾತೇ। ಲೋಕವಿಲೋಕವನು ಸಲಹುವೆ ಎಂದು ಪಿನಾಕಿ ಗಂಗೆಯ ಸಹಿತ ನಮ್ಮ ಪ್ರತಿಪಾಲಿಸುವ। ವಾಗ್ದೇವಿ ಬಂದಳೋ ನಮ್ಮ ಮನೆಗೇ। ಜಯ ಮಂಗಳೇ ನಿತ್ಯ ಶುಭಮಂಗಳೇ।। ಪಂಚಮಿಯ ದಿನದಲ್ಲಿ ಪಂಚಮುಖದರಾಣಿ। ಕಂಚಿಯ ಡಾಬು ಕಟಿಸೂತ್ರ ಹೊಳೆಯೆ। ಕಂಚಿ ಕಾಮಾಕ್ಷಿ ನಮ್ಮ ಪ್ರತಿ ಪಾಲಿಸುವ। ಕಾಮಾಕ್ಷಿ ಬಂದಳಕ್ಕ ನಮ್ಮ ಮನೆಗೆ।। ಜಯಮಂಗಳೇ ನಿತ್ಯ ಶುಭಮಂಗಳೇ।।2।। ಷಷ್ಠಿಯಲಿ ಸ್ವಾಮಿಭಾರತಿ ಪೃಥ್ವಿಸುಂದರಿ। ಪಟ್ಟೆ ಪಟ್ಟಾವಳಿಯ ನೆರಿಗೆಯುಡಿದಿಟ್ಟು। ಇಟ್ಟ ಚಂದನ ಗಂಧ ದಿವ್ಯ ಕಸ್ತೂರಿ ಸಹಿತ। ಸಂತುಷ್ಟಿ ಬಂದಳೋ ನಮ್ಮ ಮನೆಗೆ।।ಜಯಮಂಗಳೇ ನಿತ್ಯ ಶುಭಮಂಗಳೇ।।3।। ಸಪ್ತಮಿಯ ದಿನದಲ್ಲಿ। ಸಪ್ತಮುಖದ ರಾಣಿ। ಪುಸ್ತಕವ ಕೈಲಿ ಜಪಮಾಲೆಯನು ಪಿಡಿದು। ಸರಸ್ವತಿ ದೇವಿ ಸನ್ಮತಾದಿಯ ಲಕ್ಷ್ಮೀ। ಪಾರ್ವತಿ ಬಂದಳೋ ನಮ್ಮ ಮನೆಗೇ।। ಜಯಮಂಗಳೇ ನಿತ್ಯ ಶುಭಮಂಗಳೇ।।4।। ಅಷ್ಟಮಿಯ ದಿನದಲ್ಲಿ ಅಷ್ಟ ಮುಖದರಾಣಿ। ಹೊತ್ತಿಗೊಂದೊಂದಂದಣವ ಜಡಿದೇರಿದೆ। ಅಷ್ಟಮಾದಿತ್ಯೆಯರು ನೆರೆದು ಓಲೈಸಿದಾ। ಸಂತುಷ್ಟಿ ಬಂದಳೋ ನಮ್ಮ ಮನೆಗೆ।। ಜಯಮಂಗಳೇ ನಿತ್ಯ ಶುಭಮಂಗಳೇ।।5।। ಮಹಾನವಮಿ ದಿನದಲ್ಲಿ ಮಹಾಕಾಳಿ ಮಹಾಲಕ್ಷ್ಮೀ। ಇನ್ನೇನು ಪರಮೇಶ್ವರಿ ಅನ್ನಪೂರ್ಣೇ। ವಾರುಣಿ ಇಂದ್ರಾಣಿ ವಿಜಯಲಕ್ಷ್ಮೀ ಸಹಿತ। ಪಾರ್ವತಿ ಬಂದಳೋ ನಮ್ಮ ಮನೆಗೆ।। ಜಯಮಂಗಳೇ ನಿತ್ಯ ಶುಭಮಂಗಳೇ।।6।। ಇಂತು ನವರಾತ್ರಿಯನು ಬಿಡದೆ ಪೂಜೆಯ ಮಾಡೆ। ಸಂತತ ಸೌಭಾಗ್ಯ ಸಾಯುಜ್ಯ ಪದವಿಯನು। ಕೊಟ್ಟು ರಕ್ಷಿಸುವಳು ಜಗದಂಬಿಕಾ(2ಸಾರಿ) ।।ಜಯಮಂಗಳೇ ನಿತ್ಯ ಶುಭ ಮಂಗಳೇ।।7।।

❖ ❖ ❖

41. ''ಪದ್ಮನಾಭ''ಮಾಸ ನಿಯಾಮಕ

ಪದ್ಮನಾಭ ಶುಭೋದ್ಭವ ವಂದೇ ಸಂಭೃತಲೋಕ ಭರಾಭರ ಭೂರೇ।।

ಪದ್ಮನಾಭ ಪದ್ಮನಾಭ ಎಂದರೆ ನಾಭಿಕಮಲದಲ್ಲಿ ಬ್ರಹ್ಮನನ್ನು
ಪಡೆದದ್ದರಿಂದ ಪದ್ಮನಾಭ ಎನಿಸಿಕೊಂಡ ।।ಕೇಶವಾಯ ನಮಃ।।

ಪದ್ಮನಾಭದಲ್ಲಿ ಪದ್ಮನಾಭನಿದ್ದಾನೆ ರಾಮ ರಾಮ।
ಪದ್ಮನಾಭನ ದಯದಿ ಪದ್ಮನಾಭನ ಕಂಡೆ ರಾಮ ರಾಮ।।ಕಾಶಿಯ ಹಾದಿಯಲಿ।।

ಪದ್ಮನಾಭ ಕೇಳೋ ಘನ್ನ।ಪಾದ। ಪದ್ಮವ ತೋರಿಸೋ ಬೇಗನೆ ನಿನ್ನ ಮುದ್ದು ಮುಖವ ತೋರಿ ಎನ್ನ
।ಬೇಗ। ಉದ್ಧಾರ ಮಾಡೆಂದು ಬೇಡುವೆ ನಿನ್ನ ।।ಅಚ್ಯುತಾನಂತ।।

ಅಬ್ಧಿಯೊಳಗೆ ಬಿದ್ದು ನಾನು ಒದ್ದು ಕೊಂಬೆಯ್ಯ ಭವದಿ। ಗೆದ್ದು ಪೋದ ಬುದ್ಧಿ ತೋರೊ ಪದ್ಮನಾಭನೇ ।।ಈಶ ನಿನ್ನ।।

ಪೀತಾಂಬರಂ ಪದ್ಮನಾಭಂ ಪದ್ಮಾ ಕ್ಷಂ ಪುರುಷೋತ್ತಮಂ।
ಪವಿತ್ರಂ ಪರಮಾನಂದಂ। ತಂ ವಂದೇ ಪರಮೇಶ್ವರಂ ।।ಓಂ ನಮೋ ಭಗವತೇ।।

ಪದ್ಮ ಸಂಭವಹಿತ ಪದ್ಮ ದಾಮೋದಾರನೆ। ಪದ್ಮ ದಿಂದಭಯ ಕೊಡುತ್ತಿದ್ದ ಭಕ್ತರಿಗೆ।
ಪದ್ಮ ದಿಂದಭಯ ಕೊಡುತ್ತಿದ್ದ ಶ್ರೀಕೃಷ್ಣ। ಪದ್ಮ ನಾಭನೆ ನಮ್ಮ ಮನೆದೈವ ।।ರಂಗ ಬಾರೋ।।

ಪದುಮನಾಭಾ ಪರಮಪುರುಷಾ — ರಾಗ: ಮಲಹರಿ-ತ್ರಿಪುಟತಾಳ

ಪದುಮನಾಭಾ ಪರಮಪುರುಷಾ। ಪರಂಜ್ಯೋತಿ ಸ್ವರೂಪಾ।। ವಿದುರವಂದ್ಯಾ ವಿಮಲಚರಿತ। ವಿಹಂಗಾದಿರೋಹಣಾ ಉದದಿ ನಿವಾಸ। ಉರಗ ಶಯನಾ। ಉನ್ನತೋನ್ನತ ಮಹೀಮಾ।। ಯದುಕುಲೋತ್ತಮ। ಯಜ್ಞರಕ್ಷಕ ಆಜ್ಞಶಿಕ್ಷಕ। ರಾಮನಾಮ।। ವಿಭೀಷಣ ಪಾಲಕ ನಮೋ ನಮೋ। ವಿಭಾವರದಾಯಕ ನಮೋ ನಮೋ।। ಶುಭಪ್ರದ ಸುಮನೋಹರದಾಯ। ಸುರೇಂದ್ರ ಮನೋರಂಜನಾ। ಅಭಿನವಾ ಪುರಂದರಾ ವಿಠಲ ಭಲರೇ ರಾಮನಾಮ।।

ಪರಮ ಪುರುಷ ಜಗದೀಶ್ವರ ಜಯಜಯ

ಪರಮ ಪುರುಷ ಜಗದೀಶ್ವರ ಜಯಜಯ।। ಪಂಕಜನಾಭ ಮುರಾರೇರ ಜಯ।।ಪ।। ಸರಸೀರುಹಭವ ಸನ್ನುತ ವಾಸವ। ಸನ್ನುತ ಚರಿತ ಪುರೇಶ।।ಅ.ಪ.।। ಚಾರು ವಿದಿತ ವನಮಾಲಾ ಕೌಸ್ತುಭ। ಸತ್ವಜ ಕಮಲ ದಿನೇಶಾ। ಸಾರಂಗಾಧಿಪ ಪಾಪ ವಿಮೋಚನ। ಸಾನಂದೂರ ಪುರೇಷ।।1।।

ಪದುಮನಾಭನೆ ನಿನ್ನ ಪಾದ ಕಿಂಕರ

ಪದುಮನಾಭನೆ ನಿನ್ನ ಪಾದ ಕಿಂಕರ ನನ್ನ ಕೈಬಿಡುವುದುಚಿತವೇ ರಂಗ।।ಪ।। ಮುದದಿಂದ ನಿನ್ನ ಪಾದಕೆರಗುವೆ ನಾನು ತ್ವರಿತದಿ ನೀ ಕಾಯೊ ಎನ್ನೊಡೆಯ ರಂಗ।।ಅ.ಪ.।। ಅಜಗರಶಯನನೆ ಬುಧಜನ ನಮಿತನೆ। ತ್ರಿಜಗವಂದಿಪಾದ ಪದುಜನ ನಮಿತನೆ।।1।। ಶಿಶುವಾಗಿ ಗೋಕುಲದ ಪಶುಗಳ ಸಲಹಿದೆ। ಶಶಿಭೂಷಣಸಖ ಶಿಶುವ ಕಾಪಾಡೊ।।2।। ಸಾಂದೀಪಗೊಳಿದೆ ಸಂದೇಹವಿಲ್ಲ। ತಂದೆ ಹೆಳವನಕಟ್ಟೆ ರಂಗ ಕೃಪಾಂಗ।।3।।

ಪದುಮನಾಭನೆ ಪಾಲಿಸಯ್ಯ

ಪದುಮನಾಭನೆ ಪಾಲಿಸಯ್ಯ ತುದಿ ಮೊದಲಿಲ್ಲದಂಥ ದೇವನೆ। ಹದಿನಾಲ್ಕು ಲೋಕಗಳೆಲ್ಲವನು ಉದರದೊಳಿಂಬಿಟ್ಟಿಹ ಭೂಪನೆ।।ಪ।। ಆದಿಯಲಿ ಮಧುಕೈಟಬರನು ಸಂಹರಿಸಿದಂಥ ಶೂರನೆ। ವೇದವನು ಕದ್ದೊಯ್ದ ದಾನವನೊಳು ಕಾದಿಗೆದ್ದ ಧೀರನೆ।।1।। ಹದಿನಾಲು ಸಾವಿರ ಗೋಪಿಯನಾಳಿದಾಮಿತ ಬಲವಂತನೆ। ಕದನಕೊದಗಿದಸುರರನ್ನು ಸದೆಬಡಿದ ಪ್ರಖ್ಯಾತನೆ।।2।। ಸಾಧು ಸಜ್ಜನರ ಸಂತಾಪ ಕಳೆದಾಮೋದ ತೀರ್ಥಾರಾಧ್ಯನೆ। ಆದಿದೈವಿಕಾದಿ ಈತಿ ಬಾಧೆ ಕಳೆಯೊ ರಂಗೇಶವಿಠಲನೆ।।3।।

ಪರಮ ಶಾಂತ ಪೊರೆ ಅನಂತ

ಪರಮ ಶಾಂತ ಪೊರೆ ಅನಂತ ಕಮಲಜಾ ಕಾಂತ।। ಕರವ ಮುಗಿದು ಬೇಡಿಕೊಂಬೆನು। ಸರಸಿಜನಾಭ।।ಪ।। ವೇದ ಶಾಸ್ತ್ರ ಸಾರಗಳನು ಓದಿ ಅರಿಯೆನೈ। ಸಾಧುಸಂಗವಿಲ್ಲದಿರೇ ಉದ್ದರಿಸೀಪೊರೆಯೈ।।1।।

❖ ❖ ❖

42. ನವರಾತ್ರಿ
ದೇವಿ - ಪ್ರಾರ್ಥನೆ

ಕಾಕಡೇ ಆರತಿ ತುಜಲಾ ಜಗದಂಬೆ (ಬೆಳಗಿನ ಆರತಿ-ಮರಾಠಿ)

ಕಾಕಡೇ ಆರತಿ ತುಜಲಾ ಜಗದಂಬೆ ಶಾಂತೆ। ತುಜಲಾ ಜಗದಂಬೇ ಶಾಂತೇ।।ಪ।। ಮಹಾ ಕಾಲೀ ಮಹಾಲಕ್ಷ್ಮೀ ಜಯ ಸರಸ್ವತೀ ಮಾತೇ।।ಅ.ಪ.।।ಮಧುಕೈಟಭ ಮರ್ದಿನೀ ಶುಂಭ ನಿಶುಂಭ ನಿರ್ದಾಲಿನೀ। ಅಘನಗಸಂಹಾರಿಣೇ ದಯೋಲೆ-ಸುರು-ಮುನಿ- ಪರಿಪಾಲಿನೀ।।1।। ಮಹಿಷಾಸುರ ಮರ್ದಿನೀ ಭವಾನೀ ಚಂಡಮುಂಡ ಘಾತಿನೀ। ಚಿಚ್ಛಕ್ತೀ ಚಿನ್ಮಾತ್ರೆ ಚಿತ್ತ ಚಾಲಕ ನಾರಾಯಣೀ।।2।। ಗೋಬ್ರಾಹ್ಮಣ ಛಳಿತಾ ಚೀ ಕಲಿಯುಗಿ ದೈತ್ಯಾಂಶೀಯವನೀ। ತೂಂಚಿ ಕಾರಿಸೀ ನಿಃ ಪಾತ ತಯಾಂಚಾ ಶಿವನೃಪರದಾಯಾನೀ।।3।। ಧರ್ಮಗ್ಲಾನೀ ದೈನ್ಯ ದುಃಖಹೀ ದೂರಕರಾಯಾ ಝಣೀ। ನಾನಾ ರೂಪೀ ಅವತರಸೀ ತೂಂತಾರಾಯಾ ಅವನೀ।।4।। ಶತ್ರುಬುದ್ಧಿಸೀ ಮೋಹ ಸನ್‌ಮತಿ ಪಸರವಿ ಅಮುಚ್ಯಾಜನೀ। ನಿಜಪದಕಮಲ್ಲಿ ರಮವಿ ಭವಾನೀ ದಾಸರಾತ್ರಂದಿನೀ।।5।। ಶ್ರೀಜಗದಂಬ ಜಗದಂಬ। ಜಗದಂಬೆ ಉದಯೋತ್ಸು।।

ಕಾತ್ಯಾಯಿನಿ ಮಹಾಮಾಯೇ(ನವಮಂಗಳಸ್ತೋತ್ರ-ನವರಾತ್ರಿಯ ಪ್ರತಿದಿನದ ಪಾರಾಯಣ)

ಕಾತ್ಯಾಯಿನಿ ಮಾಹಾಮಾಯೇ ಭವಾನಿ ಭುವನೇಶ್ವರಿ। ಸಂಸಾರ ಸಾಗರೇ ಮಗ್ನಾತ್ ಉದ್ಧಾರ ಶ್ರೀ ಕೃಪಾಮಯಿ।।1।। ಧನ್ಯೋಹಂ ಅತಿಭಾಗೋಹಂ ಭಾವಿತೋಹಂ ಮಹಾತ್ಮಭಿಃ। ಯತ್ ಪೃಷ್ಟಂ ಸಮಹತ್ ಪುಣ್ಯ ಪುರಾಣಂ ವೇದವಿದ್ ಕೃತಂ।।2।। ನಮೋ ದೇವ್ಯೈ ಪ್ರಕೃತ್ಯೈ ಸತತಂ ನಮಃ। ಕಲ್ಯಾಣ್ಯೈ ಕಾಮದಾಯೈ ಚ ವೃದ್ಧ್ಯೈ ಸಿದ್ಧ್ಯೈ ನಮೋ ನಮೋ।।3।। ಸಚ್ಚಿದಾನಂದ ರೂಪಿಣ್ಯೈ ಸಂಸಾರಿಣ್ಯೈ ಸದಾ ನಮಃ। ಪಂಚಕೃತ್ಯೈ ವಿದಾತ್ರ್ಯೈಚ ಭುವನೇಶ್ವರಿಯೈ ನಮೋನಮಃ।।4।। ಕ್ರೀಡಾ ತೇ ಲೋಕರಚನಾ ಸಖಾ ತೇ ಚಿನ್ಮಯ ಶಶಿತಃ। ಆಹಾರ ಸ್ತೇ ಸದಾನಂದಃ ವಾಸಸ್ತೇ ಹೃದಯಂ ಮಮ।।5।। ನಮಶ್ಶಿವಾಯೈ ಕಲ್ಯಾಣ್ಯೈ ಶಾಂತ್ಯೈ ಪುಷ್ಟ್ಯೈ ನಮೋನಮಃ। ಭಗವತ್ಯೈ ನಮೋ ದೇವ್ಯೈ ರುದ್ರಾಯೈ ಸತತಂ ನಮಃ।।6।। ಜಯಜಯ ಜಯಧಾರೇ ಜಯಶೀಲೇ ಜಯಪ್ರದೇ। ಯಜ್ಞಸೂಕರ ಜಾಯೇತ್ವಂ ಜಯದೇವಿ ಜಯಾ ವಹೇ।।7।। ಸುಖ ದೇ ಮೋಕ್ಷ ದೇ ದೇವಿ ಪ್ರಸನ್ನಾಭವ ಸುಂದರಿ। ಪುಷ್ಪಸಾರ ವಂದನೀಯಾ ತುಲಸೀ ಕೃಷ್ಣ ಜೀವನಿ।।8।। ನಮಸ್ತೇ ತುಲಸೀ ರೂಪೇ ನವೇದೆ ಲಕ್ಷ್ಮೀ ಸರಸ್ವತಿ। ನಮೋ ದುರ್ಗೇ ಭಗವತೀ ನಮಸ್ತೇ ಸರ್ವರೂಪಿಣಿ।।9।।

ಬ್ರಹ್ಮ ಶಕ್ತಿ ವಿಷ್ಣು ಶಕ್ತಿ — ರಾಗ: ಸಿಂಧೂಭೈರವಿ

ಬ್ರಹ್ಮ ಶಕ್ತಿ ವಿಷ್ಣು ಶಕ್ತಿ ಶಿವಶಕ್ತಿ ಸ್ವರೂಪಿಣಿ। ಆದಿಶಕ್ತಿ ಪರಾಶಕ್ತಿ ಭುಕ್ತಿಮುಕ್ತಿ ಪ್ರದಾಯಿನಿ।।ಪ।। ತಾಮಾಗ್ನಿ ವರ್ಣಾಂ ತಪಸಾಂ ಜ್ವಲಂತೀಂ। ವೈರೋಚಿನಂ ಕರ್ಮ ಫಲೇಷು ಜುಷ್ಟಾಂ।। ದುರ್ಗಾಂ ದೇವೀಂ ಶರಣಂ ಅಹಂ ಪ್ರಪದ್ಯೆ। ಸುತರಸಿತರಸೇ ನಮಃ।।1।। ವಿಶ್ವಸೃಷ್ಟಿ ಸ್ಥಿತಿ ಪ್ರಲಯ ಕಾರಿಣಿ ಜಗವ್ಯಾಪಿನಿ। ಸರ್ವನಾಮ ರೂಪ ಧಾರಿಣಿ ಕಾರಿಣಿ ಭವತಾರಿಣಿ। ಬ್ರಹ್ಮವಿದ್ಯಾ ಪರಾಭಕ್ತಿ ಗುಣಮಯಿ ಚಿಚ್ಛಕ್ತಿ ಭಗವತಿ। ಕಾಳಿ ಲಕ್ಷ್ಮೀ ದುರ್ಗಾಸರಸ್ವತಿ ಶ್ರೀತುಲಸಿ ಪರಂಜ್ಯೋತಿ।।2।।

ಲಂಕಾಯಾಂ ಶಾಂಕರೀ ದೇವಿ (ಅಷ್ಟಾದಶ ಪೀಠ ಶಕ್ತಿದೇವತಾ ಸ್ತೋತ್ರಮ್)

ಲಂಕಯಾಂ ಶಾಂಕರೀ ದೇವಿ ಕಾಮಾಕ್ಷೀ ಕಾಂಚಿಪುರೇ। ಪರ್ಜನ್ಯೇ ಸಿಂಹಲಾದೇವಿ ಚಾಮುಂಡೀ ಕ್ರೌಂಚ ದ್ವೀಪಕೇ।।1।। ಅಹಿಕ್ಷೇತ್ರೇ ಕಾಮರೂಪೀ ಪೈರಣೀ ಪೀಠಿಕಾಪುರೀ। ವಡ್ಯಾಣೇ ಗಿರಿಜಾದೇವಿ ಮಾಣಿಕ್ಯಾ ಚಿತ್ರಕೂಟಕೇ।।2।। ಮಾಹುರ್ಯಾಮೇಕವೀರಾ ಚ ಪ್ರಯಾಗೇ ಮಾದವೀ ತಥಾ। ಜಾಲಂಧರೇ ವಿಷ್ಣುದೇವೀಕಾ ಶ್ಯಾಂ ಮಂಗಲಗೌರಿಕಾ।।3।।

ಕುರುಕ್ಷೇತ್ರೇ ಮಹಾಮಾಯಾ ಉಜ್ಜಯಿನ್ಯಾಂತು ಕಾಲಿಕಾ। ಸಂನತ್ಯಾಂ ಚಂದಲಾದೇವಿ ಕರವೀರೇತು ಲಕ್ಷ್ಮೀಕಾ॥4॥ ಆಲಂಪುರ್ಯಾಂ ಜೋಗುಳಾಂಬಾ ಶ್ರೀಶೈಲೇ ಭ್ರಮರಾಂಬಿಕಾ।ಇತ್ಯಾಷ್ಟದಶ ಪೀಠೇಷು ಶಕ್ತಯಶ್ಚ ಮುನಿ ಶ್ರುತೇ॥5॥ ಶ್ರವಣಾತ್ ಪಠನಾತ್ಪಾಪಂ ಸರ್ವೋಪದ್ರವ ನಾಶನಮ್। ಸರ್ವಸೌಭಾಗ್ಯದಂ ನೃಣಾಂ ಸರ್ವಕಾಮ ಫಲಪ್ರದಮ್॥6॥ ಅಷ್ಟದಶ ಮಹಾಪೀಠ ಋಷಿಭಿರ್ನಿರ್ಮಿತಾ ಪುರಾ। ತ್ರಿಸಂಧ್ಯಂ ಯಃಪಠೇನ್ನಿತ್ಯಂ ಸರ್ವಕಾಮಾರ್ಥ ಸಿದ್ಧಿದಮ್॥7॥ (ಶ್ರೀಮಾರ್ಕಂಡೇಯ ಪುರಾಣದಿಂದ।)

ನವರಾತ್ರಿಯಲಿ ನವರಾಗಮಾಲಿಕೆ **ರಾಗ: ಸಾರಂಗ–ಆದಿತಾಳ**

ನವರಾತ್ರಿಯಲಿ ನವರಾಗಮಾಲಿಕೆ। ಹಾಡುವೆ ನಿನಗೆ ನಾಯಕಿಯೆ। ನವ ವಿಧ ಪೂಜೆ ನವವಿಧ ಅಲಂಕಾರ। ವೈಭವ ನಿನಗೆ ಅಂಬಿಕೆಯೆ॥ಪ॥ ಪಾಡ್ಯದ ದಿನದಲಿ ಪಾಡುವೆ ನಿನ್ನಯ। ಕೀರ್ತಿಯ ನಾನು ಪ್ರೀತಿಯಲಿ। ಬಿದಿಗೆಯ ದಿನದಲಿ ಭದ್ರೆಯ ಪಾದವ। ಭಜಿಪೆನು ನಾನು ಭಕ್ತಿಯಲಿ॥1॥ ತದಿಗೆಯ ದಿನನಾ ತಂಬಿಟ್ಟಿನಾರತಿ। ತರುವೆನು ಪಾವನೆ ಪಾರ್ವತಿಗೆ। ಚೌತಿಯ ದಿನವೆ ಚತುರ್ವಿದ ಹೂಗಳ। ನೀಡುವೆನಮ್ಮ ಶಂಕರಿಯೆ॥2॥ ಪಂಚಮಿಯ ದಿನವೆ ಪಂಚಾರತಿಯ ಮಾಡಿ। ಪಂಚಭಕ್ಷ್ಯಗಳ ನಾ ನೀಡುವೆನು। ಷಷ್ಠಿಯ ದಿನವೆ ಷಡ್ರಸದಡಿಗೆಯ। ನೈವೇದ್ಯ ನೀಡುವೆ ಈಶ್ವರಿಯೆ॥3॥ ಸಪ್ತಮಿಯ ದಿನವೆ ಶಾರದೆಯ ನೆನೆದು। ನಾದೋಪಾಸನೆಯ ಮಾಡುವೆನು। ಅಷ್ಠಮಿಯ ದಿನವೆ ದುರ್ಗೆಯ ಪಾದವ। ಆರಾಧನೆ ನಾ ಗೈಯ್ಯುವೆನು॥4॥ ನವಮಿಯ ದಿನದಲಿ ನವರಂಗಿನ ರಂಗೋಲಿ। ಹಾಕುವೆ ನಾನು ಒಲವಿನಲಿ। ದಶಮಿಯ ದಿನವೆ ತಾಯಿಯ ವಿಜಯದ। ವೈಭವ ನೆನೆಯುತ ಹರುಷದಲಿ॥5॥

ನವರಾತ್ರಿಯು ಬಲು ಸಂಭ್ರಮವು **ರಾಗ: ಮಲಯಮಾರುತ–ಆದಿತಾಳ**

ನವರಾತ್ರಿಯು ಬಲು ಸಂಭ್ರಮವು। ನವ ವಿಧ ಭಕುತಿಗೆ ಕಾರಣವು॥ಪ॥ ಪರಿಪರಿ ವಿಧದಲಿ ದೇವಿಯ ಸ್ಮರಿಸುತ। ವಿಧವಿಧ ಹೂಗಳ ಮಾಲೆಯ ಕಟ್ಟುತ। ಝಣ ಝಣ ನೂಪುರ ಸದ್ದನು ಮಾಡುತ। ಬಗೆ ಬಗೆ ಬೊಂಬೆಯ ನೋಟವ ನೋಡುವ॥1॥ ಜ್ಞಾನ ಪ್ರದಾಯಿನಿ ಶಾರದೆ ವರದೆ। ದುರ್ಗಿಚಾಮುಂಡಿ ಮಹಿಷಮರ್ದಿನಿ। ಆದಿಪರಾಶಕ್ತಿ ಅನಂತ ರೂಪಿಣಿ। ವಿಜಯವ ನೀಡಮ್ಮ ಅಂಬಪರಮೇಶ್ವರಿ॥2॥ ನಾನಾ ಬಗೆಯ ತಿನುಸುಗಳ್ ಮಾಡುತ। ಹೆಂಗೆಳೆಯರಿಗೆ ಬಾಗಿನ ನೀಡುತ। ಬಣ್ಣಬಣ್ಣದ ವಸ್ತ್ರವ ಧರಿಸುತ। ಬಲು ಸಂಭ್ರಮದಲಿ ಗೀತೆಯ ಪಾಡುವ॥3॥

ಚಂದಣದಾ ಬೊಂಬಕ್ಕ (ಬೊಂಬೆಹಬ್ಬದ ಹಾಡು) **ರಾಗ: ಆನಂದಬೈರವಿ–ಆದಿತಾಳ**

ಚಂದಣದಾ ಬೊಂಬಕ್ಕ। ಗಂಧಾವ ತೇಯ್ಯೋಳೇ। ಗುಂಡು ಗುಲುಗಂಜೀ ಮುಡಿಯೋಳೇ ॥2ಸಾರಿ॥ ಬೊಂಬಕ್ಕ ಬೊಂಬೆ ಬಾ ಹಸೆಗೆ ಕರೆದರೂ॥1॥ ದೊಂಬರ ಮನೆಯೊಳಗುಟ್ಟೀ। ಅಂಗಳಕೆ ಬಾರಳೂ ಮುಂಬಾಗಿಲ ಗುರುತಾ ಅರಿಯಾಳು॥2ಸಾರಿ॥ ಬೊಂಬಕ್ಕ ಬೊಂಬೆ ಬಾ ಹಸೆಗೆ ಕರೆದಾರೂ॥2॥ ಕಣ್ಣುಂಟು ಕಾಣಳೂ। ಕಿವಿಯುಂಟು ಕೇಳಳೂ। ಮೂಗುಂಟು ಕಂಪು ಅರಿಯಾಳು॥2ಸಾರಿ॥ ಬೊಂಬಕ್ಕ ಬೊಂಬೆ ಬಾ ಹಸೆಗೇ ಕರೆದಾರು॥3॥

ಆಶ್ವಯುಜ ಶುದ್ಧ ಮಾನವಮಿ ಬರಲೆಂದು **ರಾಗ: ಆನಂದಭೈರವಿ**

ಆಶ್ವಯುಜ ಶುದ್ಧ ಮಾನವಮಿ ಬರಲೆಂದು। ಶಾಶ್ವತದಿ ಹರಸಿದೆವು ಬಾಲಕರು ಬಂದು॥ ಈಶ ನಿಮಗತ್ಯಧಿಕ ಸುಖವ ಕೊಡಲೆಂದು। ಲೇಸಾಗಿ ಹರಸಿದೆವು ಬಾಲಕರು ಬಂದು॥ ಧನಕನಕ ವಸ್ತುವಾಹನವಾಗಲೆಂದು। ಕನಕದಂಡಿಗೆ ಚೌರಿ ನಿಮಗಾಗಲೆಂದು॥ ದಿನದಿನಕೆ ರಾಜಮನ್ನಣೆ ಹೆಚ್ಚಲೆಂದು। ಅನುದಿನವು ಹರಸಿದೆವು ಬಾಲಕರು ಬಂದು॥ ಛತ್ರ ಚಾಮರ ತೇಜಿ ನಿಮಗಾಗಲೆಂದು। ಅರ್ಥಿಯಿಂ ಮಾಲಕುಮಿ ನಿಮಗೊಲಿಯಲೆಂದು। ಪುತ್ರ ಪೌತ್ರರು ನಿಮಗೆ ಹೆಚ್ಚುತಿರಲೆಂದು। ಅರ್ಥಿಯಿಂ ಹರಸಿದೆವು ಬಾಲಕರು ಬಂದು॥ ಮಳೆ ಬಂದು ಬೆಳೆ ಬೆಳೆದು ಧರೆ ತಣಿಯಲೆಂದು। ತಿಳಿಗೊಳಗಳುಕ್ಕಿ ತುರುಗಳು ಕರೆಯಲೆಂದು। ನಳಿನಮುಖಿಯರು ಸುಪುತ್ರರ ಪಡೆಯಲೆಂದು। ಇಳೆಯೊಳಗೆ ಹರಸಿದೆವು ಬಾಲಕರು

ಬಂದು॥ ಆಯುರಾರೋಗ್ಯಗಳು ನಿಮಗಾಗಲೆಂದು। ಶ್ರೇಯಸ್ಸು ಸಂಪತ್ತು ಹೆಚ್ಚುತಿರಲೆಂದು॥ ಆಯತದಿ ಜಗದೊಡೆಯ ನೊಲವಾಗಲೆಂದು। ಪ್ರಿಯದಿಂ ಹರಸಿದೆವು ಬಾಲಕರು ಬಂದು॥

ಅಮ್ಮ ಬಾರಮ್ಮ ನಮ್ಮ ತಾಯಿ ಬಾರಮ್ಮ ರಾಗ: ಶ್ರೀ-ಆದಿತಾಳ

ಅಮ್ಮ ಬಾರಮ್ಮ ನಮ್ಮ ತಾಯಿ ಬಾರಮ್ಮ। ಅಮ್ಮ ಬಾರಮ್ಮ ನಮ್ಮ ದೇವಿ ಬಾರಮ್ಮ॥ಪ॥ ಮೂರ್ಲೋಕದೊಡೆಯ ಶಿವನಾರಾಣಿ ಪಾರ್ವತಿದೇವಿಯೇ ಬಾರಮ್ಮ। ಗೆಜ್ಜೆಯ ನಾದದಿ ಘಲು ಘಲುರೆನ್ನುತಾ ಮಂಗಳಮಯಿ ನೀ ಬಾರಮ್ಮ॥1॥ ಗಜಮುಖ ಜನನಿಯೆ ಧೀರಗಂಭೀರಳೆ ಗಾಯತ್ರಿದೇವಿಯೆ ಬಾರಮ್ಮ। ಅಂಬಾ ಭವಾನಿ ತುಳಜಾ ಭವಾನಿ ಗಂಗಾಭವಾನಿಯೇ ಬಾರಮ್ಮ ॥2॥ ಶಂಕರ ಸ್ಥಾಪಿತೆ ಶ್ರೀಚಕ್ರಪೂಜಿತೆ ಶಾರದಾದೇವಿಯೇ ಬಾರಮ್ಮ। ಶೃಂಗೇರಿಯಲ್ಲಿ ನಗುನಗುತಿರುವಾ ಭಾರತೀದೇವಿಯೆ ಬಾರಮ್ಮ॥3॥ ಖಡ್ಗಧಾರಿಣಿ ತ್ರಿಶೂಲಪಾಣಿ ಚಾಮುಂ- ಡೇಶ್ವರಿ ಬಾರಮ್ಮಾ। ರಾಜಧಿರಾಜರಿಂ ಪೂಜಿಸಲ್ಪಡುವ ರಾಜರಾಜೇಶ್ವರಿ ಬಾರಮ್ಮ ॥4॥ ಕಂಚಿ ಕಾಮಾಕ್ಷಿ ಮಧುರೆ ಮೀನಾಕ್ಷಿ ಕಾಶೀ ವಿಶಾಲಾಕ್ಷಿ ಬಾರಮ್ಮಾ। ಕಾಮಿತ ಫಲಗಳ ನೀಡುವಂಥ ಕರುಣಾಸಾಗರಿ ಬಾರಮ್ಮ॥5॥ ಜಪವನಾನರಿಯೆ ತಪವನಾನರಿಯೆ ಮೂಢಳ ಕರುಣಿಸಿ ಬಾರಮ್ಮ। ಮೂಜಗ ವಂದಿತೆ ಮುರಹರವಲ್ಲಭೆ ಮೂಕಾಂಬಿಕೆ ತಾಯಿಬಾರಮ್ಮ॥6॥ ಶ್ರೀ ಸಿರಿ ಲಕ್ಷ್ಮೀ ವರ ಸಿರಿಲಕ್ಷ್ಮೀ ಪ್ರಸನ್ನಲಕ್ಷ್ಮೀಯೆ ಬಾರಮ್ಮ। ಶ್ರಾವಣ ಮಾಸದೊಳ್ ಪೂಜಿಸಲ್ಪಡುವ ವರಮಹಾಲಕ್ಷ್ಮೀಯೇ ಬಾರಮ್ಮ॥7॥ ಶ್ರೀ ಸಿರಿ ಗೌರಿ ವರಸಿರಿ ಗೌರಿ ಮಂಗಳ ಗೌರಿಯೆ ಬಾರಮ್ಮ। ಭಾದ್ರಪದಮಾಸದೊಳ್ ಪೂಜಿಸಲ್ಪಡುವ ಸ್ವರ್ಣಗೌರಿಯೇ ಬಾರಮ್ಮ ॥8॥ ಮೀನಾಕ್ಷಿ ದೇವಿ ಕಾಮಾಕ್ಷಿದೇವಿ ಇಂದ್ರಾಕ್ಷಿ ದೇವಿಯೆಬಾರಮ್ಮ। ಮೈಸೂರು ಪುರದಲ್ಲಿ ನೆಲೆಯಾಗಿರುವ ಚಾಮುಂಡಿ ದೇವಿಯೆ ಬಾರಮ್ಮ॥9॥ ನವರಾತ್ರಿದೇವಿ ಮೂಲಸರಸ್ವತಿ ಅಷ್ಟಮಿ ದುರ್ಗಿಯೇ ಬಾರಮ್ಮ। ವಿಜಯದಶಮಿಯೋಳ್ ವಿಜಯಂಗೈಯುವ ವಿಜಯಲಕ್ಷ್ಮೀಯೇ ಬಾರಮ್ಮ॥10॥ ಮಂಗಳರೂಪಿಣಿ ಮಂಗಳದಾಯಿನಿ ಮಂಗಳ ಆರತಿ ಎತ್ತುವೆನಮ್ಮ। ಮಲ್ಲಿಗೆ ಹೂವುಗಳ ಮಾಲೆಯ ಮುಡಿಸಿ ಮುದದಲ್ಲಿ ಮಂಗಳ ಪಾಡುವೆನಮ್ಮ॥11॥

ಮಂಗಳಂ ಎನ್ನಿರೇ ಮಹದೇವಿಗೆ ರಾಗ: ಸಾವೇರಿ

ಮಂಗಳಂ ಎನ್ನಿರೇ ಮಹದೇವಿಗೆ ಜಯ ಮಂಗಳಂ ಎನ್ನಿರೆ ಮಹಾಲಕ್ಷ್ಮೀಗೆ॥ಪ॥ ಜನಕ ನಾಲಯದೊಳೆ ಸಿಕ್ಕಿ ಜಾನಕಿ ಎಂದೆನಿಸಿದೆ। ದುಷ್ಟ ರಾವಣನ ಶಿರವ ತೆಗೆಸಿದೆ। ವಿಶ್ವಾಸದಿಂದಲೀ ವಿಷ್ಣುಪತ್ನಿಯೆನಿಸಿದೆ। ಮತ್ತೆ ಲೋಕಕೆ ನೀನು ಪ್ರಖ್ಯಾತಿಯಾದೆ॥1॥ ಗಿರಿರಾಜನುದರದಿ ಜನಿಸಿ। ಗಿರಿಪುತ್ರಿಯೆಂದೆನಿಸೆದೆ। ಗಿರಿಮಧ್ಯದಲಿ ನಿಂತು ತಪವಗೈದೇ। ಗಿರಿಜೆ ಶಂಕರನೆಂಬೊ ನಾಮವ ಧರಿಸಿದೆ। ಜನನಿ ಜನಕರ ಮನೆಗೆ ಸಂತೋಷ ಪಡಿಸಿದೆ॥2॥ ದೃಪದೆಸುತೆಯಾಗಿನೀ ದ್ರೌಪದಿ ಎಂದೆನಿಸಿದೆ। ದುಷ್ಟ ಪೌಂಡ್ರಕನ ಎದೆಯ ಬಿರಿದೆ। ಸಿಟ್ಟಿನಲಿ ರಾಕ್ಷಸರ ಸಂಹಾರ ಮಾಡಿಸಿದೆ। ಮತ್ತೆ ಲೋಕಕೆ ನೀನು ಸ್ತುತ್ಯಾರ್ಹವಾದೇ॥3॥ ಶೃಂಗೇರಿ ಪೀಠದಲಿ ಶ್ರೀಚಕ್ರ ಮಧ್ಯದಲಿ। ಶೃಂಗಾರವಾಗಿ ಬಂದು ನೀ ನೆಲೆಸಿದೆ। ಸಂವಾದದಿಂದಲೇ ಶಂಕರಾಚಾರ್ಯರಿಗೊಲಿದೆ। ಸಂತೋಷವನೆ ಇತ್ತು ಶಾರದೆ ಎಂದೆನಿಸಿದೆ॥4॥ ಮಹಿಷಾಸುರನ ಕೊಂದು ಮಹಿಷೆ ಎಂದೆನಿಸಿದೆ। ಚಂಡಾಸುರನ ಕೊಂದು ಚಾಮುಂಡಿಯಾದೆ। ನಂದಿವಾಹನವೇರಿ ಆದಿಶಕ್ತಿಯು ಆದೆ। ದಂಡ ಖಡ್ಗ ಧರಿಸಿ ನೀ ಧರೆಯನುದ್ದರಿಸಿದೆ॥5॥ ರಕ್ತ ಬೀಜಾಸುರನ ಯುಕ್ತಿಯಲಿ ಸಂಹರಿಸಿದೆ। ಹತ್ತು ಯೋಜನಕೆ ನಾಲಿಗೆಯ ಚಾಚೀ। ವಿಸ್ತಾರವಾಗೀ ಕಥೆಯ ಹೇಳಿ ಕೇಳ್ದವರಿಗೆ। ವಿಷ್ಣುಸಾಯುಜ್ಯದ ಪದವಿಯನೆ ಕೊಡುವೆ॥6॥

ಆರಿಗೆ ವಧುವಾದೆ ಅಂಬುಜಾಕ್ಷಿ ರಾಗ: ಕೇದಾರ-ಆದಿತಾಳ

ಆರಿಗೆ ವಧುವಾದೆ ಅಂಬುಜಾಕ್ಷಿ। ಕ್ಷೀರಾಬ್ಧಿ ಕನ್ನಿಕೆ ಶ್ರೀಮಹಾಲಕುಮಿ॥ಪ॥ ಶರಧಿ ಬಂಧನರಾಮ ಚಂದ್ರ ಮೂರುತಿಗೋ। ಪರಮಾತ್ಮ ಶ್ರೀ ಅನಂತ ಪದ್ಮನಾಭನಿಗೋ। ಸರಸಿಜನಾಭ ಜನಾರ್ಧನ ಮೂರುತಿಗೊ ಎರಡು ಹೊಳೆಯ ರಂಗ ಪಟ್ಟಣವಾಸಗೋ॥1॥ ಚೆಲುವ ಬೇಲೂರ ಚೆನ್ನಿಗ ರಾಯನಿಗೋ। ಕೆಳದಿ ಹೇಳುಡುಪಿಯ ಕೃಷ್ಣ

ರಾಯನಿಗೋ।। ಇಳೆಯೊಳು ಪಂಢರಪುರ ನಿಲಯ ವಿಠಲೇಶಗೋ।। ನಳಿನಾಕ್ಷಿ ಹೇಳು ಬದರಿ ನಾರಾಯಣಗೋ।।2।। ಮಲಯಜ ಗಂಧಿ ಬಿಂದು ಮಾಧವ ರಾಯಗೋ। ಸುಲಭದ ವರ ಪುರುಷೋತ್ತಮನಿಗೋ। ಫಲದಾಯಕ ನಿತ್ಯ ಮಂಗಳ ನಾಯಕಗೋ। ಚೆಲುವೆ ನಾಚದೆ ಪೇಳು ಶ್ರೀವೆಂಕಟೇಶನಿಗೋ।।3।। ವಾಸವಾರ್ಚಿತ ಕಂಚೀ ವರದರಾಜ ಮೂರುತಿಗೋ। ಅಸುರಾರಿ ಶ್ರೀಮುಷ್ಣದಾದಿ ವರಾಹನಿಗೋ। ಶೇಷಶಾಯಿಯಾದ ಶ್ರೀರಂಗನಾಯಕನಿಗೋ। ಸಾಸಿರ ನಾಮದೊಡೆಯ ಅಳಗಿರೀಶಗೋ।।4।। ಶರಣಾಗತರ ಪೊರೆವ ಶಾರ್ಙ್ಗಪಾಣಿಗೋ। ವರಗಳೀವ ಶ್ರೀನಿವಾಸ ಮೂರುತಿಗೋ। ಕುರುಕುಲಾಂತಕ ರಾಜಗೋಪಾಲ ಮೂರುತಿಗೋ। ಸ್ಥಿರವಾದ ಪುರಂದರ ವಿಠಲರಾಯನಿಗೋ।।5।।

ಏನು ಧನ್ಯಳೋ ಲಕುಮಿ — ರಾಗ: ತೋಡಿ-ರೂಪಕತಾಳ

ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೋ।।ಪ।। ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು।।ಅ.ಪ।। ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ। ಸಾಟಿಯಿಲ್ಲದೆ ಪೂರ್ಣ ಗುಣಳು ಶ್ರೇಷ್ಠವಾಗಿ ಮಾಡುತಿಹಳು।।1।। ಛತ್ರ ಚಾಮರ ವ್ಯಜನ ಪರ್ಯಂಕ ಪಾತ್ರ ರೂಪದಲ್ಲಿ ನಿಂತು। ಚಿತ್ರ ಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳು।।2।। ಸರ್ವ ಸ್ಥಳದಿ ವ್ಯಾಪ್ತನಾದ ಸರ್ವದೋಷ ರಹಿತನಾದ। ಗರುಡಗಮನನಾದ ಪುರಂದರವಿಠಲನ್ನ ಸೇವಿಸುವಳು।।3।।

ಗಿರೀಂದ್ರ ಕನ್ಯಾಕುಮಾರಿ (ಆರತಿ)

ಗಿರೀಂದ್ರ ಕನ್ಯಾಕುಮಾರಿ ಗೌರಿಗೆ ಆರತೀಯನು। ಬೆಳಗಿರೆ ಮುತ್ತಿನ ಆರತೀಯನು ನಾರಿಯರೇ।।ಪ।। ದಕ್ಷಕುಮಾರಿಗೂ ಲಕ್ಷ್ಮಣವಂತೆಗೂ ಆರತೀಯನು। ಬೆಳಗಿರೆ ಪಚ್ಚೆಯ ಆರತೀಯನು ನಾರಿಯರೇ।।1।। ಶ್ರೀರಾಮಚಂದ್ರಗೂ ಸೀತೆಯ ಕಾಂತಗೂ ಆರತೀಯನು ಬೆಳಗಿರೆ ರತ್ನದ ಆರತೀಯನು।।ನಾರೀಯರೇ।।2।। ಅಂಬಿಕೆ ಅರಸಗೂ ಶಂಭು ಪ್ರಿಯಳಿಗೂ ಆರತೀಯನು। ಬೆಳಗಿರೆ ವಜ್ರದ ಆರತೀಯು ನಾರಿಯರೇ।।3।।

ವರವನ್ನು ನೀಡೆ ಕರುಣದಿ ನೋಡೆ

ವರವನು ನೀಡೆ ಕರುಣದಿ ನೋಡೆ। ಭರದಿ ಕಾಪಾಡೇ ತರುಣೇಂದು ಚೂಡೇ।।ಪ।। ಮನದಲ್ಲಿ ನಾನು ನೆನೆದಿಹುದನ್ನು। ಘನವಾಗಿ ನೀಡಿನ್ನು ಅನುಮಾನವೇನು।।1।। ಮರುಗಕೇತಕಿ ನವಸುರಗಿಪಾಟಲಿಸುಮ। ಇರುವಂತಿಗೆ ಪಾದರಿಸುರಪಾರಿಜಾತವ।।2।। ಪಕ್ಷಿವಾಹನ ಸೋದರಿ ರಕ್ಷಿಸೆನ್ನ ಶಂಕರಿ। ದಕ್ಷದ್ವೈರಿಸುಂದರಿ ಅಕ್ಷಯತಿಥಿಯಗೌರಿ।।3।।

ಗಿರಿರಾಜ ಸಂಭವೆ ಪರಿಪೂರ್ಣ ವೈಭವೆ (ದೇವಿಯಲ್ಲಿ ಪ್ರಸಾದಬೇಡುವಹಾಡು)

ಗಿರಿರಾಜ ಸಂಭವೆ ಪರಿಪೂರ್ಣ ವೈಭವೆ। ಕರುಣೆಸುನೀನವಪರಿಮಳ ಸುಮವ।।ಪ।। ಪುರಹರ ಸುಂದರಿ ನರಹರಿ ಸೋದರಿ। ವರಗುಣ ಮಂಜರಿ ಗಿರಿಜಾತೆ ಶಂಕರಿ।।1।। ಇಂದೀವರಾಂಬಿಕೆ ಸುಂದರಕಾಳಿಕೆ। ವಂದಿಪೇ ನೀಡು ನೀ ಮಂದಾರಸುಮವ।।2।। ಈಶವಿನೋದಿನಿ ಕ್ಲೇಶವಿನಾಶಿನಿ। ಪಾಶವಿಮೋಚಿನಿ ಶ್ರೀಶೈಲವಾಸಿನಿ।।3।।

ಜಯಂತೀ ಮಂಗಲಾ ಕಾಲೀ (ದೇವಿ ಸ್ತೋತ್ರ)

ಜಯಂತೀ ಮಂಗಲಾ ಕಾಲೀ ಭದ್ರಕಾಲೀ ಕಪಾಲಿನಿ। ದುರ್ಗಾ ಕ್ಷಮಾ ಶಿವಧಾತ್ರೀ ಸ್ವಹಾಸ್ವಧಾ ನಮೋಸ್ತುತೇ।।

ಅಪರಾಧ ಮೋಠೆ ರಾತ್ರಂದಿನ (ಆರತಿಯ ನಂತರ ಹೇಳಬೇಕಾದ ಸ್ತೋತ್ರ-ಮರಾಠಿ)

ಅಪರಾಧ ಮೋಠೆ ರಾತ್ರಂದಿನ। ಕೋಟಿಕೋಟಿ ಘಡಲೇ ಹಾಸೂನ। ಸಮ ಜೂನೀ ಲೇಕರು ಅಜಾಣ। ದೇವಿ ಮಾತೇ ಕ್ಷಮಾಕರಿ।। ಸಕಲಹಿಪಾಪೆ ದಗ್ಧಹೋವೋ।ದಾರಿದ್ರ್ಯ ದುಃಖ ದೂರಜಾವೋ। ಸುಖಸಂಪತ್ತಿ ಘರಿಯೇವೋ। ಪುಣ್ಯಲಾಭೋ ದರ್ಶನೇ।। ಆರೋಗ್ಯರೂಪ ಜಯದೇಈ। ಆಯ್ಯುಷ್ಯಯಶದೇ ಮಾಜೆ ಆಯಿ। ಪುತ್ರ ಪೌತ್ರ ಧನ

ದೌಲತ ದೆ ಈ। ಪೂರ್ಣ ಕರಿಮಮ ಕಾಮನಾ।। ಜಾತೋಮಿ ಜೆಥೆಜ್ರೆಧೆ। ಸನ್ನಿಧ ಅಸಾವೀಸ ತೂತೆಥೆ। ನಿಮಿತ್ತ ಮೀಮಹಸ್ತೆ। ತೂಚಿಕಾರ್ಯಾಕರಾವೆ।। ಜನ್ಮ ಮೃತ್ಯೂಜಾನಕೋ ಯಾತನಾ। ಜೀವನ ಜಾವೋ ದೈನ್ಯಾವಿನಾ। ಹೀಚಮಾಝೀ ಅಸೆ ಪ್ರಾರ್ಥನಾ। ದೇವಿಮಾತೆ ತವ ಚರಣೀ।।

❖ ❖ ❖

ಲಕ್ಷ್ಮೀಪೂಜೆ

ಭಾಗ್ಯದ ಲಕ್ಷ್ಮೀ ಮನೆಗೆ ಬಂದಳು **ರಾಗ:ಮೋಹನ, ತಾಳ-ಆದಿ**

ಭಾಗ್ಯದ ಲಕ್ಷ್ಮೀ ಮನೆಗೆ ಬಂದಳು ಬಾಗಿಲು ತೆರೆಯಿರೆ। ಕಲಶ ಕನ್ನಡಿ ಹಿಡಿದು ಅವಳ ಎದುರುಗೊಳ್ಳಿರೇ।। ಸೌಭಾಗ್ಯದ ಲಕ್ಷ್ಮೀ।।ಪ।। ನಡೆಯ ಮುಡಿಯಹಾಸಿ ಬೇಗ ಕರೆದು ತನ್ನಿರೇ। ಒಡನೆ ಹಸೆಗೆ ಕರೆದು ತಂದು ಪೂಜೆಯಮಾಡಿರೇ।। ಕಾಮಧೇನು ಬಂದಳೆಂದು ಸ್ತುತಿಯ ಮಾಡಿರೇ।। ಕಲಶ ಕನ್ನಡಿ ಹಿಡಿದು ಅವಳ ಎದುರುಗೊಳ್ಳಿರೇ।।1।। ಮರುಗ ಮಲ್ಲಿಗೆ ಜಾಜಿ ಸಂಪಿಗೆ ಮಘಮಘಿಪ ಹೂವುಗಳಲ್ಲಿ।। ಪೂಜೆಯಗ್ಯುದ್ದು ವರವ ಬೇಡಿರೇ ನಿರುತಧ್ಯಾನ ಮಾಡಿರೇ। ಕಲ್ಪವೃಕ್ಷ ಬಂದಾಳೆಂದು ಸ್ತುತಿಯ ಮಾಡಿರೇ। ಕಳಶಕನ್ನಡಿ ಹಿಡಿದು ಅವಳ ಎದುರುಗೊಳ್ಳಿರೇ।।2।।

ಪಾಲಯಮಾಂ ಕೊಲ್ಲಾಪುರವಾಸಿನಿ **ರಾಗ: ಆರಭಿ**

ಪಾಲಯಮಾಂ ಕೊಲ್ಲಾಪುರವಾಸಿನಿ। ನಳಿನದಳನಯನೆ ವಿಮಲೇ ಕಮಲೇ।।ಪ।। ಸುಲಲಿತ ಕರಪಲ್ಲವನುತ ಕಮಲೇ। ವಿಲಸಿತ ಲೋಚನೆ ಕುಂಜವಿಲೋಲೇ।।ಅ.ಪ.।। ಕಮಲಾಲಯೇ ಕಲ್ಮಷ ವಿದೂರೆ। ಕಮಲನಯನೇ ಕಮಲೇಶ ಮೋಹಿತೆ। ಕಮಲನಾಭ ಹೃತ್ಕಮಲ ವಿಹಾರಿಣಿ। ಕಮಲಾಸನ ಜನನಿ ಭಕ್ತಾಘನಿವಾರಿಣಿ।।ಚರಣ।।

ನಿತ್ಯಮುಕ್ತಳೆ ನಿರ್ವಿಕಾರಳೆ

ನಿತ್ಯಮುಕ್ತಳೆ ನಿರ್ವಿಕಾರಳೆ। ನಿತ್ಯ ಸುಖ ಸಂಪೂರ್ಣೇ ನಿತ್ಯಾನಿತ್ಯ ಜಗದಾಧಾರೆ ಮುಕ್ತಾಮುಕ್ತ ಗುಣವಿನುತೆ। ಚಿತ್ತಯಿಸು ಬಿನ್ನಪವ ಶ್ರೀಪುರುಷೋತ್ತಮನ ವಕ್ಷೋನಿವಾಸಿನಿ। ಭೃತ್ಯವತ್ಸಳೆ ಕಾಯೆ ತ್ರಿಜಗನ್ಮಾತೆ ವಿಖ್ಯಾತೆ।।

ಓಂ ಸರ್ವಮಂಗಳ ಮಾಂಗಲ್ಯೇ

ಓಂ ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ। ಶರಣ್ಯೇ ತ್ರಂಬಕೇ ಗೌರಿ ನಾರಾಯಣಿ ನಮೋಸ್ತುತೇ।। ಸೃಷ್ಟಿ ಸ್ಥಿತಿ ವಿನಾಶಾನಾಂ ಶಕ್ತಿ ಭೂತೇ ಸನಾತನೀ। ಗುಣಾಶ್ರಯೇ ಗುಣಮಯೇ ನಾರಾಯಣಿ ನಮೋಸ್ತುತೇ।। ಶರಣಾಗತ ದೀನಾರ್ಥ ಪರಿತ್ರಾಣ ಪರಾಯಣೇ। ಸರ್ವಸ್ಯಾರ್ತಿ ಹರೇ ದೇವಿ ನಾರಾಯಣಿ ನಮೋಸ್ತುತೇ।। ಜಯ ನಾರಾಯಣಿ ನಮೋಸ್ತುತೇ।।

ಪಾಲಿಸು ಪದಮಾಲಯೇ ನೀನೇ ಗತಿ

ಪಾಲಿಸು ಪದುಮಾಲಯೇ ನೀನೇ ಗತಿ।।ಪ।। ಬಾಲಕನು ತಾನಾಗಿ ಗೋಪಿಗೆ। ಲೀಲೆಯಿಂದಲಿ ನಂದಗೋಕುಲ। ಬಾಲೆಯರ ಮೋಹಿಸುತ ಅಸುರರ। ಕಾಲನೆನಿಸಿದ ಬಾಲಕನ ಪ್ರಿಯೆ।।ಅ.ಪ।। ಅನ್ಯರ ನೆನೆಯ ಲೊಲ್ಲೆ ನಿನ್ನಯ ಪಾದ।ವನ್ನು ನಂಬಿದೆ ನೀ ಬಲ್ಲೆ। ತಡಮಾಡದೆಲೆ।। ಚಿಣ್ಣ ಕರೆಯಲು ಘನ್ನಮಹಿಮನು। ಉನ್ನತದ ರೂಪಿನಲಿ ಗುಣ। ಸಂಪನ್ನ ರಕ್ಕಸನನ್ನು ಸೀಳಿದ। ಪನ್ನಗಾದ್ರಿ ನಿವಾಸ ಹರಿಪ್ರಿಯೆ।।1।। ಅರಿಯದ ತರಳನೆಂದು। ಶ್ರೀಪತಿ ಸತಿ। ಕರುಣದಿಸಲಹೆ ಬಂದು। ಕರುಣಾ ಸಿಂಧು।। ಸರಸಿಜಾಸನರುದ್ರರೀರ್ವರ। ವರದಿ ಮೂರ್ಖನು ಸುರರ ಬಾದಿಸೆ। ಹರಿವರರ ದಂಡೆತ್ತಿ ಬಹುಮುಖ। ದುರುಳನಾಶಿರ। ತರಿದವನಪ್ರಿಯೆ।।2।। ಅಜಮನಸಿಜ ಜನನೀ। ಅಂಬುಜ ಪಾಣೀ।

ಭುಜಗಸನ್ನಿಭವೇಣಿ। ನಿತ್ಯಕಲ್ಯಾಣಿ।। ಕುಜನ ಮರ್ಧನ ವಿಜಯವಿಠಲನ। ಭಜಿಸಿ ಪಾಡುತ ಭಕ್ತಕೂಟದ। ನಿಜದಿ ಸಲಹುವನೆಂಬ ಬಿರುದುಳ್ಳ। ವಿಜಯಸಾರಥಿ ವಿಶ್ವಂಭರ ಪ್ರಿಯೆ।।3।।

ಕ್ಷೀರಾಬ್ಧಿಕನ್ನಿಕೆ ಶ್ರೀಮಹಾಲಕ್ಷ್ಮೀ

ಕ್ಷೀರಾಬ್ಧಿಕನ್ನಿಕೆ ಶ್ರೀಮಹಾಲಕ್ಷ್ಮೀ। ಯಾರಿಗೇ ವಧುವಾಗುವೇ।।ಪ।। ಶರಧಿ ಬಂಧನ ಶ್ರೀರಾಮಚಂದ್ರ ಮೂರುತಿಗೋ। ಪರಮಾತ್ಮ ಅನಂತ ಪದ್ಮನಾಭನಿಗೋ। ಸರಸಿಜ ನಾಭ ಶ್ರೀ ಜನಾರ್ಧನ ಮೂರ್ತಿಗೋ। ಉಭಯ ಕಾವೇರಿ ರಂಗನ ಪಟ್ಟದರಸನಿಗೋ।।1।। ಚೆಲುವ ಬೇಲೂರ ಚನ್ನಿಗರಾಯನಿಗೋ। ಕೆಳದಿ ಹೇಳೇ ಉಡುಪಿ ಕೃಷ್ಣರಾಯನಿಗೋ। ಇಳೆಯೊಳು ಪಾಂಡುರಂಗ ವಿಠಲರಾಯನಿಗೋ। ನಳಿನಾಕ್ಷಿ ಹೇಳಮ್ಮ ಬದರಿ ನಾರಾಯಣಗೋ।।2।। ಮಲಯಜ ಗಂಧಿ ಬಿಂದು ಮಾಧವರಾಯನಿಗೋ। ಸುಲಭದೇವರು ಪುರುಷೋತ್ತಮಗೋ। ಫಲದಾಯಕ ನಿತ್ಯ ಮಂಗಳ ನಾಯಕಗೋ। ಚೆಲುವೆ ನಾಚದೆ ಪೇಳೆ ಶ್ರೀವೆಂಕಟೇಶಗೋ।।3।। ವಾಸವಾರ್ಚಿತ ಕಂಚಿ ವರದ ರಾಜನಿಗೋ। ಅಸುರಾರಿ ಶ್ರೀ ಮುಷ್ಣದಾದಿ ವರಹನಿಗೋ। ಶೇಷಶಾಯಿ ಯಾದ ಶ್ರೀಮನ್ನಾರಾಯಣಗೋ। ಸಾಸಿರ ನಾಮದ ಒಡೆಯ ಅಳಗಿರೀಶ ನಿಗೋ।।4।। ಶರಣಾಗತ ವತ್ಸಲ ಸಾರಂಗ ಪಾಣಿಗೋ। ವರಗಳ ನೀವ ಶ್ರೀ ಶ್ರೀನಿವಾಸನಿಗೋ। ಕುರು ಕುಲಾಂತಕ ರಾಜಗೋಪಾಲ ಮೂರುತಿಗೋ। ಸ್ಥಿರರಾಗಿ ಪುರಂಧರ ವಿಠಲರಾಯ ನಿಗೋ।।5।।

ಸುಮನಸವಂದಿತೆ ಸುಂದರಿ(ಅಷ್ಟಲಕ್ಷ್ಮೀ ಸ್ತೋತ್ರ) ರಾಗ: ಆನಂದಭೈರವಿ-ಛಾಪುತಾಳ

ಸುಮನಸವಂದಿತೆ ಸುಂದರಿ ಮಾಧವಿ ಚಂದ್ರಸಹೋದರಿ ಹೇಮಮಯೇ। ಮುನಿಗಣವಂದಿತೆ ಮೋಕ್ಷಪ್ರದಾಯಿನಿ ಮಂಜುಳಭಾಷಿಣೆ ವೇದನುತೆ। ಪಂಕಜವಾಸಿನಿ ದೇವಸುಪೂಜಿತೆ ಸದ್ಗುಣವರ್ಷಿಣೆ ಶಾಂತಯುತೇ। ಜಯಜಯ ಹೇ ಮಧುಸೂದನ ಕಾಮಿನಿ ಆದಿಲಕ್ಷ್ಮೀ ಸದಾಪಾಲಯಮಾಂ।।1।। ಅಯಿಕಲಿ ಕಲ್ಮಷನಾಶಿನಿ ಕಾಮಿನಿ ವೈದಿಕರೂಪಿಣೆ ವೇದಮಯೇ। ಕ್ಷೀರಸಮುದ್ಭವ ಮಂಗಳರೂಪಿಣೆ ಮಂತ್ರನಿವಾಸಿನಿ ಮಂತ್ರನುತೇ। ಮಂಗಳ ದಾಯಿನಿ ಅಂಬುಜ ವಾಸಿನಿ ದೇವಗಣಾಶ್ರಿತ ಪಾದಯುತೇ। ಜಯಜಯ ಹೇ ಮಧುಸೂದನ ಕಾಮಿನಿ ಧಾನ್ಯಲಕ್ಷ್ಮೀ ಸದಾ ಪಾಲಯಮಾಂ।।2।। ಜಯವರವರ್ಷಿನಿ ವೈಷ್ಣವಿ ಭಾರ್ಗವಿ। ಮಂತ್ರ ಸ್ವರೂಪಿಣೆ ಮಂತ್ರಮಯೇ। ಸುರಗಣಪೂಜಿತೆ ಶೀಘ್ರಫಲಪ್ರದೆ ಜ್ಞಾನವಿಕಾಸಿನಿ ಶಾಸ್ತ್ರನುತೆ। ಭವಭಯಹಾರಿಣೆ ಪಾಪವಿಮೋಚನಿ ಸಾಧುಜನಾಶ್ರಿತ ಪಾದಯುತೇ। ಜಯಜಯ ಹೇ ಮಧುಸೂದನ ಕಾಮಿನಿ ಧೈರ್ಯಲಕ್ಷ್ಮೀ ಸದಾ ಪಾಲಯಮಾಂ।।3।। ಜಯಜಯ ದುರ್ಗತಿ ನಾಶಿನಿ ಕಾಮಿನಿ ಸರ್ವಫಲಪ್ರದೇ ಶಾಸ್ತ್ರನುತೇ। ರಥಗಜತುರಗಪದಾತಿಸಮಾವೃತ ಪರಿಜನಮಂಡಿತ ಲೋಕನುತೇ। ಹರಿಹರಬ್ರಹ್ಮ ಸುಪೂಜಿತ ಸೇವಿತ ತಾಪನಿವಾರಿಣೆ ಪಾದಯುತೇ। ಜಯಜಯ ಹೇ ಮಧು ಸೂದನ ಕಾಮಿನಿ ಗಜಲಕ್ಷ್ಮೀ ರೂಪಿಣೆ ಸದಾ ಪಾಲಯಮಾಂ।।4।। ಅಯಿ ಗಜವಾಹಿನಿ ಮೋಹಿನಿ ಚಕ್ರಿಣೆ ರಾಗವಿವರ್ಧಿನಿ ಜ್ಞಾನಮಯೇ। ಗುಣಗಣವಾರಿಧಿ ಲೋಕಹಿತೈಷಿಣೆ ಸ್ವರಸಪ್ತಭೂಷಿಣೆ ಗಾನನುತೇ। ಸಕಲ ಸುರಾಸುರ ದೈವ ಮುನೀಶ್ವರ ಮಾನವವಂದಿತೆ ಪಾದಯುತೇ। ಜಯಜಯ ಹೇ ಮಧುಸೂದನ ಕಾಮಿನಿ ಸಂತಾನಲಕ್ಷ್ಮೀ ಸದಾಪಾಲಯ-ಮಾಂ।।5।। ಜಯಕಮಲಾಸಿನಿ ಸದ್ಗತಿದಾಯಿನಿ ಜ್ಞಾನ ವಿಕಾಸಿನಿ ಗಾನಮಯೇ। ಅನುದಿನಮರ್ಚಿತ ಕುಂಕುಮನೂಪುರ ಭೂಷಿತ ವಾಸಿತ ವಾದ್ಯನುತೇ। ಕನಕಧಾರಾಸ್ತುತಿವೈಭವ ವಂದಿತೆ ಶಂಕರ ದೇಶಿಕ ಮಾನ್ಯಪದೇ। ಜಯಜಯ ಹೇ ಮಧುಸೂದನ ಕಾಮಿನಿ ವಿಜಯಲಕ್ಷ್ಮೀ ಸದಾಪಾಲಯಮಾಂ।।6।। ಪ್ರಣತ ಸುರೇಶ್ವರಿ ಭಾರತಿ ಭಾರ್ಗವಿ ಶೋಕವಿನಾಶಿನಿ ರತ್ನಮಯೇ। ಮಣಿಮಯಭೂಷಿತ ಕರ್ಣವಿಭೂಷಿಣೆ ಶಾಂತಿ ಸಮಾವೃತ ಹಾಸ್ಯಮುಖೇ। ನವನಿಧಿದಾಯಿನಿ ಕಲಿಮಲಹಾರಿಣೆ ಕಾಮಿತ ಫಲಪ್ರದ ಹಸ್ತಯುತೇ। ಜಯಜಯ ಹೇ ಮಧುಸೂದನ ಕಾಮಿನಿ ವಿದ್ಯಾಲಕ್ಷ್ಮೀ ಸದಾ ಪಾಲಯಮಾಂ ।।7।। ಧಿಮಿಧಿಮಿ ದಿಂಧಿಮಿ ದಿಂಧಿಮಿ ದಿಂಧಿಮಿ ದುಂದುಭಿನಾದ ಸುಪೂರ್ಣಮಯೇ। ಘಮ ಘಮ ಘಂ ಘಮ ಘಂ ಘಮ ಘಂ ಘಮ ಶಂಖನಿನಾದ ಸುವಾದ್ಯನುತೇ

ವೇದಪುರಾಣೇತಿಹಾಸ ಸುಪೂಜಿತೇ ವೈದಿಕ ಮಾರ್ಗಪ್ರದರ್ಶಯುತೇ। ಜಯಜಯ ಹೇ ಮಧೂಸೂದನ ಕಾಮಿನಿ ಧನಲಕ್ಷ್ಮೀ ರೂಪಿಣಿ ಸದಾಪಾಲಯಮಾಂ॥8॥ ಓಂ ನಮೋ ನಾರಾಯಣಾಯ ಓಂ ಶ್ರೀ ಮಹಾಲಕ್ಷ್ಮ್ಯೈ ನಮಃ॥

ಪದುಮನಾಭನ ಹೃದಯವಿಹಾರಿಣಿ (ಆರತಿ) **ರಾಗ: ಖರಹರಪ್ರಿಯ**

ಪದುಮನಾಭನ ಹೃದಯವಿಹಾರಿಣಿ ಮುದದ ಮಹಾಲಕ್ಷ್ಮೀ ನಿನಗಾರತಿ। ತ್ರಿದಶಾಲಯದೊಳು ಹದುಳವ ನೆಲೆಗೊಳಿಸಿದ। ಶ್ರೀ ಪುರುಷೋತ್ತಮ ನಿನಗಾರತಿ॥1॥ ಮನುಕುಲ ಹೃನ್ಮಣಿ ಖಲತಮ ದಿನಮಣಿ। ಧರಣಿಜ ವರದ ನಿನಗಾರತಿ। ವಿನುತಾಸುತ ಧೃತ ಸತ್ಯಧರ್ಮವ್ರತ। ಶರಣರ ಪೊರೆವನೆ ನಿನಗಾರತಿ॥2॥ ಸೆರೆಮನೆಯೊಳೆ ಹುಟ್ಟಿ ಸೆರೆಕಳೆವ ಧೀರಗೆ। ಅಳಲಿಗರಾಪ್ತಗೆ ಸೊಗದಾರತಿ। ಮುರಹರ ನರಕಾಂತಕನೆಂಬ ಬಿರುದಿನ। ಬಲ್ಲಹ ನಿನಗೆಮ್ಮ ಮುದದಾರತಿ॥3॥

ಅಂಗನೆಯರಾರತಿಯ ರಂಗನಾಯಕಿಗೆತ್ತಿದರು (ಆರತಿ)

ಅಂಗನೆಯರಾರತಿಯ ರಂಗನಾಯಕಿಗೆತ್ತಿದರು॥ಪ॥ ಕೋಕಿಲವಾಣಿಗೆ ಕಮಲಜ ರಾಣಿಗೆ। ಪನ್ನಗವೇಣಿಗೆ ಪದ್ಮನಾಭನ ಸತಿಗೆ। ನೀರಜ ನೇತ್ರೆಗೆ ನಿರ್ಮಲ ಗಾತ್ರೆಗೆ॥1॥ ದಾರಿದ್ರ್ಯನಾಶಿನಿಗೆ ಧರ್ಮರಾಯನ ಸತಿಗೆ॥ ಶೃಂಗಾರವಾಗಿರ್ಪ ಬಂಗಾರದ ತಟ್ಟೆಯೊಳ್। ಸಂಗೀತಪಾಡುತ ಮಂಗಳೆಗೀಗಲೆ॥2॥

ಓಂ ಜಯ ಜಯ ಮಹಾಲಕ್ಷ್ಮೀ (ಆರತಿ) **ರಾಗ: ಕುರಂಜಿ**

ಓಂ ಜಯ ಜಯ ಮಹಾಲಕ್ಷ್ಮೀ ಶುಭ ಮಂಗಳ ಶ್ರೀಲಕ್ಷ್ಮೀ। ಮಂಗಳ ಆರತಿ ಎತ್ತುವೆ ಮುದದಲಿ ಮಹಾ ಲಕ್ಷ್ಮೀ॥1॥ ಕ್ಷೀರಾಬ್ಧಿಯೊಳು ಜನಿಸಿ ಶ್ರೀಹರಿಯನು ನೀವರಿಸಿ। ಅಮ್ಮ ನಾರಾಯಣಿ ನೀನಾಗಿ ನಮ್ಮನ್ನು ಪೊರೆಯಮ್ಮ॥2॥ ಪ್ರಣವ ಸ್ವರೂಪವು ನೀನೆ ಓಂಕಾರವೂ ನೀನೆ। ಅಮ್ಮ ಅಂತರ್ಯಾಮಿ ನೀನೆ ಆಶ್ರಿತ ರಕ್ಷಕಳೇ॥3॥ ಕಂಚಿ ಕಾಮಾಕ್ಷಿಯು ನೀನೆ ಮಧುರೆ ಮೀನಾಕ್ಷಿಯು ನೀನೆ। ಕಾಶಿ ವಿಶಾಲಾಕ್ಷಿಯು ನೀನೆ ಮೈಸೂರು ಚಾಮುಂಡಿ॥4॥ ಶುಕ್ರವಾರದ ಶುಭದಿನ ಸಿರಿ ನಿನ್ನ ಪೂಜಿಪೆವು। ಅಮ್ಮ ಶಾಂತಿ ಸೌಭಾಗ್ಯವನಿತ್ತು ಸಕಲರ ಪೊರೆಯಮ್ಮ॥5॥ ತಾಯಿಯು ನೀನೆ ತಂದೆಯು ನೀನೆ। ಸದ್ಗುರು ನೀನಮ್ಮಾ। ನಿನ್ನ ಹೊರತು ನಮಗಾರು ಕಾಯುವರಿಲ್ಲಮ್ಮಾ॥6॥

❖ ❖ ❖

ಸರಸ್ವತಿ ಪೂಜೆ

ಏಳು ಶಾರದಾದೇವಿ (ಸುಪ್ರಭಾತ) **ರಾಗ: ಭೌಳಿ**

ಏಳು ಶಾರದಾದೇವಿ ಶೃಂಗೇರಿ ಸುಕುಮಾರಿ। ಸೂರ್ಯನಾ ಕಿರಣಗಳು ಮುಂಜಾನೆ ಮೂಡುತಿದೆ। ಏಳು ಭಕ್ತರ ನಿಧಿಯೆ ಏಳಮ್ಮ ತಾಯೆ ತವಸುಪ್ರಭಾತವು ನಿನಗೆ ಶ್ರೀ ಶಾರದಾಂಬೆ॥1॥ ತುಂಗಾತೀರದಿ ನೆಲೆಸಿರುವ ಶಾರದೆಯೆ। ಹಂಸ ವಾಹಿನಿಯೆ ಕಲ್ಯಾಣ ರೂಪಿಣಿಯೆ। ವೀಣಾಪಾಣಿಯೆ ಏಳಮ್ಮ ಸರಸ್ವತಿಯೆ। ತವಸುಪ್ರಭಾತವು ನಿನಗೆ ಶ್ರೀಶಾರದಾಂಬೆ॥2॥ ನವರಾತ್ರಿ ಪೂಜಿತಳೆ ಮೂಲ ಸರಸ್ವತಿಯೆ। ಪೀತಾಂಬರ ಧಾರಿಣಿಯೆ ಸರ್ವಾಭರಣ ಭೂಷಿತಳೆ। ವಿದ್ಯಾಧರಳೆ ವಿಶ್ವೇಶ್ವರಿಯೆ ಏಳಮ್ಮ। ತವಸುಪ್ರಭಾತವು ನಿನಗೆ ಶ್ರೀ ಶಾರದಾಂಬೆ॥3॥ ಶಂಕರ ಸ್ಥಾಪಿತಳೆ ಶ್ರೀ ಚಕ್ರ ಪೂಜಿತಳೆ। ಪ್ರಶಾಂತವದನಳೆ ಪರಮಾನಂದಳೆ। ವಿಶ್ವವನೆ ತೋರುವ ವಿಜಯಲಕ್ಷ್ಮಿಯೆ ಏಳು ಕುಕ್ಕೆ ಸ್ವಾಮಿಯ ಮಾತೆ ಶ್ರೀಶಾರದಾಂಬೆ ನಿನಗೆ ತವಸುಪ್ರಭಾತ॥4॥

ಚತುರ್ಮುಖ ಮುಖಾವಾಸಾಂ (ಧ್ಯಾನ ಶ್ಲೋಕ)

ಚತುರ್ಮುಖ ಮುಖಾವಾಸಾಂ ಮಾತೃಕಾಕ್ಷರ ರೂಪಿಣೀಂ। ಚತುರ್ಭುಜಾಂ ಶುಭ್ರವರ್ಣಾಂ ವೀಣಾವಾದನ

ತತ್ಪರಾಂ।। ಕಂಠ ಪುಸ್ತಕ ಹಸ್ತಾಢ್ಯಾಂ ಸರ್ವವಿದ್ಯಾ ಪ್ರದಾಯಿನೀಂ। ವಾಙ್ಮಯೀಂ ಸರ್ವ ಸಂಪೂಜ್ಯಾಂ ಶಾರದಾಂಬಾಂಭಜಾಮ್ಯಹಂ।।

ಚತುರ ವದನನ ರಾಣಿ

ಚತುರ ವದನನ ರಾಣಿ ಅತಿರೋ। ಹಿತಮಿಮಲ ವಿಜ್ಞಾನಿ ನಿಗಮಪ್ರ। ತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ।। ನುತಿಸಿ ಬೇಡುವೆ ಜನನಿ ಲಕ್ಷ್ಮೀ। ಪತಿಯ ಗುಣಗಳ ತುತಿಪುದಕೆ ಸ। ನ್ಮತಿಯ ಪಾಲಿಸಿ ನೆಲಸು ನೀ। ಮದ್ವದನ ಸದನದಲಿ।।

ವಂದಿಪೆನು ನಾನು ಶ್ರೀ ಶಾರದಾಂಬೆಗೆ **ರಾಗ: ಬೃಂದಾವನಿ, ಆದಿತಾಳ**

ವಂದಿಪೆನು ನಾನು ಶ್ರೀ ಶಾರದಾಂಬೆಗೆ। ಗಾನವಿಶಾರದೆಗೆ ವಿದ್ಯಾಧಿದೇವತೆಗೆ।।ಪ।। ಶೃಂಗೇರಿಯಲ್ಲಿರುವ ಸಂಗೀತ ಪ್ರಿಯಳಿಗೆ। ಶೃಂಗಾರ ಸಂಗೀತ ನೀಡುವ ದೇವತೆಗೆ।।1।। ಸುರನರ ದೇವತೆಗೆ ವಿದ್ಯಾಧಿದೇವತೆಗೆ। ಲೋಕವಿಖ್ಯಾತೆಗೆ ಬ್ರಹ್ಮನ ಸಂಪ್ರೀತೆಗೆ।।2।। ಬ್ರಹ್ಮನ ರಾಣಿಗೆ ಪನ್ನಗ ವೇಣಿಗೆ। ಪುಸ್ತಕ ಪಾಣಿಗೆ ಮಾಲಾಧಾರಿಣಿಗೆ।।3।। ಪರಿ ಪರಿ ವಿದ್ಯೆಗಳ ಕರೆಕರೆದು ನೀಡುವ। ಕರ್ಣಾನಂದ ಮಂಗಳ ಮೂರ್ತಿಗೆ।।4।।

ವಾಣಿ ಬ್ರಹ್ಮನ ರಾಣಿಯೆ **ರಾಗ: ಸಿಂಧುಭೈರವಿ–ಆದಿತಾಳ**

ವಾಣಿ ಬ್ರಹ್ಮನ ರಾಣಿಯೆ ಫಣಿವೇಣಿ ಪುಸ್ತಕಪಾಣಿಯೆ। ಜಾಣೆ ನಮಿಪೆ ಜ್ಞಾನ ಭಕುತಿಯಿಂ ವೀಣಾ ಪಾಣಿಯ ಚರಣಕೆ।।ಪ।। ಮಂದಮತಿಗಳು ಕರೆಯೆ ನಿನ್ನನು ಬಂದು ಮುದದಲಿ ಭಜಿಪೆವು। ಒಂದೆ ಮನದೊಳು ನಿಂದು ಬೇಡುವೆ ಮಂದಗಮನೆ ಮಯೂರಿಯೆ।।1।। ಮಲ್ಲೆ ಮಲ್ಲಿಗೆ ಮುಗುಳು ಸಂಪಿಗೆ ಜಾಜಿ ಕೇದಿಗೆ ಕಮಲದಿ। ಫುಲ್ಲಲೋಚನೆ ನಿನ್ನ ಪಾದವ ಮೆಲ್ಲನರ್ಚಿಸಿ ನಮಿಪೆವು।।2।। ನೀಲ ಕುಂತಳೆ ಲೋಲ ನೇತ್ರಳೆ ನೀಲ ನಾಟಕಧಾರಿಣಿ। ಕಾಲ ಸೂತ್ರಳೆ ಕೃಪೆಗೆ ಪಾತ್ರಳೆ ಕಮಲ ಸಂಭವನ ರಾಣಿಯೆ।।3।। ವಿದ್ಯಾದಾಯಿನಿ ವಿಧಿವಿಲಾಸಿನಿ ಶುಭ್ರ ವಸನ ವಿರಾಜಿನಿ। ಜ್ಞಾನದಾಯಿನಿ ವೇದವಾಹಿನಿ ಸರ್ವಲೋಕ ಸಂಪೂಜಿನಿ।।4।।

ಶುಭ್ರ ಕಮಲ ತುಷಾರ ಧವಳೇ

ಶುಭ್ರ ಕಮಲ ತುಷಾರ ಧವಳೇ ಶುಭ್ರ ವಸ್ತ್ರ ಸಮಾನ್ವಿತೇ। ಶ್ವೇತ ಪದ್ಮಾಸನ ವೀಣಾದಂಡ ಶೋಭಿತ ಪಾಣಿಯೇ।।ಪ।। ಬ್ರಹ್ಮ ವಿಷ್ಣು ಮಹೇಶ ವಂದಿತೇ। ಜಾಡ್ಯವನು ಕಳೆ ಭಗವತೀ। ನಿನ್ನಯಶವನು ಸ್ತುತಿಪೆ ಅನುದಿನ ದಾರಿತೋರೇ ಸರಸ್ವತಿ।।1।। ವೇದ ಸುಧಾಮಯಿ ಮಂದಾರ ಮಕರಂದ। ಸುಂದರ ಸೌಗಂಧ ಸೌಧಾಮಿನಿ। ನಾದೋಂಕಾರೆ ಮೋದ ಸಮೀರೇ। ವಂದಿಪೆ ಭಾರತಿ ಅನುದಿನದಿ।।2।।

ಶ್ರೀವಾಣಿ ಕಲ್ಯಾಣಿ ಗುಣಮಣಿ **ರಾಗ: ಅಭೇರಿ–ಆದಿತಾಳ**

ಶ್ರೀವಾಣಿ ಕಲ್ಯಾಣಿ ಗುಣಮಣಿ। ಲೋಕ ಜನನಿಗೆ ನಮಿಸುವೆವು।।ಪ।। ಕೋಕಿಲವಾಣಿ ಫಣಿಸಮ ವೇಣಿ। ವೀಣಾ ಪುಸ್ತಕ ಪಾಣಿಯೆ।।ಅ.ಪ.।। ಮಯೂರ ವಾಹನೆ ಮರಾಳ ಗಮನೆ ಸುರನರ ಕಿನ್ನರ ನತಚರಣೇ। ತೋಯಜ ನಯನೇ ಸರಸಿಜ ವದನೆ। ಭಾರತಿ ಶಂಕರಿ ನಮೋಸ್ತುತೇ।।1।। ಮಂದಮತಿಗಳಾದೆಮ್ಮಯ ಭಿನ್ನಪ ಅನುನೀಂ ಮನದೊಳು ದಯೆಗೈದು। ಕುಂದುಗಳೆಲ್ಲವ ಚಂದದಿ ಕಳೆಯುತ। ಇಂದುವದನೆ ಎನ್ನ ಪಾಲಿಪುದು।।2।। ವಿದ್ಯಾಧೀಶ್ವರಿ ವಿಧಿಪ್ರಾಣೇಶ್ವರಿ ವರದಾಭಯಕರಿ ಶಂಕರಿ। ವಿದ್ಯಾಬುದ್ಧಿಗಳನು ನೀ ಕರುಣಿಸಿ ಮುದ್ದು ಕುಮಾರಿಯೆ ರಕ್ಷಿಪುದು।।3।।

ನಾ ಸ್ತೋತ್ರವಾ ಗೈವೆ **ರಾಗ: ಹಮೀರ್‌ಕಲ್ಯಾಣಿ**

ನಾ ಸ್ತೋತ್ರವಾ ಗೈವೆ ಶ್ರೀ ಶಾರದಾಂಬೆಯನು। ದಾಸಾನುದಾಸಳನು ನೀ ಕ್ಷಮಿಸಿ ಕಾಪಾಡು।।ಪ।। ಕರದಲ್ಲಿ ವೀಣೆಯನು ಮಿಡಿಯುತ್ತ ಧ್ವನಿಮಾಡಿ। ಅರಿವೆಂಬ ಅಮೃತವನು ಸುರನರರಿಗೀಯುವಳ।।1।। ಸರಸಿಜಾಸನ ರಾಣಿ ಸರಸ್ವತಿಯೆ

ನಿನಗಿಂದು। ಶಿರಬಾಗಿ ನಮಿಸುವೆನು ಪೊರೆ ಎಂದು ಬೇಡುತ್ತ॥2॥ ವಿದ್ಯೆಗಳನು ಕೊಡು ಮಾತೆ ವಿದ್ಯಾದಾಯಕಿ ನೀನು। ಮುದ್ದು ಶಂಕರಾಚಾರ್ಯರಿಗೆ ಪದ್ಮದಾ ಮುಖ ತೋರೆ॥3॥ ಚರಣಕ್ಕೆ ನಾ ನಮಿಪೆ ಸರಸ್ವತಿಯೆ ಗೀರ್ವಾಣಿ। ಹರಿಸೆಮ್ಮ ದುಃಖಗಳ ಪೊರೆಯೆಂದು ಬೇಡುವೆನು॥4॥

ಮಾತೇ ಪಾಲಿಸೌ ಸರಸ್ವತಿ

ಮಾತೇ ಪಾಲಿಸೌ ಸರಸ್ವತಿ ಮತಿಯುತೆ। ಸುಗೀತೆ ವಿನೀತೆ ಹಿತೆ॥ಪ॥ ಸರಸಿಜಾತಭವ ರಮಣೀಮಣಿ। ಸುರಮುನಿಂದ್ರ ಪೋಷಿಣಿ ಶ್ರೀವಾಣಿ। ಪರಮ ಪಾವನೆ। ಪ್ರವೀಣೆ ಧೃತ ಮಣಿಮಾಲೆ। ವೀಣಾಪಾಣಿ॥1॥ ಕಮಲ ಲೋಚನೆ ಸುಮಕೋಮಲೆ। ನಮಿಪೆ ನಿನ್ನಪಾದಕೆ ಸುಶೀಲೆ। ಪ್ರೇಮದಿಂದ ಪಾಲಿಸು ಕಮನೀಯಲೋಲೇ। ಕರುಣಾಲವಾಲೆ॥2॥

ತಾಯಿ ಶಾರದೆ ಲೋಕಪೂಜಿತೆ

ತಾಯಿ ಶಾರದೆ ಲೋಕಪೂಜಿತೆ ಜ್ಞಾನದಾತೆ ನಮೋಸ್ತುತೇ। ಪ್ರೇಮದಿಂದಲಿ ಸಲಹುಮಾತೆ ನೀಡು ಸನ್ಮತಿ ಸೌಖ್ಯದಾತೆ॥ಪ॥ ಅಂಧಕಾರವ ಓಡಿಸು ಜ್ಞಾನ ಜ್ಯೋತಿಯ ಬೆಳಗಿಸು। ಹೃದಯ ಮಂದಿರದಲ್ಲಿ ನೆಲೆಸು। ಚಿಂತೆಯಾ ಅಳಿಸು ಶಾಂತಿಯಾ ಉಳಿಸು॥1॥ ನಿನ್ನ ಮಡಿಲಿನ ಮಕ್ಕಳಮ್ಮ। ನಿನ್ನ ನಂಬಿದ ಕಂದಗಳಮ್ಮ। ನಿನ್ನ ಕರುಣೆಯ ಬೆಳಕಲೆಮ್ಮ ಬಾಳನು ಬೆಳಗಮ್ಮ। ನಮ್ಮ ಕೋರಿಕೆ ಆಲಿಸಮ್ಮ॥2॥ ಒಳ್ಳೆ ಮಾತುಗಳಾಡಿಸು ಒಳ್ಳೆಕೆಲಸವ ಮಾಡಿಸು। ಒಳ್ಳೆ ದಾರಿಯಲ್ಲೆಮ್ಮ ನೆಡೆಸು ವಿದ್ಯೆಯಾ ಕಲಿಸು ಆಸೆ ಪೂರೈಸು ತಾಯಿ॥3॥

ಎಂಥ ಅಂದ ಎಂಥ ಚೆಂದ ಶಾರದಮ್ಮಾ — ರಾಗ: ಮಧ್ಯಮಾವತಿ

ಎಂಥ ಅಂದ ಎಂಥ ಚೆಂದ ಶಾರದಮ್ಮಾ। ನಿನ್ನ ನೋಡಲೆರಡು ಕಣ್ಣು ಸಾಲದಮ್ಮ॥ಪ॥ ಇನ್ನು ಇನ್ನೂ ನೋಡುವಾಸೆ ತುಂಬಿತಮ್ಮಾ। ಕೋಟಿ ಜನ್ಮ ಬರಲಿ ನನಗೆ ಸಾಲದಮ್ಮ॥ ಅಭಯ ಹಸ್ತ ನೋಡಿ ಜೀವ ಕುಣಿಯಿತಮ್ಮಾ। ನಿಮ್ಮ ಪಾದ ಕಮಲದಲ್ಲಿ ಶಿರವು ಬಾಗಿತಮ್ಮಾ॥1॥ ಎಂಥ ಶಕ್ತಿ ನಿನ್ನಲಿದೆಯೋ ಶಾರದಮ್ಮಾ। ನಿನ್ನ ನೋಡಿ ಹಾಡುವಾಸೆ ಈಗ ಬಂದಿತಮ್ಮ। ರತ್ನದಂಥ ಮಾತುಗಳನ್ನೇ ಆಡಿಸಮ್ಮಾ। ಒಳ್ಳೆ ರಾಗ ಭಾವ ಭಕ್ತಿ ತುಂಬಿ ಹಾಡಿಸಮ್ಮಾ॥2॥ ಅಲ್ಲಿ ಇಲ್ಲಿ ಓಡೋ ಮನಸು ನನ್ನದಮ್ಮಾ। ಬೇಗ ಬಂದು ನೆಲೆಸು ಇಲ್ಲಿ ಶಾರದಮ್ಮಾ॥ ಬೇರೆಯೇನು ಬೇಕುಯೆಂದು ಕೇಳೆನಮ್ಮಾ। ನಿಮ್ಮ ವೀಣೆ ತಂತಿ ಮಾಡಿ ನುಡಿಸು ಶಾರದಮ್ಮಾ॥3॥

ಶೃಂಗಪುರಾಧೀಶ್ವರಿ ಶಾರದೆ — ರಾಗ: ಕಲ್ಯಾಣಿ

ಶೃಂಗಪುರಾಧೀಶ್ವರಿ ಶಾರದೆ। ಶುಭಮಂಗಳೆ ಸರ್ವಾಭೀಷ್ಟಪ್ರದೆ॥ಪ॥ ಶಂಕರಸನ್ನುತೆ ಶ್ರೀಪದ್ಮ ಚರಣೆ। ಸಕಲ ಕಲಾ ವಿಶಾರದೆ ವರದೆ। ಸಲಹೆಮ್ಮನು ತಾಯೆ ಸಾಮಗಾನ ಪ್ರಿಯೆ॥ಅ.ಪ.॥ ಕರುಣಿಸೆಮ್ಮ ಶೃತಿಗತಿಗಳ ಮಾತೆ। ಕಮನೀಯ ಸಪ್ತಸ್ವರ ಸುಪೂಜಿತೆ। ಕಾವ್ಯಗಾನಕಲಾ ಸ್ವರೂಪಿಣಿ। ಕಾಮಿತದಾಯಿನಿ ಕಲ್ಯಾಣಿ ಜನನಿ॥1॥ ವಾರಿಜಾಸನನ ವೈಭವರಾಣಿ। ವಾಣಿ ವೀಣಾ ಪಾಣಿ। ರಾಣಿ ಪ್ರಶಾಂತ ರೂಪಿಣಿ ಪ್ರಪಂಚ ಜನನಿ। ಪನ್ನಗ ವೇಣಿ ಪೊರೆಯೆ ಕಲ್ಯಾಣಿ॥2॥

ಶ್ರೀ ಶಾರದಾ ಮಾತೆ — ರಾಗ: ಸಾರಂಗ-ಖಂಡಛಾಪುತಾಳ

ಶ್ರೀ ಶಾರದಾ ಮಾತೆ ಶ್ರೀ ಪಾವನಾ ಮೂರ್ತೆ। ಕಮಲ ಸಂಭವನ ಪ್ರೀತೆ ಕರವ ಜೋಡಿಸಿ ನಮಿಪೆ॥ಪ॥ ಸುಜನರಿಂ ವಂದಿತಳೆ ಸತ್ಯಲೋಕಪ್ರಿಯಳೆ। ಸಾಮಗಾನ ವಿಲೋಲೆ ಸರಸಿಜೋದ್ಭವನ ರಾಣಿ॥1॥ ಮಯೂರ ವಾಹನಳೆ ಮರಾಳ ಗಾಮಿನಿಯೆ। ಮುನಿಜನಾ ವಂದಿತಳೆ ಮಣಿವೆ ನಾನ್ ಸರಸ್ವತಿಯೆ॥2॥ ನಾರದಾರಾಧಿತಳೆ ನಾದ ಸರಸ್ವತಿ ಇವಳೆ। ನತಜನಾಶ್ರಿತಲೋಲೆ ನಮಿಪೆ ನಾನ್ ಶಾರದೆಯೆ॥3॥

ಸರಸೋತಿ ಎಂಬೋಳು — ರಾಗ: ಖರಹರಪ್ರಿಯ

ಸರಸೋತಿ ಎಂಬೋಳು ಸರುವಕ್ಕೆ ದೊಡ್ಡೋಳು। ಸ್ವರವ ಹಾಕ್ಯವ್ಳೆ ಐನೂರು-ವಜ್ರಾವ। ತಿರುಪಾಳಿ ಕುಣಿಕೆ ಕೊರಳಲ್ಲಿ॥

ಮುತ್ತು ಮಾಣಿಕ ಬೇಡ ಮತ್ತೆ ಸಂಪದ ಬೇಡ। ಸುತ್ತು ಕೋಟೆಯ ವೈಭವ ಬೇಡ-ನನ್ನವ್ವ। ಸುತ್ತೆಲ್ಲ ಜನಪದ ಹಾಡಿರಲಿ॥ ನಗ್ಗಾಲಮರದಡಿ ನಿದ್ರೆ ಮಾಡೋದ ಬಿಟ್ಟು। ಎಗ್ಗಿಲ್ದೆ ಬಂದೆ ನಿನ ಬಳಿಗೆ-ಸರಸೋತಿ। ಚಿಂದುಳ್ಳಿ ಹಾಡ ಕಲಿಸಮ್ಮ॥ ಏಳೆಲೇ ಮಾವೀನ ತಾಳಿನಲ್ಲಿರುವೋಳೆ। ತಾಳಾದ ಗತಿಗೆ ನಲಿಯೋಳೆ-ಸರಸೋತಿ। ನಾಲಿಗ್ಯಲ್ಲಕ್ಷರವ ನಿಲಿಸವ್ವ॥ ಹಟ್ಟೀಯ ಮನೆಯೋಳೆ ಪಟ್ಟೆದುಂಗುರದೋಳೆ। ಪಟ್ಟೆಯ ಸೀರೆ ನೆರಿಯೋಳೆ-ಸರಸೋತಿ। ಗುಟ್ಟಿನಲಿ ಮತಿಯ ಕಲಿಸವ್ವ॥ ಸರಸೀಯ ಬಳಿಯಲ್ಲಿ ಸರಸ ಮಾಡುವ ಹೆಣ್ಣೆ। ಆವಸರದಾಗೆ ಬಂದೆ ನಿನ್ನ ಬಳಿಗೆ ಸರಸೋತಿ। ಕೆಲಸಾ ಬಿಟ್ಟು ಹಾಡು ಕಲಿಸವ್ವ॥ ಹಡೆದವ್ವ ಸರಸೋತಿ ಬಾಗ್ಲಾಗೆ ಯಾಕ್ನಿಂತಿ। ತೋರ್ಸೇನು ಬಾರಾ ನಿನಗಿಂಬ-ನಮ್ಮನದ। ಜಗುಲಿ ಮ್ಯಾಗ ಒರಗವ್ವ॥

ಶ್ರೀ ಸರಸ್ವತೀ ನಮೋಸ್ತುತೇ — ರಾಗ: ಆರಭಿ–ರೂಪಕತಾಳ

ಶ್ರೀ ಸರಸ್ವತೀ ನಮೋಸ್ತುತೇ ವರದೇ ಪರದೇವತೇ॥ಪ॥ ಶ್ರೀಪತಿ ಗೌರೀಪತಿ, ಗುರುಗುಹ ವಿನುತೇ ವಿಧಿಯುವತೇ॥ಅ.ಪ॥ ವಾಸನಾತ್ರಯ ವಿವರ್ಜಿತ ವರಮುನಿಭಾವಿತ ಮೂರ್ತೇ ವಾಸವಾದ್ಯಖಿಲ ನಿರ್ಜರ ವರವಿತರಣ ಬಹು ಕೀರ್ತೇ। ದರ ಹಾಸಯುತ ಮುಖಾಂಬುರುಹೇ ಅದ್ಭುತ ಚರಣಾಂಬುರುಹೇ ಸಂಸಾರಭೀತ್ಯಾಪಹೇ ಸಕಲ ಮಂತ್ರಾಕ್ಷರಗುಹೇ॥ಚರಣ॥

ಮಾಮವತು ಶ್ರೀ ಸರಸ್ವತೀ — ರಾಗ: ಹಿಂದೋಳ–ಆದಿತಾಳ

ಮಾಮವತು ಶ್ರೀ ಸರಸ್ವತೀ ಕಾಮಕೋಟಿ ಪೀಠ ನಿವಾಸಿನಿ॥ಪ॥ ಕೋಮಲಕರ ಸರೋಜ ಧೃತವೀಣಾ ಸೀಮಾತೀತ ವರವಾಗ್ವಿಭೂಷಿಣಿ॥ಅ.ಪ.॥ ರಾಜಾಧಿರಾಜ ಪೂಜಿತ ಚರಣೆ ರಾಜೀವ ನಯನೆ ರಮಣೀಯ ವದನೆ ಸುಜನ ಮನೋರಥ ಪೂರಣ ಚತುರೆ ನಿಜಗಳ ಶೋಭಿತ ಮಣಿಮಯಹಾರೆ ಅಜಭವ ವಂದಿತ ವಾಸುದೇವ ಚರಣಾರ್ಪಿತ ಸಕಲ ವೇದಸಾರೆ ॥ಚರಣ॥

ಸರಸೀರುಹಾಸನ ಪ್ರಿಯೆ — ರಾಗ: ನಾಟ–ಆದಿತಾಳ

ಸರಸೀರುಹಾಸನ ಪ್ರಿಯೆ ಅಂಬಾ ಸದಾ ವೀಣಾ ಗಾನಪ್ರಿಯೆ ಸದಾನಂದ ಹೃದಯೇ ಮಣಿಸದಯೆ॥ಪ॥ ಶರಣಾಗತಂ ಮಾಮವ ಮಂಜುಳ ಚರಣ ಕಿಸಲಯೇ ಸನ್ಮೋದಿತ ಕವಿಜನ ಹೃದಯೆ ಸರೋಜ ನಿಲಯೆ ಮಣಿವಲಯೆ॥ಅ.ಪ॥ ಸರಸೀರುಹಾಕ್ಷಿಯುಗಳೆ ಅಂಬಾ ಶರಣಾಗತ ದೀನ ವತ್ಸಲೆ ಶರದಿಂದು ಸುಂದರ ವದನೆ ವಿಮಲೆ ಸರಸ್ವತೀ ಸಹಿತೆ ಶಿವನುತೆ ಗುಣಜಾಲೆ ಸತತಂ ವಿದ್ಯಾಲೋಲೆ ಸದಾ ಸುಶೀಲೆ ಸಾಮಜ ಕುಂಭಸ್ಥನ ಯುಗಳೆ ಧವಳೇ ಸಕಲ ಸಾಮ್ರಾಜ್ಯಪ್ರದ ಕರಧೃತ ಪುಸ್ತಕ ಶೀಲೇ॥ಚರಣ॥

ಸಾಮೇವಸತು ಜಿಹ್ವಾಯಾಂ

ಸಾಮೇವಸತು ಜಿಹ್ವಾಯಾಂ ವೀಣಾ ಪುಸ್ತಕ ಧಾರಿಣೀ। ಮುರಾರಿ ವಲ್ಲಭಾದೇವಿ ಸರ್ವಶುಕ್ಲಾ ಸರಸ್ವತೀ॥ ಸರಸ್ವತಿ ಮಹಾಭಾಗೇ ವಿದ್ಯೇ ಕಮಲಲೋಚನೇ। ವಿಶ್ವರೂಪೇ ವಿಶಾಲಾಕ್ಷಿ ವಿದ್ಯಾಂದೇಹಿ ನಮೋಸ್ತುತೆ॥ಶ್ವೇತ ಪದ್ಮಾಸನಾ ದೇವಿ ಶ್ವೇತ ಪುಷ್ಪೋಪ ಶೋಭಿತಾ। ಶ್ವೇತಾಂಬರಂ ಧರಂ ನಿತ್ಯಾ ಶ್ವೇತ ಗಂಧಾನುಲೇಪನಾ॥ ಶ್ವೇತಾಕ್ಷ ಸೂತ್ರ ಹಸ್ತಚ ಶ್ವೇತ ಚಂದನ ಚರ್ಚಿತಾ। ಶ್ವೇತ ವೀಣಾಧರಾ ಶುಭ್ರಾ ಶ್ವೇತಾಲಂಕಾರ ಭೂಷಿತಾ॥ ವಂದಿತಾ ಸಿದ್ಧ ಗಂಧರ್ವೈರರ್ಚಿತಾ ಸುರ ದಾನವೈ। ಪೂಜಿತಾ ಮುನಿಭಿಃ ಸರ್ವೈ ಋಷಿಭಿಃ ಸ್ತೂಯತೇ ಸದಾಂ॥

ಸರಸ್ವತಿ ಮಾಯಾದೃಷ್ಟೀ (ದ್ವಾದಶನಾಮ) — ರಾಗ: ಸರಸ್ವತಿ

ಸರಸ್ವತಿ ಮಾಯಾದೃಷ್ಟೀ। ವೀಣಾ ಪುಸ್ತಕ ಧಾರಿಣೀ। ಹಂಸವಾಹನೆ ಸಮಾಯುಕ್ತಂ। ವಿದ್ಯಾದಾನ ಕರೀಮಮ। ಪ್ರಥಮಂ

ಭಾರತೀನಾಮ। ದ್ವಿತೀಯಂ ಚ ಸರಸ್ವತಿ। ತೃತೀಯಂ ಶಾರದಾದೇವಿಂ। ಚತುರ್ಥಂ ಹಂಸವಾಹಿನೀಂ। ಪಂಚಮಂ ಜಗತ್ವೀಖ್ಯಾತ। ಷಷ್ಟ್ಯಾಂ ವಾಣೀಶ್ವರಿ ತಥಾ। ಕುಮಾರೀ ಸಪ್ತಮಂ ಪ್ರೋಕ್ತ। ಅಷ್ಟಮಂ ಬ್ರಹ್ಮಚಾರಿಣೀ। ನವಮಂ ಬುದ್ಧಿಧಾತ್ರೀಂಚ। ದಶಮಂ ವರದಾಯಿನೀ। ಏಕಾದಶಂ ಕ್ಷುದ್ರಘಂಟಾ। ದ್ವಾದಶಂ ಭುವನೇಶ್ವರೀ। ಬ್ರಾಹ್ಮೀದ್ವಾದಶನಾಮಾ। ನಿತ್ಯಂ ಸಂಧ್ಯಂ ಯಃ ಪಠೇನರಃ ಸರ್ವ ಸಿದ್ಧಿಕರೀ ತಸ್ಯ ಪ್ರಸನ್ನ ಪರಮೇಶ್ವರೀ। ಸಾಮೋವಸತು ಜಿಹ್ವಾಗ್ರೇ। ಬ್ರಹ್ಮರೂಪ ಸರಸ್ವತೀ॥

ವಾಗ್ವಾಣೀ ಭಾರತೀ (ಸರಸ್ವತಿ–ದ್ವಾದಶನಾಮ)

ವಾಗ್ವಾಣೀ ಭಾರತೀ ಬ್ರಾಹ್ಮೀ ಭಾಷಾ ಗೀಃ ಶಾರದಾ ಸ್ವರಾ। ಸರಸ್ವತೀ ಕಾಮಧೇನುಃ ವೇದಗರ್ಭಾಕ್ಷರಾತ್ಮಿಕಾ॥1॥ ದ್ವಾದಶೈತಾನಿ ನಾಮಾನಿ ಸರಸ್ವತ್ಯಾ ಸ್ತ್ರೀ ಸಂದಿಷು। ಜಪನ್ ಸರ್ವಜ್ಞತ್ತಾಂ ಮೇಧಾಂ ವಾಕ್ಷಮತ್ವ ಲಭೇದ್ಧ್ರುವಮ್। ಷಣ್ಮಾಸಾನಿಃ ಸ್ಪೃಹೋ ಲಬ್ಧ್ವಾ ಲಭೇಜ್ಞಾನಂ ವಿಮುಕ್ತಿದಮ್॥2॥

ಮಾಣಿಕ್ಯ ವೀಣಾ ಮುಪಲಾಲಯಂತೀ

ಮಾಣಿಕ್ಯ ವೀಣಾ ಮುಪಲಾಲಯಂತೀ ಮದಾಲಸಾಂ ಮಂಜುಳ ವಾಗ್ವಿಲಾಸಾಂ। ಮಹೇಂದ್ರ ನೀಲದ್ಯುತಿ ಕೋಮಲಾಂಗೀಂ ಮಾತಂಗ ಕನ್ಯಾಂ ಮನಸಾಸ್ಮರಾಮಿ॥ ಚತುರ್ಭುಜೇ ಚಂದ್ರಕಲಾವತಂಸೇ ಕುಚೋನ್ನತೇ ಕುಂಕುಮರಾಗ ಶೋಣೆ। ಪುಂಡ್ರೇಷು ಪಾಶಾಂಕುಶ ಪುಷ್ಪಬಾಣ ಹಸ್ತೇ ನಮಸ್ತೇ ಜಗದೇಕ ಮಾತಃ। ಮಾತಾ ಮರಕತಶ್ಯಾಮಾ ಮಾತಂಗೀ ಮಧುಶಾಲಿನೀ ಕುರ್ಯಾತ್ಕಟಾಕ್ಷಂ ಕಲ್ಯಾಣೀ ಕದಂಬ ವನವಾಸಿನೀ। ಜಯಮಾತಂಗ ತನಯೇ ಜಯ ನೀಲೋತ್ಪಲದ್ಯುತೇ ಜಯ ಸಂಗೀತ ರಸಿಕೆ ಜಯಲೀಲಾ ಶುಕಪ್ರಿಯೇ॥ ನಮಸ್ತೇ ಶಾರದಾ ದೇವಿ, ಕಾಶ್ಮೀರ ಪುರವಾಸಿನಿ। ತ್ವಾಮಹಂ ಪ್ರಾರ್ಥಯೇ ದೇವಿ ವಿದ್ಯಾ ದಾನಂ ಚ ದೇಹಿಮೇ॥

ಯಾಕುಂದೇಂದು ತುಷಾರ ಹಾರಧವಳಾ (ಸರಸ್ವತಿಸ್ತೋತ್ರ)

ಯಾಕುಂದೇಂದು ತುಷಾರ ಹಾರಧವಳಾ ಯಾಶುಭ್ರ ವಸ್ತ್ರಾನ್ವಿತಾ। ಯಾವೀಣಾ ವರದಂಡ ಮಂಡಿತಕರಾ ಯಾಶ್ವೇತಪದ್ಮಾಸನಾ॥ ಯಾಬ್ರಹ್ಮಾಚ್ಯುತ ಶಂಕರ ಪ್ರಭುತಿಭಿಃ ದೇವೈಸ್ಸದಾ ಪೂಜಿತಾ। ಸಾಮಾಂಪಾತು ಸರಸ್ವತೀ ಭಗವತೀ ನಿಶ್ಶೇಷ ಜಾಡ್ಯಾಪಹಾ॥1॥ ಆಶಾಸುರಾಶೀ ಭವದಂಗವಲ್ಲೀ ಭಾಸೈವದಾಸೀ ಕೃತದುಗ್ಧ ಸಿಂಧೂ। ಮಂದಸ್ಮಿತ್ಯೇ ರ್ನಿದಿತ ಶಾರದೇಂದುಂ ವಂದೇರ ವಿಂದಾಸನ ಸುಂದಹಿತ್ವಾಂ। ಶಾರದಾ ಶಾರದಾಂಬೋಜ ವದನಾ ವದಾನಾಂಬುಜೇ। ಸರ್ವದಾ ಸರ್ವದಾ ಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್॥2॥ ಸರಸ್ವತೀಂ ಚ ತ್ರಾಂ ನೌಮಿ ವಾಗಧಿಷ್ಠಾತ್ನ ದೇವತಾಂ। ದೇವತ್ವಂ ಪ್ರಪದ್ಯಂತೇ ಯದನುಗ್ರಹತೋ ಜನಾತ್। ಪಾತು ನೋನಿಕಷಗ್ರಾವಾ ಮತಿಹೇಮ್ನಸರಸ್ವತೀ। ಪ್ರಾಜ್ಞೇತರಪರಿಚ್ಛೇದಂ ವಚಸೈವ ಕರೋತಿ ಯಾ॥3॥ ಶುಕ್ಲಾಂ ಬ್ರಹ್ಮ ವಿಚಾರಸಾರಪರಮಾಂ। ಆದ್ಯಾಜಗದ್ವ್ಯಾಪಿನೀಂ। ವೀಣಾ ಪುಸ್ತಕ ಧಾರಿಣೀ ಮಭುಯದಾಂ ಜಾಡ್ಯಾಂಧಕಾರ ಪಹಾಂಹಸ್ತೆ ಸ್ಫಾಟಿಕ ಮಾಲಿಕಾಂಚದಧತೀಂ ಪದ್ಮಾಸನ್ಯೈ ಸಂಸ್ಥಿತಾಂ। ವಂದೇ ತ್ವಾಂ ಪರಮೇಶ್ವರೀಂ ಭಗವತೀಂ ಬುದ್ಧಿಪ್ರದಾಂ ಶಾರದಾಂ॥4॥ ವೀಣಾಧರೇ ವಿಪುಲ ಮಂಗಲದಾನಶೀಲೇ। ಭಕ್ತಾರ್ತಿನಾಶಿನಿ ವಿರಿಂಚಿ ಹರೀಶವಂದ್ಯೇ। ಕೀರ್ತಿಪ್ರದೇಖಿಲ ಮನೋರಥ ದೇಮಹಾರ್ಹೆ। ವಿದ್ಯಾಪ್ರದಾಯಿನಿ ಸರಸ್ವತಿ ನೌಮಿನಿತ್ಯಂ॥5॥ ಶ್ವೇತಾಬ್ಜಪೂರ್ಣ ವಿಮಲಾಸನ ಸಂಸ್ಥಿತೇ ಹೇ। ಶ್ವೇತಾಂಬರಾವೃತ ಮನೋಹರ ಮಂಜುಗಾತ್ರೆ। ಉಧ್ಯನ್ಮನೋಜ್ಞ ಸ್ಥಿತ ಪಂಕಜ ಮಂಜುಲಾಸ್ಯೆ। ವಿದ್ಯಾಪ್ರದಾಯಿನಿ ಸರಸ್ವತಿ ನೌಮಿನಿತ್ಯಂ॥6॥ ಮಾತಸ್ತ್ವದೀಯ ಪದಪಂಕಜ ಭಕ್ತಿಯುಕ್ತಾಂ। ಯೇ ತ್ವಾಂ ಭಜಂತಿ ನಿಖಿಲಾ ಪದಾಂ ವಿಹಾಯ। ತೇ ನಿರ್ಜರತ್ವ ಮಿಹಯಾಂತಿ ಕಲೇವರೇಣ। ಭೂವಹ್ನಿವಾಯು ಗಗನಾಂ ಬು ವಿನಿರ್ಮಿತೇನ॥7॥ಮೋಹಾಂಧಕಾರ ಭರಿತೇ ಹೃದಯೇ ಮದೀಯೆ। ಮಾತಸ್ಸದೈವ ಕುರುವಾಸ ಮುದಾರಭಾವೇ। ಸ್ವೀಯಾಖಿಲವಯವನಿರ್ಮಲ ಸುಪ್ರಭಾಭಿಃ। ಶೀಘ್ರಂ ವಿನಾಶಯ ಮನೋಗತಮಂಧಕಾರಂ॥8॥ ಬ್ರಹ್ಮಾಜಗತ್ಸೃಜತಿ

ಪಾಲಯತೀಂ ದಿರೇಶಃ। ಶಂಭುರ್ವಿನಾಶತಿ ದೇವಿ ತವ ಪ್ರಭಾವೈಃ। ನಸ್ಯಾಕೃಪಾಯದಿ ತವ ಪ್ರಕಟ ಪ್ರಭಾವೇ। ನಸ್ಸುಃ ಕಥಂಚಿದಪಿತೇ ನಿಜಕಾರ್ಯದಕ್ಷಾ॥9॥ ಲಕ್ಷ್ಮೀರ್ಮೇಧಾ ಧರ ಪುಷ್ಟಿ ಗೌರೀ ತುಷ್ಟಿಂ ಪ್ರಭಾದ್ಧೃತಿಃ। ಏತಾಭಿಃ ಪಾಹಿತುನಭಿಃ ರಕ್ಷಾಭಿ ಮಾಂ ಸರಸ್ವತೀ। ಸರಸ್ವತ್ಯೇ ನಮೋನಿತ್ಯಂ ಭದ್ರಕಾಳ್ಯೆ ನಮೋ ನಮಃ। ವೇದವೇದಾಂತ ವೇದಾಂಗ ವಿದ್ಯಾ ಸ್ಥಾನೇ ಭ್ಯ ಏವಚ। ಸರಸ್ವತಿ ಮಹಾಭಾಗೇ ವಿದ್ಯೇ ಕಮಲ ಲೋಚನೇ। ವಿದ್ಯಾರೂಪೇ ವಿಶಾಲಾಕ್ಷಿ ವಿದ್ಯಾಂದೇಹಿ ನಮೋಸ್ತುತೇ। ಯದಕ್ಷರಂ ಪದಂ ಭ್ರಷ್ಟಂ ಮಾತ್ರಹೀನಂ ಚ ಯದ್ಭವೇತ್। ತತ್ಸರ್ವಂ ಕ್ಷಮ್ಯತಾಂ ದೇವೀಂ ಪ್ರಸೀದ ಪರಮೇಶ್ವರೀ॥

ಸರಸ್ವತಿ ನಮಸ್ತುಭ್ಯಂ

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣೇ। ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ॥

ನಮಸ್ತೇ ಶಾರದಾ ದೇವಿ (ಶಾರದಸ್ತೋತ್ರ)

ನಮಸ್ತೇ ಶಾರದಾ ದೇವಿ ಕಾಶ್ಮೀರ ಪುರವಾಸಿನೀ। ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿಮೇ॥1॥ ಯಾ ಶ್ರದ್ಧಾಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ। ಭಕ್ತಿ ಜಿಹ್ವಾಗ್ರಸದನಾ ಶಮಾದಿ ಗುಣದಾಯಿನೀ॥2॥ ನಮಾಮಿ ಯಾಮಿನೀಂ ನಾಥ ಲೇಖಾಲಂಕೃತ ಕುಂತಲಾಮ್। ಭವನಿಂ ಭವ ಸಂತಾಪನಿರ್ವಾಪಣ ಸುಧಾನದೀಮ್॥3॥ ಭದ್ರಕಾಲ್ಯೈ ನಮೋ ನಿತ್ಯಂ ಸರಸ್ವತ್ಯೈ ನಮೋ ನಮಃ। ವೇದವೇದಾಂಗವೇದಾಂತ ವಿದ್ಯಾಸ್ಥಾನೇಭ್ಯ ಏವ ಚ॥4॥ ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ। ಸರ್ವವಿದ್ಯಾಧಿದೇವಿ ಯಾತಸ್ಮೈ ವಾಣ್ಯೈ ನಮೋ ನಮಃ॥5॥ ಯಯಾ ವಿನಾ ಜಗತ್ಸರ್ವಂ ಶಶ್ವಜೀವಸ್ಮೃತಂ ಭವೇತ್। ಜ್ಞಾನಾಧಿದೇವೀ ಯ ತಸ್ಮೈ ಸರಸ್ವತ್ಯೈ ನಮೋ ನಮಃ॥6॥ ಯಯಾವಿನಹ ಜಗತ್ಸರ್ವ ಮೂಕಮುನ್ಮತ್ತ ವತ್ಸದ್ರಾ। ಯಾ ದೇವಿವಾಗಧಷ್ಠತ್ರೀ ತಸ್ಮೈ ವಾಣ್ಯೈ ನಮೋ ನಮಃ॥7॥ ಶ್ರೀ ಶಂಕರಾಚಾರ್ಯರ್ ಕೃತ ಶ್ರೀ ಶಾರದಾ ಸ್ತೋತ್ರ॥

ಜ್ಞಾನಂ ದೇಹಿ ಸ್ಮೃತಿಂ ದೇಹಿ ವಿದ್ಯಾಂ

ಜ್ಞಾನಂ ದೇಹಿ ಸ್ಮೃತಿಂ ದೇಹಿ ವಿದ್ಯಾಂ ವಿದ್ಯಾಧಿದೇವತೆ। ಪ್ರತಿಷ್ಠಾಂ ಕವಿತಾಂ ದೇಹಿ ಶಕ್ತಿಂ ಶಿಷ್ಯ ಪ್ರಭೋಧಿಕಾಂ॥1॥ ಸ್ಮೃತಿ ಶಕ್ತಿಃ ಜ್ಞಾನಶಕ್ತಿಃ ಬುದ್ಧಿಶಕ್ತಿಸ್ವರೂಪಿಣೇ। ಪ್ರತಿಭಾ ಕಲ್ಪನಾಶಕ್ತಿಃ ಯಾ ಚ ತಸ್ಮೈ ನಮೋ ನಮಃ॥2॥ ಮನೋವೃತ್ತಿರಸ್ತು ಸ್ಮೃತಿಸ್ತೇ ಸಮಸ್ತಾ ತಥಾ ವಾಕ್ಪ್ರವೃತಿಃ ಸ್ತುತಿಸ್ಸ್ಯಾನ್ಮಹೇತಿ। ಶರೀರ ಪ್ರವೃತ್ತಿಃ ಪ್ರಣಾಮಕ್ರಿಯಾಸ್ಯಾತ್ ಪ್ರಸೀದ ಕ್ಷಮಸ್ವ ಪ್ರಭೋ ಸಂತತಂ ಮೇ॥3॥ ಬ್ರಹ್ಮ ಸ್ವರೂಪಾ ಪರಮಾ ಜ್ಯೋತಿರೂಪ ಸನಾತನೀ। ಸರ್ವವಿದ್ಯಾಧಿ ದೇವೀ ಯಾ ತಸ್ಮೈ ವಾಣ್ಯೈ ನಮೋನಮಃ॥4॥ ಯಯಾ ವಿನಾ ಜಗತ್ಸರ್ವಂ ಶಶ್ವ ಜೀವನ್ಮೃತಂ ಭವೇತ್। ಜ್ಞಾನಾಧಿದೇವಿಯಾ ತಸ್ಮೈ ಸರಸತ್ಯೈ ನಮೋ ನಮಃ॥5॥ ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತ ವತ್ಸದಾ ಯಾ ದೇವಿ ವಾಗಧಿಷ್ಠಾತ್ರಿ ತಸ್ಮೈ ವಾಗ್ಯೈ ನಮೋ ನಮಃ॥6॥ ಸಾ ಮೇ ವಸತು ಜಿಹ್ವಾಯಾಂ ವೀಣಾಪುಸ್ತಕಧಾರಿಣೀ। ಮುರಾರಿವಲ್ಲಭಾದೇವೀ ಸರ್ವಶುಕ್ಲಾ ಸರಸ್ವತೀ॥7॥ ಸರಸ್ವತಿ ಮಹಾಭಾಗೇ ವಿದ್ಯೇ ಕಮಲಲೋಚನೇ। ವಿಶ್ವರೂಪೇ ವಿಶಾಲಾಕ್ಷಿ ವಿದ್ಯಾದೇಹಿ ನಮೋಽಸ್ತುತೇ॥8॥

ಶ್ರೀಂ ಶ್ರೀಂ ಶ್ರೀಂ ಬೀಜರೂಪೇ

ಶ್ರೀಂ ಶ್ರೀಂ ಶ್ರೀಂ ಬೀಜರೂಪೇ। ಮಮ ಖಲುಂ ನಂ ಮಾಕದಾಚಿತ್ತ್ಯಜ ತ್ವಂ। ಮಾ ಮೇ ಬುದ್ಧಿರ್ವಿರುದ್ಧಾ ಭವತು। ಮಮ ಮನೋ ಪಾತುಮಾದೇವಿ ಪಾಪಾತ್। ಮಾ ಮೇ ದುಃಖ ಕದಾರ್ಚಿತ್ ಕ್ವಚಿದಪಿ ಸಮಯೇ ಪುಸ್ತಕೇನಾ ಕುಲತ್ವಂ। ಶಾಸ್ತ್ರೇ, ವಾದೇ, ಕವಿತ್ವೇ, ಪ್ರಸರತು ಮಮ ಧೀರ್ಮಾಸ್ತು ಕುಂಠಾಕದಾಪಿ॥

ಶ್ರೀ ವಿಶದ ವರ್ಣೆ

ಶ್ರೀ ವಿಶದ ವರ್ಣೆ ಮಧುರಾ ರಾವೋಚಿತೆ ಚತುರ ರುಚಿರ। ಪದರಚನೆ ಚಿರಂದೇವಿ ಸರಸ್ವತಿ, ಹಂಸೀ ಭಾವದಿ। ನೆಲೆಗೊಳ್ಗೆ ಮನ್ ಮಾನಸದೋಳ್॥

ಜ್ಞಾನದಾತೆಯೇ ದೇವಿ ಸರಸ್ವತಿಯೆ (ಲಾಲಿ)

ಜ್ಞಾನದಾತೆಯೇ ದೇವಿ ಸರಸ್ವತಿಯೆ ತಾಯೆ। ಬ್ರಹ್ಮನರಸಿಯೆ ಪಾಹಿ ಶ್ರೀ ವಾಣಿ ಕಾಯೆ। ಲಾಲೀ॥ ವಿದ್ಯಾ ಸ್ವರೂಪಿಣಿಯೆ ವಿಂಧ್ಯ ವಾಸಿನಿಯೆ। ಶ್ವೇತ ವಸನ ಪ್ರಿಯಳೆ ಹಸಿತ ವದನೆ ದೇವಿ। ಲಾಲೀ॥ ಶೃಂಗೇರಿ ಪುರ ನಿಲಯೆ ಶಾರದಾಂಬೆಯೆ ॥ಲಾಲೀ॥ ಅಂಬುಜಾಸನೆ ತಾಯೆ ಅಘ ನಾಶಿನೀ ಪಾಹೀ ॥ಲಾಲೀ॥ ನಾದಗಳ ಒಡೆಯಳೇ ಅಜ್ಞಾನ ನೀಗು। ವೇದ ಮಾತೆಯೇ। ದೇವಿ ವಾಗ್ದೇವಿ ತಾಯೇ ॥ಲಾಲೀ॥

ಮುತ್ತಿನಾರುತಿ ತಂದೆತ್ತಿ ಬೆಳಗಿರೇ — ರಾಗ: ಯಮನ್‌ಕಲ್ಯಾಣಿ–ಏಕತಾಳ

ಮುತ್ತಿನಾರುತಿ ತಂದೆತ್ತಿ ಬೆಳಗಿರೇ। ಪುಸ್ತುಕಾವ ಪಿಡಿದು ಇರುವ ಶಕ್ತಿ ರೂಪೆಗೆ॥ಪ॥ ಮುಕುರ ಮೂಗುತಿ ಮುಂಗೈಲರಗಿಣೀ। ದೆಸೆಗೆ ಹೊಳೆವೊ ನೊಸಲ ತಿಲಕ ಎಸೆವೊ ರೂಪೆಗೆ॥1॥ ಹಾರ ಪದಕವು ನಿರಾಜಿ ಸೀರೆಯೂ। ಆನೆ ಮೇಲೆ ಏರಿ ಮೆರೆವೊ ಶಾರದಾಂಬೆಗೆ॥2॥ ಚಂದ್ರಹಾರವು ಚೆಂದಾದ ಸರಗಳೂ। ನಂದೀರೂಢಳಾಗಿ ಇರುವ ಅಂಬುಜಾಕ್ಷಿಗೆ॥3॥ ನೀನ್ ಎಲ್ಲಿಂ ಬಂದೆಯೆ ಎಲ್ಲಿ ನಿಂದೆಯೇ। ಅಂದವಾದ ಮನೆಯ ನೋಡಿ ಬಂದೆನು ತಾಯೇ॥4॥

ಆರತೀಯ ಬೆಳಗುವೆ ಮುದದಿ ಶಾರದಾಂಬೆಗೆ

ಆರತೀಯ ಬೆಳಗುವೆ ಮುದದಿ ಶಾರದಾಂಬೆಗೆ ನಾ॥ಪ॥ ಅಮರರೆಲ್ಲ ಪೂಜೆಗೈದು ಭ್ರಮಿಸಿ ಪಂಥವನ್ನೇ ಗೆಲಿದು। ಕಮಲಜಾತನನ್ನು ಪಡೆದ। ಭ್ರಮರಕುಂತಳೆ ಶಾರದೆಗೇ ನಾ॥1॥ ಕ್ಷೀರಸಾಗರ ಶಯನನನ್ನು। ಭೂರಿ ಪ್ರೀತಿಯಿಂದ ಗೆಲಿದು। ಮಾರನಯ್ಯನನ್ನು ಪಡೆದ। ಸಾರಸಾಕ್ಷಿ ಲಕ್ಷ್ಮೀಗೆ ನಾ॥2॥ ಸುಂದರಾಂಗ ನಾದ ಶಿವನ। ಅಂದವನ್ನು ನೋಡಿನಲಿದು। ಮೇದಿನಿಗೆ ಮೋದವಿತ್ತ ಆದಿಶಕ್ತಿ ಪಾರ್ವತಿಗೇನಾ॥3॥

ಜಯ್ ಸರಸ್ವತೀ ಮಾತಾ (ಹಿಂದಿ–ಆರತಿ) — ರಾಗ: ಕುರಂಜಿ

ಜಯ್ ಸರಸ್ವತೀ ಮಾತಾ, ಜಯ್ ಜಯ್ ಜೈ ಸರಸ್ವತೀ ಮಾತಾ। ಸದ್ ಗುಣ್ ವೈಭವ್ ಶಾಲಿನೀ ತ್ರಿಭುವನ್ ವಿಖ್ಯಾತಾ॥1॥ ಚಂದ್ರವದನಿ ಪದ್‌ಮಾಸಿನೀ, ದ್ಯುತಿ ಮಂಗಲ್‌ಕಾರೀ। ಸೋಹೇ ಶುಭ್ ಹಂಸ್ ಸವಾರೀ, ಅತುಲ್ ತೇಜ್‌ಧಾರೀ॥2॥ ಬಾಯೇ ಕರ್ ಮೇ ವೀಣಾ, ದಾಯೇಂ ಕರ್ ಮಾಲಾ। ಶೀಶ್ ಮುಕುಟ್ ಮಣಿ ಸೋಹೇ, ಗಲ್ ಮೋತಿಯನ್ ಮಾಲಾ॥3॥ ದೇವಿ ಶರಣ್ ಜೋ ಆಯೇ, ಉನ್ ಕಾ ಉದ್ಧಾರ್ ಕಿಯಾ। ಪೈಠಿ ಮಂಥರಾ ದಾಸೀ, ರಾವಣ್ ಸಂಹಾರ್ ಕೀಯಾ॥4॥ ವಿದ್ಯಾಜ್ಞಾನ್ ಪ್ರದಾಯಿನೀ, ಜ್ಞಾನ್ ಪ್ರಕಾಶ್ ಭರೋ। ಮೋಹ್ ಔರ್ ಅಜ್ಞಾನ್ ತಿಮಿರ್ ಕಾ, ಜಗ್ ಸೇ ನಾಶ್ ಕರೋ॥5॥ ಧೂಪ್ ದೀಪ್ ಫೂಲ್ ಮೇವಾ, ಮಾಂ ಸ್ವೀಕಾರ್ ಕರೋ। ಜ್ಞಾನಚಕ್ಷು ದೇ ಮಾತಾ, ಭವ್ ಸೇ ಮೇರಾ ಉದ್ಧಾರ್ ಕರೋ॥6॥ ಮಾಂ ಸರಸ್ವತೀಜಿ ಕೀ ಆರತೀ। ಜೋ ಕೋಯೀ ನರ್ ಗಾವೇ। ಹಿತ್‌ಕಾರೀ, ಸುಖ್ ಕಾರೀ, ಜ್ಞಾನ್ ಭಕ್ತಿ ಪಾವೇ॥7॥

❖ ❖ ❖

ಶ್ರೀ ಚಾಮುಂಡೇಶ್ವರೀ ದೇವಿ

ಉತ್ತಿಷ್ಠೋತ್ತಿಷ್ಠ ಚಾಮುಂಡಿ (ಸುಪ್ರಭಾತಂ)

ಉತ್ತಿಷ್ಠೋತ್ತಿಷ್ಠ ಚಾಮುಂಡಿ। ಉತ್ತಿಷ್ಠ ಶಿವವಲ್ಲಭೇ। ಉತ್ತಿಷ್ಠ ನಿತ್ಯ ಕಲ್ಯಾಣಿ। ಮಂಗಲಂ ಜಗತಃ ಕುರು॥1॥ ಸ್ವಪ್ನಪ್ರಬೋಧ ಯುಗಲಂ ನನುನಿತ್ಯ ಬೋಧೇ। ಸಂಪದ್ಯತೇ ತವಕಥಂ ವ್ಯವಹಾರ ರೀತ್ಯಾ। ನಿತ್ಯೋಪಚಾರವಿಧಿನಾ ನು ವಿಭೋಧಯಾಮಿ। ಮಾತಾರ್ಮಹಾಬಲ ಗಿರೀಶ್ವರಿ ಸುಪ್ರಭಾತಂ॥2॥ ಸೂರ್ಯಶ್ಚಶೀ ವಸುಮತೀಸುತ ಇಂದುಸೂನಃ। ಜೀವಃ ಕವಿಃ ಶನಿರುಭಾವಥ ರಾಹು ಕೇತೂ। ತ್ವತ್ಪ್ರೇರಿತಾ ನಿಯಮಯಂತಿಹಿ ಭಾಗಧೇಯಂ। ಮಾತರ್ಮಹಾಬಲ ಗಿರೀಶ್ವರಿ ಸುಪ್ರಭಾತಂ॥3॥ ಇಂದ್ರಃ ಕೃಶಾನುರಿನಜೋ ನಿಕಷಾತ್ಮಜಶ್ಚ। ವಾರೀಶ ಮಾರುತ ನಿಧೀಶ್ವರ ತತ್ಸಖಾಶ್ಚ। ಆಶಾ ಹಿ ಶಾಸತಿ ಶಿವೇ ತವ ಶಾಸನೇನ। ಮಾತರ್ಮಹಾಬಲ ಗಿರೀಶ್ವರಿ ಸುಪ್ರಭಾತಂ॥4॥ ತ್ವಾಂ ಸೇವತೇ ಹಿ ಕಮಲಾ ಕಮಲೇದಧಾನಾ। ವಾಣೀಚ ವಾದಯತಿ ಸಂಮುದಿತೇವ ವೀಣಾಂ। ನೃತ್ಯನ್ತಿಚಾಭಿಮುಖ ಮಪ್ಸರಸೋ ಮುದೇತೇ। ಚಾಮುಂಡಿಕಾಂಬ ಭವತಾತ್ತವ ಸುಪ್ರಭಾತಂ॥5॥ ತ್ವಾಂ ಪ್ರೇಷಯನ್ ಹಿ ಮಹಿಷಾಸುರ ಸೂದನಾರ್ಥಂ। ಶಂಭುಸ್ತ್ವದೀಯ ವಿರಹಾ ಸಹನಃ ಪುರಾತ್ರ। ವಾಸಂವ್ಯಧಾತ್ಕಿಮು ಮಹಾಬಲ ರೂಪಧಾರೀ। ಚಾಮುಂಡಿಕಾಂಬ ಭವತಾತ್ತವ ಸುಪ್ರಭಾತಂ॥6॥ಮಾತರ್ಮಹಾಬಲ ಮಹೀಧರ ಮಧ್ಯಗೇಹೇ। ಚಾಮುಂಡಿಕೇ ಶಿವಹಿತೇ ಜಗದೇಕ ಮಾತಃ। ವೀಕ್ಷಸ್ವನಸ್ತು ಕರುಣಾಪರಿಪೂರ್ಣದೃಷ್ಟ್ಯಾ। ಮಾತರ್ಮಹೇಶ ದಯಿತೇ ತವ ಸುಪ್ರಭಾತಂ॥7॥ ಉಚ್ಚಂಡ ಚಂಡ ಪರಿಖಂಡನ ಪಂಡಿತಾಸಿ ಮಂಡಸ್ಯ ರುಂಡಮಪಿ ಖಂಡಿತ ವತ್ಯಸ್ತ್ವಂ। ಚಾಮುಂಡಿಕೇತ್ಯವಿತಥಾ ಮಭಿಧಾಂಹಿ ಧತ್ಸೇ। ಮಾತರ್ಮಹೇಶ ದಹಿತೇ ತವ ಸುಪ್ರಭಾತಂ॥8॥ ವೃಂದಾರಕಾದ್ಯಖಿಲ ಭಕ್ತಹಿತಂ ವಿಧಿತ್ಸುಃ। ದುರ್ವೃತ್ತ ಸೈರಿಭ ಸುರಾರಿ ನಿಷೂದನಾರ್ಥಂ।ಆವಿರ್ಬಭೂವಿಥ ಪುರಾನನು ರೌದ್ರರೂಪಾ। ಹೇ ಭದ್ರಕಾಲಿ ಭವತಾತ್ತವ ಸುಪ್ರಭಾತಂ॥9॥ ಮೌನೀ ಮೃಕಂಡು ತನಯಃ ಕಿಲ ತತ್ತ್ವ ವೇದೀ। ವ್ಯಾವರ್ಣಯತ್ತವ ಪುರಾಚರಿತಂ ಭವಾನಿ। ಮಂದಃ ಕಥಂ ನ್ವಕೃತಧೀರಭಿವರ್ಣಯೇತ್ತ್ವಾಂ। ಚಾಮುಂಡಿಕಾಂಬ ಭವತಾತ್ತವ ಸುಪ್ರಭಾತಂ॥10॥ ಮಾತರ್ಮಹೀಧರಸುತೇ ಮದನಾರಿ ನಾರಿ। ಮಾತಂಗವಕ್ತ್ರ ಶಿಖಿವಾಹನ ಶೋಭಿತಾಂಕೇ। ದೃಷ್ಟ್ಯಾಪ್ರಸಾದ ವಿಶದಾಧಿಕ ಸೌಮ್ಯಯಾಸ್ಮಾನ್। ವೀಕ್ಷಸ್ವದೇವಿ ಭವತಾತ್ತವ ಸುಪ್ರಭಾತಂ॥11॥ ಕಶ್ಚಿನ್ನೃಪಸ್ತವ ಸಮೀಪ ಮುಪಾಗಮಿಷ್ಯನ್। ವಜ್ರಾಹತೋಽಪಿ ಕೃಪಯಾ ತವ ಧೂತಮೃತ್ಯುಃ। ಶೀರ್ಷಣ್ಯ ಮಾತ್ರ ರಹಿತ ಸ್ಸುಖಮಾಸ ಪಶ್ಚಾತ್। ಮಾತರ್ಮಹಾಬಲ ಗಿರೀಶ್ವರಿ ಸುಪ್ರಭಾತಂ॥12॥ ಕೃಷ್ಣಸ್ತೃತೀಯ ಇವ ಭೂಪವರಸ್ತುರೀಯಃ। ಕೃಷ್ಣೋಽಪಿತೇ ಬಹುವಿಧಾಂ ನು ವಿಧಾಯ ಸೇವಾವಲ್ಲಿ। ಧನ್ಯೋ ಬಭೂವ ಭುವಿ ಸಜ್ಜನಗೀತ ಕೀರ್ತಿಃ। ಚಾಮುಂಡಿಕಾಂಬ ಭರತಾತ್ತವ ಸುಪ್ರಭಾತಂ॥13॥ ತ್ವತ್ಪಾದ ಪದ್ಮಯುಗಲಂ ಪರಿಗಹ್ಯನಂತುಂ। ದೂರಾತ್ಪ್ರಸಾರಿತಕರೋಹಿ ಸಮೇತಿ ಭಾನುಃ। ಪೂರ್ವಾದ್ಗಿರೇರ್ಜಲಧಿ ಮಪ್ಯತಿಲಂಘ್ಯ ವೇಗಾತ್। ಮಾತರ್ಮಹಾಬಲ ಹಿತೇ ತವ ಸುಪ್ರಭಾತಂ॥14॥ ವಾತೋಪ್ಯಯಂ ಕೃತಜಲಾಪ್ರವನಃ ಸುಶೀತಃ। ಉತ್ಫುಲ್ಲಪುಷ್ಪ ಶತ ಬಂಧುರ ಗಂಧಬಂಧುಃ। ತ್ವಚ್ಛೈಲ ಶೃಂಗ ಮಭಿಯಾತಿ ಶನೈರ್ನುತಾನ್ತಃ। ಮಾತರ್ಮಹಾಬಲ ಗೀರಿಶ್ವರಿ ಸುಪ್ರಭಾತಂ॥15॥ ಪ್ರಾಚೀವಿಭಾತಿ ಕಿರಣೈರರುಣೈಸ್ಸುರಮ್ಯಾ। ಫುಲ್ಲಾರವಿಂದ ಕಲಿಕೇವ ವಿಕಸ್ವರಾಸ್ಯಾ। ಆರಾಧನಾಯ ತವದೇವಿ ಸುಮುತ್ಸುಕೇವ। ಸ್ಯಾತ್ತೇ ಮಹಾಬಲಗಿರೀಶ್ವರಿ ಸುಪ್ರಭಾತಂ॥16॥ ದೇವಿಸರೋವರ ಕೃತಾಪ್ಲವನಾ ವಿಶುದ್ಧಾಃ। ಅಂತರ್ಬಹಿಶ್ಚನಿತರಾಂ ತವದೇವಿ ಭಕ್ತಾಃ। ತ್ವದ್ಧಾಮ ಗೋಪುರಮುಖೇ ಕೃತ ಪಂಕ್ತಿಬಂಧಾಃ। ತಿಷ್ಠಂತಿ ಸೇವನಕೃತೇ ತವ ಸುಪ್ರಭಾತಂ॥17॥ ತಾರಾವಲಿಶ್ಚ ತವಶೈಲ ಮಲಂಕ ರೋತಿ। ಕೃತ್ವಾನು ವೈದ್ಯುತ ಸುದೀಪಮಯೀಂ ತನೂಂ ಸ್ವಾಂ। ತ್ವದ್ಧಾಮ ನಿರ್ದಿಶತಿ ಚಾನುನಿಶಂ ಸುದೂರಾತ್। ಮಾತರ್ಮಹಾಬಲ ಗಿರೀಶ್ವರಂ ಸುಪ್ರಭಾತಂ॥18॥ ಶೇಷಾಹಿ ಮೂರ್ಧನಿ ಯಥೈವ ವಿಭಾತಿರತ್ನಂ। ತ್ವದ್ಧಾಮ ಭಾತಿ ಗಿರಿಮೂರ್ಧನಿ ತೇ ತಥೈವ। ದೀಪೋಜ್ಜ್ವಲಂ ಜನಮನೋ ನಯನಾಭಿರಾಮಂ। ಮಾತರ್ಮ ಹಾಬಲ ಗಿರೀಶ್ವರಿ ಸುಪ್ರಭಾತಂ ॥19॥ ವಾಗ್ದೇವತಾಹಿ ವಶಿನೀ ಪ್ರಮುಖಾಃ ಪುರಾ ತ್ವಾಂ। ಸಂಸ್ತೂಯಾದೇವಿ ನನು ನಾಮ ಸಹಸ್ರಕೇಣ। ಧನ್ಯಾಬಭೂವುರಧಿ

ಕಾರ ಪದಾರ್ಹಭೂತಾಃ। ಚಾಮುಣ್ಡೆ ಕಾಂಬ ಲಲಿತೇ ತವ ಸುಪ್ರಭಾತಂ॥20॥ ಮಾತಸ್ತ್ವದೀಯ ಗಿರಿಪಾದ ಸಮಾಶ್ರಯೇಣ। ಮಾಹ್ಯಾಂ ಪುರೀಸುಶಪುರೀಶ ವಿಭಾತಿಯತ್ನಾ। ಖ್ಯಾತಾಮಹೀಸುರ ಪುರೀತ್ಯತ ಏವನಾಮ್ನಾ। ಸ್ಯಾತ್ತೇಮಹೀಸುರ ಪುರೀಶ್ವರಿ ಸುಪ್ರಭಾತಂ॥21॥ ತ್ವಾಂದಕ್ಷಿಣೇನ ಕಪಿಲಾ ಸುಜಲಾನುಕೂಲಾ। ತ್ವಾಮುತ್ತರೇಣ ಚ ಕವೇರಸುತಾ ಪ್ರತೀತಾ। ತ್ವತ್ಪಾರ್ಶ್ವತಃ ಪ್ರವಹನಾನ್ನನು ಪುಣ್ಯನದ್ಯೌ। ಖ್ಯಾತೇ ಮಹೇಶ ದಯಿತೇ ತವ ಸುಪ್ರಭಾತಂ॥22॥ ಮಾತರ್ಮಹಾ ಮಹಿಷದೈತ್ಯ ನಿಷೂದನಾರ್ಥಂ। ಶಾಂತಾಪಿರೂಪ ಮದಧಾಹಿ ಮಹಾಂತಮುಗ್ರಮ್। ಹೇ ಸಿಹ್ಮವಾಹನಗತೇ ಭವತೀಂ ಪ್ರಪದ್ಯೇ। ಚಾಮಂಡಿಕೇ ಭವತುತೇಽದ್ಯ ಶುಭಂಪ್ರಭಾತಂ॥23॥ ದುರ್ಗಾಸಿ ದುಷ್ಟದಮನೇ ಮೃದುಲಾಸಿ ಶಿಷ್ಟ। ಸಂರಕ್ಷಣೇಂಬ ಜನನೀ ಜಗತಾಂಸದಾಸಿ। ದುರ್ಗಾಶಿವಾಚ ಭವತೀ ತವತತ್ತ್ವಮೇತತ್। ಮಾತರ್ಮಹೇಶ್ವರ ಗೃಹೇಶ್ವರಿ ಸುಪ್ರಭಾತಂ॥24॥ ದುರ್ವೃತ್ತ ದೈತ್ಯದಮನಾಯ ಧೃತವ್ರತೇಂಬ। ಕಾಮಾದಿ ಶತ್ರುನಿವಹಂ ಹೃದಯೇ ಪ್ರವಿಷ್ಟಂ। ದುಷ್ಟಂವಿನಾಶ್ಯ ತವ ಪಾದಯುಗಾ ನುರಕ್ತಾನ್। ಅಸ್ಮಾನ್‌ವಿಧೇಹಿ ಗಿರಿಜೇ ತವ ಸುಪ್ರಭಾತಂ॥25॥ ವಿದ್ಯೇಶ್ವರೀಂ ನಿಜಸುಖಾನು ಭವೈಕರೂಪಾಂ। ಸ್ತೋತುಂಕಥಂ ಪ್ರಭುರಹಂ ಭವಿತಾಸ್ಮಿ ಮಾತಾಃ। ಶ್ರುತ್ವಾ ಪುನಃಸ್ತುತಿಮಿಮಾಂ ಭವಸುಪ್ರಸನ್ನಾ। ವಾಣೀಂ ನಿಶಮ್ಯ ಜನನೀವ ಶಿಶೋರ್ನಿಜಸ್ಯ॥26॥ ಏವಂ ಮಹಾಬಲ ಗಿರೇರಧಿದೇವತಾಯಾಃ। ಪ್ರೀತ್ಯಾಪ್ರಗೇ ಸ್ತವಮಿಮಂ ತವಯೇ ಪಠನ್ತಿ। ತೇಷಾ ಮನಿಷ್ಟಮನಿಶಂ ಪರಿಹೃತ್ಯ ತುಷ್ಟಾ। ಸದ್ವಾಂಛಿತಂ ಪ್ರದದೇತೀ ಪರಿಪಾಹಿ ಮಾತಃ॥27॥ ಚಾಮುಂಡಿಕಾ ಚರಣ ಪಂಕಜ ಚಂಚರೀಕಃ। ಕಶ್ಚಿನ್ಮಹೀಸುರಪುರೀ ವಸತಿರ್ದ್ವಿಜಾತಿಃ। ಪ್ರಾಭಾತಿಕೀಂ ಸ್ತುತಿಮಿಮಾಂ ಪರದೇವತಾಯಾಃ। ಸಂಪ್ರೇರಿತೋಕೃತ ತಯೈವ ಹೃದಿಸ್ಥಯಾಹಿ ॥28॥

ಅಯಿಗಿರಿನಂದಿನಿ ನಂದಿತಮೇದಿನಿ (ಶ್ರೀ ಮಹಿಷಾಸುರಮರ್ದಿನೀ ಸ್ತೋತ್ರ)

ಅಯಿಗಿರಿನಂದಿನಿ ನಂದಿತಮೇದಿನಿ ವಿಶ್ವವಿನೋದಿನಿ ನಂದನುತೆ। ಗಿರಿವರವಿಂಧ್ಯ ಶಿರೋಧಿನಿ ವಾಸಿನಿ ವಿಷ್ಣುವಿಲಾಸಿನಿ ಜಿಷ್ಣುನುತೇ। ಭಗವತಿ ಹೇ ಶಿಥಿಕಂಠಕುಟುಂಬಿನಿ ಭೂರಿಕುಟುಂಬಿನಿ ಭೂರಿಕೃತೇ। ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ॥1॥ ಸುರವರವರ್ಷಿಣಿ ದುರ್ಧರಧರ್ಷಿಣಿ ದುರ್ಮುಖಮರ್ಷಿಣಿ ಹರ್ಷರತೇ। ತ್ರಿಭುವನಪೋಷಿಣಿ ಶಂಕರತೋಷಿಣಿ ಕಿಲ್ಬಿಷಮೋಷಿಣಿ ಘೋಷರತೇ। ದನುಜನಿರೋಷಿಣಿ ದಿತಿಸುತರೋಷಿಣಿ ದುರ್ಮದಶೋಷಿಣಿ ಸಿಂಧುಸುತೇ।॥ಜಯ ಜಯ॥2॥ ಅಯಿ ಜಗದಂಬ ಮದಂಬ ಕದಂಬ ವನಪ್ರಿಯವಾಸಿನಿ ಹಾಸರತೇ। ಶಿಖರಿಶಿರೋಮಣಿ ತುಂಗಹಿಮಾಲಯ ಶೃಂಗನಿಜಾಲಯ ಮದ್ಯಗತೇ। ಮಧುಮಧುರೇ ಮಧುಕೈಟಭಭಂಜಿನಿ ಕೈಟಭಭಂಜಿನಿ ರಾಸರತೇ॥ ಜಯ ಜಯ॥3॥ ಅಯಿ ಶತಖಂಡ ವಿಖಂಡಿತರುಂಡ ವಿತುಂಡಿತಶುಂಡ ಗಜಾಧಿಪತೇ। ರಿಪುಗಜ ಗಂಡ ವಿದಾರಣಚಂಡ ಪರಾಕ್ರಮಶುಂಡ ಮೃಗಾಧಿಪತೇ। ನಿಜಭುಜದಂಡ ನಿಪಾತಿತ ಚಂಡ ನಿಪಾತಿತಮುಂಡ ಭಟಾಧಿಪತೇ॥ಜಯ ಜಯ॥4॥ ಅಯಿ ರಣದುರ್ಮದ ಶತ್ರುವಧೋದಿತ ದುರ್ಧರನಿರ್ಜರ ಶಕ್ತಿಭೃತೇ। ಚತುರವಿಚಾರ ಧುರೀಣಮಹಾಶಿವ ದೂತಕೃತ ಪ್ರಮಥಾಧಿಪತೇ। ದುರಿತದುರೀಹ ದುರಾಶಯದುರ್ಮತಿ ದಾನವದೂತಕೃತಾಂತಮತೇ॥ಜಯ ಜಯ॥5॥ ಅಯಿ ಶರಣಾಗತ ವೈರಿವಧೂವರ ವೀರವರಾಭಯದಾಯಕರೇ। ತ್ರಿಭುವನಮಸ್ತಕ ಶೂಲವಿರೋಧಿ ಶಿರೋಧಿಕೃತಾಮಲ ಶೂಲಕರೇ। ಧುಮಿಧುಮಿತಾಮರ ದುಂದುಭಿನಾದ ಮುಹುರ್ ಮುಖರೀಕೃತ ತಿಗ್ಮಕರೇ॥ಜಯಜಯ॥6॥ ಅಯಿ ನಿಜಹುಂಕೃತಿಮಾತ್ರನಿರಾಕೃತ ಧೂಮ್ರವಿಲೋಚನ ಧೂಮ್ರಶತೇ। ಸಮರವಿಶೋಷಿತ ಶೋಣಿತಬೀಜ ಸಮುದ್ಭವಶೋಣಿತ ಬೀಜಲತೇ । ಶಿವ ಶಿವ ಶುಂಭ ನಿಶುಂಭ ಮಹಾಹವ ತರ್ಪಿತ ಭೂತ ಪಿಶಾಚ ರತೇ॥ಜಯ ಜಯ॥ ॥7॥ ಧನುರನುಸಂಗ ರಣಕ್ಷಣಸಂಗ ಪರಿಸ್ಫುರದಂಗ ನಟತ್ಕಟಕೇ। ಕನಕಪಿಶಂಗಪೃಷತ್ಕ ನಿಷಂಗ-ರಸದ್ಭಟಶೃಂಗ ಹತಾವಟುಕೇ। ಕೃತಚತುರಂಗ ಬಲಕ್ಷಿತಿರಂಗ ಘಟದ್ಬಹುರಂಗ ರಟದ್ಬಟುಕೇ॥ಜಯ ಜಯ॥8॥ ಜಯಜಯ ಜಪ್ಯ ಜಯೇಜಯಶಬ್ದಿ ಪರಸ್ತುತಿ ತತ್ಪರ ವಿಶ್ವನುತೇ। ಭಣಭಣಭಿಂಜಿಮಿ ಭಿಂಕೃತನೂಪುರ

ಸಿಂಜಿತಮೋಹಿತ ಭೂತಪತೇ। ನಟಿತನಟಾ ರ್ಧನಟೀನಟನಾಯಕ ನಾಟಿತನಾಟ್ಯ ಸುಗಾನ ರತೇ ॥ಜಯ ಜಯ॥9॥ ಅಯಿ ಸುಮನಃ ಸುಮನಃ ಸುಮನಃ ಸುಮನಃ ಸುಮನೋಹರ ಕಾಂತಿಯುತೇ। ಶ್ರಿತರಜನೀ ರಜನೀ ರಜನೀ ರಜನೀ ರಜನೀಕರ ವಕ್ತ್ರವೃತೇ। ಸುನಯನವಿಭ್ರಮರ ಭ್ರಮರ ಭ್ರಮರ ಭ್ರಮರ ಭ್ರಮರಾ ಧಿಪತೇ॥ಜಯ ಜಯ॥10॥ ಸಹಿತಮಹಾಹವ ಮಲ್ಲಮತಲ್ಲಿಕ ಮಲ್ಲಿ ತರಲ್ಲಕ ಮಲ್ಲರತೇ। ವಿರಚಿತವಲ್ಲಿಕ ಪಲ್ಲಿಕಮಲ್ಲಿಕ ಭಿಲ್ಲಿಕಭಿಲ್ಲಿಕ ವರ್ಗವೃತೇ। ಸಿತಕೃತಫುಲ್ಲ ಸಮುಲ್ಲಸಿ ತಾರುಣ ತಲ್ಲಜಪಲ್ಲವ ಸಲ್ಲಲಿತೇ॥ಜಯ ಜಯ॥11॥ ಅವಿರಲಗಂಡ ಗಲನ್ಮದ ಮೇದುರ ಮತ್ತಮ ತಂಗಜ ರಾಜಪತೇ। ತ್ರಿಭುವನಭೂಷಣ ಭೂತಕಲಾನಿಧಿ ರೂಪ ಪಯೋನಿಧಿ ರಾಜಸುತೇ। ಅಯಿ ಸುದತೀಜನ ಲಾಲಸಮಾನಸ ಮೋಹನಮನ್ಮಥ ರಾಜಸುತೇ ॥ಜಯ ಜಯ॥12॥ ಕಮಲದಲಾಮಲ ಕೋಮಲಕಾಂತಿ-ಕಲಾಕಲಿತಾಮಲ ಭಾಲಲತೇ। ಸಕಲವಿಲಾಸ ಕಲಾ ನಿಲಯಕ್ರಮ ಕೇಲಿಚಲತ್ಕಲ ಹಂಸಕುಲೇ। ಅಲಿಕುಲಸಂಕುಲ ಕುವಲಯಮಂಡಲ ಮೌಲಿ ಮಿಲದ್ ಬಕುಲಾಲಿಕುಲೇ॥ಜಯ ಜಯ॥13॥ ಕರಮುರಲೀರವ ವೀಜಿತಕೂಜಿತ ಲಜ್ಜಿತ ಕೋಕಿಲ ಮಂಜುಮತೇ। ಮಿಲಿತಪುಲಿಂದ ಮನೋಹರಗುಂಜಿತ ರಂಜಿತಶೈಲ ನಿಕುಂಜಗತೇ। ನಿಜಗುಣಭೂತ ಮಹಾಶಬರೀಗಣ ಸದ್ಗುಣಸಂಭೃತ ಕೇಲಿತಲೇ॥ಜಯ ಜಯ॥14॥ ಕಟಿತಟನೀತ ದುಕೂಲವಿಚಿತ್ರ ಮಯೂಖತಿರಸ್ಕೃತ ಚಂದ್ರರುಚೇ। ಪ್ರಣತಸುರಾಸುರ ಮೌಳಿಮಣಿಸ್ಫುರ ದಂಶುಲಸನ್ನಖ ಚಂದ್ರರುಚೇ। ಜಿತಕನಕಾಚಲ ಮೌಲಿಪ ದೋರ್ಜಿತ ನಿರ್ಭರಕುಂಜರ ಕುಂಭಕುಚೇ॥ಜಯ ಜಯ॥15॥ ವಿಜಿತ ಸಹಸ್ರಕರೈಕ ಸಹಸ್ರಕರೈಕ ಸಹಸ್ರ ಕರೈಕನುತೇ। ಕೃತಸುರತಾರಕ ಸಂಗರತಾರಕ ಸಂಗರತಾರಕ ಸೂನುಸುತೇ। ಸುರಥಸಮಾಧಿ ಸಮಾನಸಮಾಧಿ ಸಮಾಧಿಸಮಾಧಿ ಸುಜಾತರತೇ॥ಜಯ ಜಯ॥16॥ ಪದಕಮಲಂ ಕರುಣಾನಿಲಯೇ ವರಿವಸ್ಯತಿ ಯೋನುದಿನಂ ಸ ಶಿವೇ ಅಯಿ ಕವಲೇ ಕಮಲಾನಿಲಯೇ। ಕಮಲಾನಿಲಯಃ ಸ ಕಥಂ ನ ಭವೇತ್। ತವ ಪದಮೇವ ಪರಂಪದಮಿತ್ಯನು ಶೀಲಯತೋ ಮಮ ಕಿಂ ನ ಶಿವೇ॥ಜಯ ಜಯ॥17॥ ಕನಕಲಸತ್ಕಲ ಸಿಂಧುಜಲೈರನು ಸಿಂಜಿನುತೇ ಗುಣ ರಂಗಭುವಂ ಭಜತಿ ಸ ಕಿಂ ನ ಶಚೀಕುಚಕುಂಭ ತಟೀಪ ರಿರಂಭ ಸುಖಾನುಭವಂ। ತವಚರಣಂ ಶರಣಂ ಕರವಾಣಿ ನತಾಮರವಾಣಿ ನಿವಾಸಿಶಿವಂ ॥ ಜಯ ಜಯ॥18॥ ತವವಿಮಲೇಂದು ಕುಲಂ ವದನೇಂದುಮಲಂ ಸಕಲಂ ನನುಕೂಲಯತೇ। ಕಿಮು ಪುರುಹೂತ ಪುರೀಂದುಮುಖೀ ಸುಮುಖೀಭಿರಸೌ ವಿಮುಖೀಕ್ರಿಯತೇ॥ ಮಮ ತು ಮತಂ ಶಿವನಾಮಧನೇ ಭವತೀ ಕೃಪಯಾ ಕಿಮುತ ಕ್ರಿಯತೇ॥ಜಯ ಜಯ॥19॥ ಅಯಿ ಮಯಿ ದೀನದಯಾಲುತಯಾ ಕೃಪಯೈವ ತ್ವಯಾ ಭವಿತವ್ಯಮುಮೇ ಅಯಿ ಜಗತೋ ಜನನೀ ಕೃಪಯಾಸಿ ಯಥಾಸಿ ತಥಾನುಮಿತಾಸಿರತೇ। ಯದುಚಿತಮತ್ರ ಭವತ್ಯುರರೀ ಕುರುತಾದುರುತಾ ಪಮಪಾಕುರುತೇ ॥ಜಯ ಜಯ॥20॥

ನೋಡು ನೋಡು ಕಣ್ಣಾರೆ ನಿಂತಿಹಳು — ರಾಗ: ಮಧ್ಯಮಾವತಿ

ನೋಡು ನೋಡು ಕಣ್ಣಾರೆ ನಿಂತಿಹಳು। ನಗುನಗುತಾ ಚಾಮುಂಡಿ ನಿಂತಿಹಳು॥ ತಾಯಿ ಹೃದಯ ತಂದಾ ತುಂಬು ಮಮತೆಯಿಂದಾ। ಬಾ ಇಲ್ಲಿ ಓ ಕಂದ ಎನುತಿಹಳು। ಕೈಬೀಸಿ ಬಳಿಗೆ ನನ್ನ ಕರೆದಿಹಳು॥ಪ॥ ಮೈಸೂರು ನಗರದ ಬೆಟ್ಟದ ಮೇಲೆ। ಮಹಿಷಾಸುರ ಮರ್ಧಿನಿಯ ವೈಭವ ಲೀಲೆ। ದನುಜ ಸಂಹಾರಿಣಿ ತ್ರಿಭುವನ ಪೋಷಿಣಿ। ಶಂಕರನ ರಾಣಿಗೀವ ಹೂಗಳ ಮಾಲೆ॥1॥ ನಂಬಿರುವ ಭಕ್ತರ ರಕ್ಷಣೆಗಾಗಿ। ನಂಬದಿಹ ದುಷ್ಟರ ಶಿಕ್ಷೆಗಾಗಿ। ನಿಂತಿಹಳು ನೋಡಲ್ಲಿ ಶೂಲಪಾಣಿಯಾಗಿ। ಕರುನಾಡ ಮಕ್ಕಳ ಸಿರಿದೈವವಾಗಿ॥2॥ ಉಕ್ಕಿಬಹ ನದಿಯಲ್ಲಿ ಅವಳ ನಗೆ। ಬೀಸಿಬಹ ಗಾಳಿಯಲ್ಲಿ ಅವಳುಸಿರು। ಹಸಿಹಸಿರು ಪೈರುಗಳೇ ಅವಳುಡುಗೆ। ಆ ತಾಯಿ ರೂಪವೂ ಹಲವು ಬಗೆ॥3॥

ಹಸ್ತ ಕಮಲವಿದೆ ಶ್ರೀ ಚಾಮುಂಡೇಶ್ವರಿ — ರಾಗ: ಕಾಂಬೋದಿ

ಹಸ್ತ ಕಮಲವಿದೆ ಶ್ರೀ ಚಾಮುಂಡೇಶ್ವರಿ ಹಸ್ತಗಳಿದು ನೋಡಿರೇ॥ಪ॥ ವಿಸ್ತಾರಮಾಗಿಹ ಮಹಿಶೂರ ರಾಜ್ಯವ ಸುಸ್ಥಾರಮಾಗಿ ಪ್ರಶಸ್ಥದಿ ಪೊರೆಯುವ। ಶೃಂಗಾರ ಮುಖದೊಳು ಮುಂಗುರುಳುಗಳ ನಿಸರ್ಗ ತಿದ್ದುವ ಹಸ್ತವೇ ವರ-ಮಂಗಳ ಕಿಂಕಿಣಿ ಕಂಕಣಾದಿಗಳಿಂದ ಕಂಗೊಳಿಸುವ ಹಸ್ತವೇ॥1॥ ರಂಗದುತ್ತುಂಗ ಮಾತಂಗ ವೈರಿಯನೇರಿ

ಮುಂಗಡೆ ಭಕ್ತರ್ಗೆ ಮುದವನೀಯುವದಿವ್ಯ॥2॥ ಗರಳವಕುಡಿದ ಶಿವನ ಗರ್ಭದೊಳಿಹ ಭುವನ ಸೊರಗಿ ಪೋಗುವುದೆನ್ನುತ್ತ ನಂಜು-ಕೊರಳಿನಿಂ ಉದರಕೆ ಬರಲು ಶ್ರೀಕಂಠೇಶ್ವರನ ದಿವ್ಯ ಕೊರಳ ಪಿಡಿದ ಹಸ್ತವೇ॥3॥ ಹರನ ನೇತ್ರಾಗ್ನಿಯಿಂದ ಉರಿವ ಪತಿಯ ಕಂಡು ಶರಣೆಂದಾರತಿಗೆ ಸ್ಥಿರ ಮಾಂಗಲ್ಯವಿತ್ತ ಹಸ್ತವೇ॥4॥

ಪಾಲಿಸು ಜಯ ಗೌರಿ ಶ್ರೀ ಚಾಮುಂಡೇಶ್ವರಿ — ರಾಗ: ಮೋಹನ

ಪಾಲಿಸು ಜಯ ಗೌರಿ ಶ್ರೀ ಚಾಮುಂಡೇಶ್ವರಿ ಪಾಲಿಸು ನೀ ದಿವ್ಯ ಲಾವಣ್ಯಮಯಿ। ಜಗಜ್ವಾಲಾ ರೂಪವ ತೋರಿ ಕೋಲಾಹಲಪ್ರಿಯೆ॥ಪ॥ ಜಲಜ ಪಾದದಿಂ ದಿವ್ಯ ಗೆಜ್ಜೆ ವೆಂಟಾ ಪಿಲ್ಲಿ ಹೊಳೆಯುವೇ। ಎಳೆಮಾವು ತಳಿರ ಪೋಲುವ ಬೆರಳು ಅಂಬಾ। ನಳಿನಯುಗಳೆ ಜಂಘೆ ಜಲಗುಳ್ಳೆಯಂತೆ ಜಾನು। ಥಳ ಥಳಿಸುವ ತೊಡೆ ಹೊಳೆವ ಕುಮಾರಿ ಗೌರಿ॥1॥ ಹಸ್ತಕಂಕಣ ಕಡಗ ಮುತ್ತಿನಹಾರ। ನವರತ್ನ ಪಚ್ಚೆಯ ಪದಕ ಕೆತ್ತಿಸಿದಾಭರಣ॥ಅಂಬಾ॥ ಹತ್ತೆಂಟು ಬೆರಳುಳ್ಳ ಶಿಸ್ತಿನಿಂದ ಹೊಳೆಯುತ। ಕಸ್ತೂರಿ ತಿಲಕವನಿಟ್ಟು ಕಾತ್ಯಾಯನಿ ಗೌರಿ॥2॥ ತ್ರಿಶೂಲ ಢಮರುಗ ಶಂಖ ತಾಳ ಮೃದಂಗ। ವೀಣೆ ಮೇಳ ಸಾರಂಗ ನಾಟ್ಯ ಸೂಳೆರಾರತಿಯಿಂದ॥ಅಂಬಾ॥ ವೇಳೆ ತಪ್ಪದೆ ನಿತ್ಯ ಬಹಳ ಪೂಜೆಯಗೊಂಬ। ಪಾಲಿಪ ಬಿರುದನಿತ್ತ ಕಾಳ ರುದ್ರನ ರಾಣಿ॥3॥ ಹರಿದ್ರಾ ಕುಂಕುಮ ಗಂಧ ಹರುಷದಿಂದ। ಶೋಭಿತಳಾಗಿ ಮರುಗ ಮಲ್ಲಿಗೆ ಜಾಜಿ ಸುರಗಿ ಶಾವಂತಿಗೆ ॥ಅಂಬಾ॥ ಶಿರದಿಂದ ಶೃಂಗಾರ ಪೀತಾಂಬರುಟ್ಟು। ದರಿದ್ರಾ ದೋಷವ ಬಿಡಿಸು ಧನಧಾನ್ಯ ಶ್ರೀದಯೆ ದೇವಿ॥4॥ ದಿಟ್ಟ ಮಹಿಷಾಸುರನ ಮೆಟ್ಟಿ। ಪಾದದಿಂದೊತ್ತಿ ಬೆಟ್ಟದ ಮೇಲೆ ನೆಲೆಸಿ ಶ್ರೇಷ್ಠದೇವತೆ ಎನಿಸಿ॥ಅಂಬಾ॥ ಕೃಷ್ಣರಾಜೇಂದ್ರನ ಮನದಿಷ್ಟದೇವತೆ ಎನಿಸಿ। ಕಷ್ಟವ ಪರಿಹರಿಸು ಕಾತ್ಯಾಯನಿ ಗೌರಿ॥5॥

ಹಲವಾರು ಕ್ಷೇತ್ರ ಸುತ್ತಿ — ರಾಗ: ಕಲಾವತಿ-ಆದಿತಾಳ

ಹಲವಾರು ಕ್ಷೇತ್ರ ಸುತ್ತಿ ಬಂದೆನಿಲ್ಲಿಗೆ ಅಮ್ಮಾ। ಚಾಮುಂಡಿ ದೇವಿ ನಿನ್ನ ಪಾದಸೇವೆಗೆ। ನಾನೆಲ್ಲು ಕಾಣದಂಥ ಶಾಂತಿ ಮನಕೆ। ತಾಯಿ ತಂದೆಯಾಗಿ ನೀನು ಕಂಡೇ ನನಗೇ॥1॥ ಕರುನಾಡ ಒಡೆಯರ ತಾಯಿಯಾದೆ। ಬೆಟ್ಟದಂಥಾ ಕಷ್ಟದಲ್ಲೂ ಕೈಯ ಹಿಡಿದೇ। ಮೈಸೂರ ಮಾತೆಯಾಗಿ ಮಾನಕಾಯ್ದೆ। ಭಕ್ತಿಯಿಂದ ಬೇಡಿದವರ ಬಯಕೆ ಸಂದೆ॥2॥ ನಿನಗಾರು ಸಾಟಿಯಿಲ್ಲ ಜಗದ ಮೇಲೆ ಅಮ್ಮಾ। ಲವಲೇಶ ಭಯವಿಲ್ಲ ನೆನೆದ ಮೇಲೆ। ಈ ಜಗದ ಮಾಯೆಯೆಲ್ಲಾ ನಿನ್ನ ಲೀಲೆ। ಮಹಾಮಾಯೆ ಬೆಳಕಾಗೆ ಬಾಳಿನಲ್ಲೆ॥3॥

ಮಾತನಾಡು ತಾಯೆ ಮನದಲಿ — ರಾಗ: ಖಮಾಚ್

ಮಾತನಾಡು ತಾಯೆ ಮನದಲಿ ಸೋತೆನೆಂದು ಕಾಯೆ॥ಪ॥ ವಂದನೆ ಮಾಡುವೆನು ಅಂಬ। ನಿಮ್ಮ ಪಾದ ವಂದಿಸಿ ಪೂಜಿಪೆನೆ। ಸುಂದರಿ ಸ್ತುತಿಸುವೆನೆ ನಿತ್ಯಾನಂದ ಪೂಜಿಪೆನೆ। ಅಂಬ ಮುದದಿಂದಲಿ ಒಂದು ವರವ ಕೊಡು ಎಂದು ಬೇಡಿಕೊಂಬೆ॥1॥ ಫಾಲನೇತ್ರ ನರಸಿ। ಪರಿ ಪಾಲಿಸಮ್ಮ ಸರಸಿ। ಪಾರ್ವತಿ ಮುಖಿ ಜಾಣಾನರಸಿ। ನೀ ಪರಿಪಾಲಿಸಮ್ಮ ಸರಸಿ। ಅಂಬ ಬಾಲಕೃಷ್ಣಗೆ ತೋರಿಸಿ ಲಾಭವತೋರಿ ಕೃಪಾಕೊಡು॥2॥ ಸುರರೆಲ್ಲರು ಕೂಡಿ। ನಾನಾ ಪರಿಯಲ್ಲಿ ಕೊಂಡಾಡಿ। ಕರವ ಮುಗಿದು ಬೇಡಿ। ಕಾಂಚನ ಕೈಗಾರಿಕೆ ನೀಡಿ। ಅಂಬಾ ಶಿಖರದಿ ನೆಲಸಿದೆ ಸಿರಿದೇವಿ ಚತುರೆ ಶ್ರೀ ಚಾಮುಂಡಿಕೆ॥3॥

ಮಹಾಶಕ್ತಿ ತಾಯೆ ದೇವಿ — ರಾಗ: ರೀತಿಗೌಳ

ಮಹಾಶಕ್ತಿ ತಾಯೆ ದೇವಿ ಚಾಮುಂಡಿಮಾಯೆ। ಪ್ರಣವ ರೂಪಿಣಿ ಮಂತ್ರ ಸ್ವರೂಪಿಣಿ। ಆದಿ ಶಕ್ತಿಮಾಯೆ॥ಪ॥ ಬ್ರಹ್ಮ ವಿಷ್ಣು ಶಿವರೂಪಿಣಿ। ನೀನೆ ಮಹಿಷ ಮರ್ಧಿನಿ। ನೀನೆ ಮಹಿಷ ಮರ್ಧಿನಿ ಚಂಡ ಮುಂಡ ಸಂಹಾರಿಣಿ। ಸರ್ವಮಂಗಳೆ ಸರ್ವವಂದಿತೆ ಹೇ ಜಗದಂಬಾ ನಮೋನಮೋ॥1॥ ಹೇ ಸುಖಕಾರಿಣಿ ಹೇ ದುಃಖ ನಿವಾರಿಣಿ। ಮಹಾಪಾತಕ ನಾಶಿನಿ। ಮಹಾಪಾತಕನಾಶಿನಿ ಶಿಷ್ಟ ಸಂರಕ್ಷಣಿ ದುಷ್ಟ ಸಂಹಾರಿಣಿ। ಹೇ ಜಗಜ್ಜನನಿ ನಮೋ ನಮೋ ॥2॥ ಕಲ್ಯಾಣ ಕಾರಿಣಿ

ನಮೋ ನಮೋ ಸಿಂಹವಾಹಿನಿ ನಮೋ ನಮೋ ಕಾಳಿ ಕಾತ್ಯಾಯಿನಿ ದುರ್ಗ ಭವಾನಿ ಹೇ ನಾರಾಯಣಿ ನಮೋ ನಮೋ।।3।।

ಜೈ ಜೈ ಮಾ ಜಗದಂಬಾ **ರಾಗ: ಪುನ್ನಾಗವರಾಳಿ**

ಜೈ ಜೈ ಮಾ ಜಗದಂಬಾ। ಜೈ ಜೈ ಮಾ ಶಿವಗಂಗಾ।।ಪ।। ಭವತಾರಿಣಿಯೇ ಹೇ ಮಾತಾ। ಭಗವತಿ ಪಾದಕೆ ವಂದಿಸುವೆ।।1।। ಮಹಿಷಾಸುರನನ್ನು ಸಂಹರಿಸಿ। ಭಕುತರ ಪೊರೆಯುವ ಹೇತಾಯೇ।।2।। ಮಕ್ಕಳ ಪೊರೆಯುವ ಹೇ ತಾಯೇ। ದಿವ್ಯಾಮೃತವನು ಕೊಡುತಾಯೆ।।3।।

ಮುಗುಳು ನಗೆಯ ಬೀರಿ ತಾಯಿ **ರಾಗ: ವರಾಳಿ**

ಮುಗುಳು ನಗೆಯ ಬೀರಿ ತಾಯಿ ನಿಂತಿಹಳು। ಭಕ್ತಜನರ ಪೊರೆಯೆ ಗಿರಿಗೆ ಬಂದಿಹಳು। ಸಿಂಹ ಏರಿ ಬಂದು ಭುವಿಯ ಪಾಪ ಕಳೆದು। ಬೆಟ್ಟದಿ ನೆಲೆಸಿಹಳು ತಾ ಚಾಮುಂಡಿ।।1।। ನೂರಾರು ಜನುಮದ ಪುಣ್ಯವೇನೋ। ಕೈಲಾಸ ತೊರೆದು ಬಂದಿಹಳಿಲ್ಲಿ। ಮಹಿಷನ ಮರ್ದನಮಾಡಿದ ಕಾರಣ। ದಣಿದು ನಿಂತಿಹಳು ಈ ಗಿರಿಯಲ್ಲಿ।।2।। ಪೂಜಿಸೆ ಕಳೆವಳು ರಾಗದ್ವೇಷ। ಭಜಿಸಲು ತೊರೆವಳು ಭವದ ಪಾಶ। ಭವಭಯಹಾರಿಣಿ ಪರಶಿವ ಭಾಮಿನಿ। ಇಳೆಯ ಸಲಹಲು ಬಂದ ಓಂಕಾರರೂಪಿಣಿ।।3।। ಕಾಮಿತ ವರಗಳ ನೀಡುವಳು। ಭಕ್ತರ ಮನದಿ ನೆಲೆಗೊಂಡಿಹಳು। ತೊಡಕಿನ ಜೀವನವಾ ಕಳೆವಳು। ಈ ಧರೆಯ ಬಾಳ್ವೆಯ ಬೆಳಗಿಪಳು।।4।।

ಶ್ರೀ ಚಾಮುಂಡೇಶ್ವರೀ ಅಮ್ಮ

ಶ್ರೀ ಚಾಮುಂಡೇಶ್ವರೀ ಅಮ್ಮ ಶ್ರೀಚಾಮಂಡೇಶ್ವರೀ। ಸಿಂಹವಾಹಿನಿ ಮಹಿಷಾಸುರ ಮರ್ಧಿನಿ।।ಪ।। ಹರನೇ ತಾನೋದ ಶೃಂಗಾರ ಲಹರಿ। ಹರಿಯೇ ಮರುಳಾದ ಮಹದೈಸಿರಿ। ಬ್ರಹ್ಮನೆ ಬೆರಗಾದ ವಾಗ್ವೈಖರಿ ಕರ್ನಾಟ ಸಾಮ್ರಾಜ್ಯ ಕಾಮೇಶ್ವರೀ।।1।। ನಾಡಾಳೋ ರಾಯರ ರಾಜೇಶ್ವರಿ। ಬೇಡಿದ ವರನಿಡೋ ಭಾಗ್ಯೇಶ್ವರಿ। ಒಡೆಯರ ಪಾಲಿಸು ಪರಮೇಶ್ವರೀ। ಕರ್ನಾಟ ಸಾಮ್ರಾಜ್ಯ ಕಾಮೇಶ್ವರಿ।।2।।

ಮಾಮವ ಸದಾ ಜನನಿ **ರಾಗ: ಕಾನಡ–ರೂಪಕತಾಳ**

ಮಾಮವ ಸದಾ ಜನನಿ ಮಹಿಷಾಸುರ ಸೂದನಿ ಅಂಬ।।ಪ।। ಸೋಮಬಿಂಬ ಮನೋಹರೆ ಸುಮುಖಿ ಸೇವಕಾಖಿಲ ಸಾಮಗಾನ ನಿರತಾ ಕಟಾಕ್ಷ ವಿಲಾಸಿನಿ ಅಂಬ।।ಅ.ಪ।। ಕುರು ಮೇ ಕುಶಲಂ ಸದಾ ಕಮಲನಾಭಾನುಜೇ ನಿರವಧಿಭವ ಖೇದಾ ನಿವಾರಣ ನಿರತೇ ಚಾರುನೂತನ ಘನ ಸದೃಶ ರಾಜಿತವೇಣೀ ದಾರುಣದನು ಜಾಳಿವಿ ದಾರಣಪಟು ಚರಿತೆ ಅಂಬ।।3।।

ಸರಸಿಜನಾಭ ಸೋದರಿ **ರಾಗ: ನಾಗಾಗಾಂಧಾರಿ–ರೂಪಕತಾಳ**

ಸರಸಿಜನಾಭ ಸೋದರಿ। ಶಂಕರಿ ಪಾಹಿಮಾಂ।।ಪ।। ವರದಾಭಯ ಕರಕಮಲೇ ಶರಣಾಗತ ವತ್ಸಲೇ।।ಅ.ಪ।। ಪರಂಧಾಮ ಪ್ರಕೀರ್ತಿತೆ ಪಶುಪಾಶ ವಿಮೋಚಿತೆ ಪನ್ನಗಾಭರಣಯುತೆ ನಾಗಗಾಂಧಾರೀ ಪೂಜಿತಾಬ್ಜಪದೇ ಸದಾನಂದಿತೇ ಸಂಪದೇ ವರಗುರುಗುಹಜನನಿ ಮದಶಮನಿ ಮಹಿಷಾಸುರಮರ್ದಿನಿ ಮಂದಗಮನಿ ಮಂಗಳ ವರಪ್ರದಾಯಿನಿ।।ಚರಣ।।

ಸಾರಸಮುಖಿ ಸಕಲ **ರಾಗ: ಗೌಡಮಲ್ಹಾರ್–ರೂಪಕತಾಳ**

ಸಾರಸಮುಖಿ ಸಕಲ ಭಾಗ್ಯದೇ ಶ್ರೀ ಚಾಮುಂಡೇಶ್ವರಿ।।ಪ।। ಮಾರಜನಕಸೋದರಿ ಮಹಿಷಾಸುರ ಮರ್ದಿನಿ।।ಅ.ಪ।। ಹಸಿತವದನೆ ಆರ್ತ ಹೃದಯೆ ಹರಿಕೇಶ ಹೃದಯೆ ಸದಯೆ ರಸಿಕಜನ ಸನ್ಮೋದ ಹೃಚಿರೆ ರಾಜೇಶ್ವರಿ ಸಲಹೌ ಸತತಂ।।ಚರಣ।। ಚಿಟ್ಟೆಸ್ವರ

॥ ಸಾ ಸ । ನಿದ ಮಪದಮಗರಿ ॥ ಸಾಸ ನಿಧಸರಿ ಮಪದರಿ । ಸರಿಮಗ । ರಿ ಸನಿದಮಪದ ॥ ಮಗರಿಸನಿಧ ಸರೀಮಪಧ ॥

ಚಿಂತಯಾಮಿ ಜಗದಂಬಾ **ರಾಗ: ಹಿಂದೋಳ-ಝಂಪೆತಾಳ**

ಚಿಂತಯಾಮಿ ಜಗದಂಬಾ ಚಾಮುಂಡಾಂಬಾ ಚಿತ್ತರಂಜನ ದಿವ್ಯಕಾಂತಿ ಚಿತ್ರಭಾಂ॥ಪ॥ ಚಿರಾಮೃತ ವರ್ಷನಯನಾಂ ಹರ್ಷ ವರ್ಷದಂ ಚಂದ್ರಪ್ರಭಾಸಮ ಮಂದಹಾಸ ವದನಾಂ॥ಅ.ಪ.॥ ತತ್ವ ಪ್ರಕಾಶಕ ತಾರಕರೂಪಾಂ ಬೃಹದಾತ್ಮಿಕಾಂ ಜ್ಞಾನಾತೀತ ಜ್ಯೋತಿಸ್ವರೂಪಾಂ ತುಂಬುರು ನಾರದಾದಿ ಸೇವಿತ ಚರಣಾರವಿಂದಾಂ ತಾನಲಯ ಮೂರ್ಛನಯುತ ಹಿಂದೋಳ ಪ್ರೀತಾಂ ಧನುಜಮದ ಭಂಜನೀಂ ಧನಧಾನ್ಯ ಸೌಭಾಗ್ಯ ದಾಯಿನೀಂ ಧರ್ಮಸಂಸ್ಥಾಪಿನೀಂ ದುರ್ಗಾ ಮಾದ್ಯಾಂತಾಂ ಶ್ರೀ ವಿದ್ಯಾಂಧರಣಿ ಪಾಲನ ರತಾಂ ಮತಿಂ ನಃ ಪ್ರಚೋದಯಾತ್ಯಲಲಿತಾಂ॥ಚರಣ॥

ಶ್ರೀ ಚಾಮುಂಡೇಶ್ವರಿ ಪಾಲಯಮಾಂ **ರಾಗ: ಬಿಲಹರಿ-ಆದಿತಾಳ**

ಶ್ರೀ ಚಾಮುಂಡೇಶ್ವರಿ ಪಾಲಯಮಾಂ ಕೃಪಾಕರಿ ಶಂಕರಿ ಶ್ರಿತಜನ ಪಾಲಿನಿ ಮಹಾಬಲಾದ್ರಿವಾಸಿನಿ ಮಹಿಷಾಸುರ ಮರ್ದಿನಿ॥ಪ॥ ವಾಚಾಮಗೋಚರ ಮಹಿಮ ವಿರಾಜಿತೆ ವರಗುಣ ಭರಿತೇ ವಾಕ್ಪತಿ ಮುಖಸುರ ವಂದಿತೆ ವಾಸುದೇವ ಸಹಜಾತೆ॥ಅ.ಪ॥ ರಾಕಾ ನಿಶಾಚರ ಸನ್ನಿಭವದನೆ ರಾಜೀವ ಲೋಚನೆ ರಮಣೀಯ ಕುಂದರದನೆ ರಕ್ಷಿತ ಭುವನೇ ಮಣಿರಶನೆ ಮೂಕವಾಕ್ಪ್ರದಾನ ವಿಖ್ಯಾತೆ ಮುನಿಜನ ನುತ ಸುಪ್ರೀತೆ ಶ್ರೀಕರ ತಾರಕ ಮಂತ್ರತೋಷಿತೆ ಚಿತ್ತೇ ಸದಾ ನಮಸ್ತೆ॥ಚರಣ॥ ಚಿಟ್ಟೆಸ್ವರ

॥ ಸಾಸನಿಧ ರಿಸನಿಧಪ ಧನಿದಪಮಗ । ಧಪಾಮಗರಿಸರಿ । ಗಪಮಗ ರಿಸನಿಧ ॥ ಸಾಸರೀಗ ಪಾದ ಮಗರೀಗಪದ । ಸರಿಗಪ ಮಗರಿಸ । ರಿಗಪಧ ಸನಿಧಪ ॥ ಧಸರಿಗ ಪಧಸರಿ ಗಪಧಸ ನಿಧರಿಸ। ರೀರೀ ಸನಿಧಪ । ಮಗರಿಸ ರೀ ರೀ ॥ ಗಪಪದ ಧಸನಿದ ರೀೀ ಸಾನಿಧಪ । ಧಾಪಾಮಗರಿ । ಸಾ ರೀ ಗಪಧ॥

ತಪ್ಪುಲನ್ನಿಯು ತಾಳುಕೊಮ್ಮು **ರಾಗ: ಗೌಳಿಪಂತು-ಆದಿತಾಳ**

ತಪ್ಪುಲನ್ನಿಯು ತಾಳುಕೊಮ್ಮು ಚಾಮುಂಡೇಶ್ವರಿ ನಾದು॥ಪ॥ ಮೆಪ್ಪುಲಕೈ ಮಾಟಪಲಿಕಿ ಮೇಲ್ಮಿ (ಯೌ) ಗೆಂಜಿನ ನಾದು॥ಅ॥ ಅಂಬನಾದು ವಿನ್ನಪಮುಲನ್ನಿಯು ನಾದರಿಂಚುಮನಿ। ನಮ್ಮಿತಿಹರಿ ಕೇಶಜಾಯೇ ರಕ್ಷಿಂಚವಲೆ ನುಮಾಯೇ॥ಚರಣ॥ಜಯ

ಸಂಪತ್ಪ್ರದೇ ಶ್ರೀ ಚಾಮುಂಡೇಶ್ವರಿ

ಸಂಪತ್ಪ್ರದೇ ಶ್ರೀ ಚಾಮುಂಡೇಶ್ವರಿ। ಸಲಹೆನ್ನನು ಸರ್ವೇಶ್ವರಿ॥ಪ॥ ಸಂಪದ ನಿನ್ನ ಸುಗುಣಾವಳಿಯ। ಇಂಪಾ ಪಣ್ಣೆಪೆ ಇಂದೀವರಾಕ್ಷಿ॥ಅ.ಪ॥ ಮಂಗಳಾಂಗಿ ಶಿವೆ ಮಹಾನುಭಾವೆ। ಸಂಗೀತರತ್ನ ಮಹಾನುಭಾವೆ॥ ಭೃಂಗ ಕುಂತಳೆ ಬಲವೈರಿನುತೆ। ಅಂಗಜಾಸಳೆ ಹರಿಕೇಶಮೂರ್ತಿ॥ಚ॥

ಆರತಿ ಬೆಳಗಿರೆ ಶಂಕರಿಗೆ (ಆರತಿ) **ರಾಗ: ಬೇಹಾಗ್**

ಆರತಿ ಬೆಳಗಿರೆ ಶಂಕರಿಗೆ ವರ ದುರ್ಗಾದೇವಿ ಸರಸ್ವತಿಗೆ॥ಪ॥ ನಾರಿಯರೆಲ್ಲರು ಸೇರುತ ಮಂಗಳ ಗೀತೆಯ ಹಾಡುತ ಹರುಷದಲಿ॥ಅ.ಪ॥ ದನುಜಸಂಹಾರಿಣಿ ವಿಶ್ವಕಲ್ಯಾಣಿ। ಚಾಮುಂಡೇಶ್ವರಿ ದಯಾಮಯಿ। ಹಿಮಗಿರಿ ನಂದಿನಿ ಮೂರ್ಜಗ ವಂದಿನಿ। ಆನಂದರೂಪಿಣಿ ಪಾರ್ವತಿಗೆ॥1॥ ವಿದ್ಯಾದಾಯಿನಿ ಬುದ್ಧಿ ಪ್ರದಾಯಿನಿ। ವಿಶ್ವವಿನೋದಿನಿ ಶಾರದೆಗೆ। ವೀಣಾಪಾಣಿ ಪುಸ್ತಕಪಾಣಿ। ಬ್ರಹ್ಮನ ರಾಣಿ ಭಾರತಿಗೆ॥2॥ ಕ್ಷೀರಶರಧಿಸುತೆ ಸುರವರಸನ್ನುತೆ। ಶ್ರಿತಜನ ಪಾಲಿನಿ ಭಾಗ್ಯಪ್ರದಾಯಿನಿ। ಆದಿ ನಾರಾಯಣಿ ಕಮಲಿನಿಗೆ। ವೇದೋದ್ಧಾರೆ ಗಾಯಿತ್ರಿಗೆ॥3॥

ರಕ್ತಬೀಜಾಂಕಿತೆಗೆ ಸಕಲ ಜಗದಾಂಬಿಕೆಗೆ (ಮಂಗಳ) **ರಾಗ: ಆನಂದಭೈರವಿ**

ರಕ್ತಬೀಜಾಂಕಿತೆಗೆ। ಸಕಲ ಜಗದಾಂಬಿಕೆಗೆ। ರಕ್ತಾಂಬಲಹೃತ ಈಶಗೇ। ರಕ್ತ ಸುಮಾರಿನಿಗೆ। ರಕ್ತ ಸುಮಮಾಲಿನಿಗೆ। ರಕ್ತೇಶ್ವರಿಗೆ। ರಕ್ತವರ್ಣಾಂಗಿಗೆ।। ಮಂಗಳಂ।। ವೀರನಾರಾಯಣಿಗೆ ರೌದ್ರಾವತಾರಿಣಿಗೆ। ಘೋರರೂಪಿನ ಮಹಾ ಚಾಮುಂಡಿಗೆ। ವಾತ್ಸಲ್ಯ ಸಾಗರಿಗೆ ಕವಿಜನೋದ್ಧಾರಿಣಿಗೆ। ಸರ್ವಮಂಗಳೆಗೇ ಚಾರುಪುಳಿನ ಪುರವಾಸಿನಿಗೆ। ಸರ್ವೇಶ್ವರಿಗೆ ಚಂಡ ಮುಂಡಹರಗೇ। ಧರೆಗಧಿಕ ವೈಮಾನ ಶಿಖರಾದ್ರಿ ಮಂದಿರೆಗೆ। ಗುರು ಮಧ್ವ ಶ್ರೀ ಕೃಷ್ಣ ಅನುಜಾತೆಗೆ। ಚಾರು ಚಂದ್ರಾನನಗೆ ಚಿದ್ರೂಪಿಗೆ। ಮಂಗಳಂ ಪುರುಹೂತ ಪೂಜಿತೆಗೆ ।।ಮಂಗಳಂ।।

ಜಯ ಮಂಗಳಂ ಜಗನ್ಮಾತೆಗೀಗ (ಮಂಗಳ) **ರಾಗ: ಆನಂದಭೈರವಿ**

ಜಯ ಮಂಗಳಂ ಜಗನ್ಮಾತೆಗೀಗ। ಶುಭಮಂಗಳಂ।।ಪ।। ರಕ್ತ ಬೀಜಾಸುರನ ಯುಕ್ತಿಯಿಂದಲಿ ಕೊಂದೆ। ಶಕ್ತಿಯೇ ನೀಯೆಮ್ಮ। ರಕ್ಷಿಸಬೇಕಮ್ಮ।।1।। ದುರುಳ ಮಹಿಷಾಸುರನ ಸೀಳಿ ಶುಂಭನ ಕೊಂದೆ। ಕಾಳಿಯೇ ನೀಯೆಮ್ಮ ಕಾಪಾಡಬೇಕಮ್ಮ।।2।। ಶುಂಭನಿಶುಂಭಾನ ದುಂಬಿಯಿಂದಲಿ ಕೊಂದೆ। ಶಾಂಭವಿ ನೀಯೆಮ್ಮ ಸಲಹಬೇಕಮ್ಮ।।3।।

❖ ❖ ❖

ಶ್ರೀ ಮೂಕಾಂಬಿಕಾ ದೇವಿ

ಬೆಳಗಾಯಿತೇಳಮ್ಮ ಮೂಕಾಂಬಿಕೆ (ಉದಯರಾಗ) **ರಾಗ:ಭೌಳಿ-ಛಾಪುತಾಳ**

ಬೆಳಗಾಯಿತೇಳಮ್ಮ ಮೂಕಾಂಬಿಕೆ। ಎದ್ದು ನೀಡಮ್ಮ ಶುಭವನ್ನು ಈ ಲೋಕಕ್ಕೆ। ಕೊಡಚಾದ್ರಿ ತಂಗಾಳಿ ಹಿತವನೀಡಿತ್ತು। ಬಳುಕುತಲೆ ಚಿಗುರೆಲೆಗಳು ನಾಟ್ಯವಾಡಿತು।। ಶ್ರೀಹರಿನಿನ್ನ ಚಿನ್ಮಯ ರೂಪವಾ। ಕಾಣುವ ತವಕದಿ ಬಂದಿಹನು। ಪರಶಿವನಿನ್ನಾ ಪಾವನ ಮೂರ್ತಿಯಾ ನೋಡಲು ಎದುರಲಿ ನಿಂದಿಹನು।।1।। ನಾಮವ ಜಪಿಸುತ ಧ್ಯಾನವ ಮಾಡುತ। ಕೋಲ ಮಹಾಮುನಿಕಾದಿಹನು। ಭಜನೆಯ ಮಾಡುತ ಮಹಿಮೆಯ ಹಾಡುತಾ। ಭಕುತರು ನಯದಲಿ ನಿಂದಿಹರು। ಮಹಿಷನ ಮದವಳಿಸಿದ ವಿಧದಲಿ। ನಮ್ಮೀ ಪಾಪದ ಹೊರೆ ಇಳಿಸು।। ಕಂಸನಾ ಗರ್ವವಾ ತುಳಿದಾ ತೆರದಲಿ ಕಷ್ಟವನೆಲ್ಲವಾ ನೀನಳಿಸು।।2।।

ಬರುವಳು ತಾಯೀ ಅಂಬಿಕೆ **ರಾಗ: ಶ್ರೀರಾಗ**

ಬರುವಳು ತಾಯೀ ಅಂಬಿಕೆ। ತರುವಳು ಐಸಿರಿ ಮೂಕಾಂಬಿಕೆ।।ಪ।। ಪಟ್ಟೆ ಸೀರೆಯನುಟ್ಟು। ರತ್ನಕಂಚುಕ ತೊಟ್ಟು। ಇಟ್ಟು ವಜ್ರದ ಪಟ್ಟಿ। ಕಂಠಿಕಟ್ಟಾಣಿ ತೊಟ್ಟು।।1।। ದುಂಡು ಮಲ್ಲಿಗೆ ಜಾಜಿ। ಸುರಗಿ ಸೇವಂತಿಗೆ। ದಂಡೆ ಮುಡಿದ ತಾಯಿ। ಅಂದದಿ ಬಳುಕುತಾ।।2।। ಮುತ್ತು ಮಾಣಿಕ್ಯ ಪಚ್ಚೆ। ಚೊಕ್ಕ ಚಿನ್ನದ ಸರ। ಹೊತ್ತು ಹವಳ ಹಾರ ತೊಟ್ಟ ಭಾಗ್ಯದ ಲಕ್ಷ್ಮಿ।।3।। ಚಿತ್ತವ ಸೆಳೆಯುತ ಭಕ್ತರ ಮನೆಗಿಂದು। ಭಾಗ್ಯವ ಕೊಡಲೆಂದು ಶಾರದೆ ಸನ್ನುತೆ ಇಂದು।।4।। ಜಗದಂಬಿಕೆ .. ಮೂಕಾಂಬಿಕೆ। ಮೂಕಾಂಬಿಕೆ ಅಂಬ ಜಗದಂಬಿಕೆ।।5।।

ಕೊಲ್ಲೂರು ಮೂಕಾಂಬಿಕೆ **ರಾಗ: ಸಿಂಧುಭೈರವಿ-ಆದಿತಾಳ**

ಕೊಲ್ಲೂರು ಮೂಕಾಂಬಿಕೆ। ಜಗದ್ರಕ್ಷಕಿ ಜಗದಂಬಿಕೆ।।ಪ।। ಪಲ್ಲವ ಪದಯುಗಕೆ। ಸಲ್ಲಿಸುವೆ ಕೋರಿಕೆ।।ಅ.ಪ।। ಮಲ್ಲಮರ್ದನ ಸೋದರಿ। ಬಲವಳಲ್ಲವೆ ನೀನು। ಗುಲ್ಲುಮಾಡದೆ ನಾನು(ನಿನಗೆ) ಮಲ್ಲಿಗೆ ಅರ್ಪಿಸುವೆನು।।1।। ನಿಲ್ಲದೆ ಭಜಿಸುವೆನು। ಮಲ್ಲೇಶನ ವಲ್ಲಭೆ। ಫುಲ್ಲಲೋಚನೆ ದೇವೀ। ಎಲ್ಲರ ಸಲಹು ತಾಯೆ।।2।।

ಆರೋಗಣೆಗೇಳು ಜಗದಾಂಬಾ **ರಾಗ: ಮಧ್ಯಮಾವತಿ**

ಆರೋಗಣೆಗೇಳು ಜಗದಾಂಬಾ ಮಂಗಳಾರತಿಯನು ಮಾಡಬೇಕಂಬಾ॥ಪ॥ ಸಣ್ಣಕ್ಕಿ ಅನ್ನವು ಮೃದುವಾಗಿದೆ ತಾಯೆ ಬೆಣ್ಣೆ ಕಾಸಿದ ತುಪ್ಪ ಹ್ಯಾಗಿದೆಯೆ। ಎಣ್ಣೂರಿಗೆ ವಡೆ ಅತಿರಸ ಕಡುಬನು ಚಿಣ್ಣರಿಗಿಲ್ಲದೆ ನಿನಗೀವೆನಂಬ॥1॥ ಮೊಸರೋಗರ ಮುಂತಾಗಿದೆ ದೇವಿ ಹಸನಾದ ಹುಗ್ಗಿಯು ಹ್ಯಾಗಿದೆಯೆ। ಹಸಿಬಿಸಿಯಾಗಿದೆ ಮಾಡಿದ ಮೇಲೋಗರ ಬಿಸುಜಾಂಬಕಿ ತಾಯೇ ಹಸಿದೇ ಏಳಮ್ಮಾ॥2॥ ಸಡಗರದಿಂದಲಿ ಅಡಿಗೆಯಾಗಿದೆ ತಾಯೆ ಹುಡುಗರ ತಪ್ಪೆಲ್ಲಾ ಮನ್ನಿಸಮ್ಮ। ಅನುವಾಗಿದೆ ಕಲಸೋಗರ ಮೇಲೋಗರ ಅಣಿಯಾಗು ಕೊಲ್ಲಾಪುರದ ಮೂಕಾಂಬಿಕಾ॥ ಮಂಗಳಾರತಿಯನು ಮಾಡಬೇಕಂಬಾ॥3॥

ಕೊಲ್ಲೂರು ಸಿರಿದೇವಿ ಮೂಕಾಂಬಿಕೆ **ರಾಗ: ಸೌರಾಷ್ಟ್ರ-ಆದಿತಾಳ**

ಕೊಲ್ಲೂರು ಸಿರಿದೇವಿ ಮೂಕಾಂಬಿಕೆ। ಕರುಣೆಯಲಿ ನೋಡಮ್ಮ ಜಗದಂಬಿಕೆ। ಕಂದನನು ರಕ್ಷಿಸಲು ಕಾವಲಿಗೆ ನೀನಿರಲು। ನೋವು ಭಯ ಅಂಜಿಕೆಯು ನಮಗೇತಕೆ। ತಾಯೆ ನಮಗೇತಕೆ॥1॥ ಮೂಕಾಸುರ ಸಂಹಾರಕ್ಕೆ ಮೈ ತಾಳಿ ಬಂದೆ। ಕೊಲ್ಲೂರ ಮಣ್ಣಿನಲಿ ಕೃಪೆಮಾಡಿ ನಿಂದೆ। ಆರ್ತರಿಗೆ ಆನಂದ ವಾಹಿನಿಯ ತಂದೆ। ನಿನ್ನನ್ನು ಕಾಣದವ ಇದ್ದರೂ ಒಂದೇ ಇರದಿದ್ದರೂ ಒಂದೇ॥2॥ ಕಣ್ಣೆರಡು ನಿನ್ನಂದ ನೋಡಿ ತಣಿಯಬೇಕು। ಕೀರುತಿಯ ನಾಲಿಗೆಯು ನುಡಿದಿರಬೇಕು। ಕಿವಿ ಎರಡು ನಾಮಾಮೃತ ಕೇಳಿರಬೇಕು। ಕೈ ಎರಡು ಭಕ್ತಿಯಲಿ ಮುಗಿದಿರಬೇಕು ಎಂದೂ ಮುಗಿದಿರಬೇಕು॥3॥ ಮನವೆಲ್ಲ ನಿನ್ನ ನೆನಪು ತುಂಬಿರಬೇಕು। ಮನಕವಿದ ಮೌಢ್ಯವದು ನೀಗಿರಬೇಕು। ಮೂಕಾಂಬಿಕೇ ಇನ್ನು ಮೌನವೇಕೆ। ಮೊರೆಕೇಳಮ್ಮಾ ಬಂದು ದಯೆ ತೋರಮ್ಮ॥4॥

ಇಲ್ಲಿರುವ ದೇವತೆಯು ಮೂಕಾಂಬಿಕಾ

ಇಲ್ಲಿರುವ ದೇವತೆಯು ಮೂಕಾಂಬಿಕಾ। ಇಲ್ಲಿ ಹರಿಯುವ ನದಿಯು ಸೌಪರ್ಣಿಕಾ। ಇಲ್ಲಿ ನಡೆಯುವ ಘಟನೆ ಎಲ್ಲವೂ ದೈವಿಕಾ। ಕೊಲ್ಲೂರು ಭೂಮಿಯಲಿ ದೇವಲೋಕ॥1॥ ಈ ದೇವಿ ಆಭರಣ ಇತಿಹಾಸ ತುಂಬುತಿರೆ। ಈ ದೇವಿ ಮುಖಭಾವ ನವಜೀವನ ಹೇಳುತಿರೆ। ಸ್ವರ್ಣರೇಖೆಯ ಕಂಡು ರೋಮಾಂಚ ಮೂಡಿದೆ। ಸ್ವರ್ಗವೇ ಆಯಿತು ಈ ದೇವಿ ಆಸರೆ॥2॥ ನವರಾತ್ರಿಯಲಿ ಮೈ ತಾಳಿ ನಿಂತು। ಭಕುತರನು ಹರಸುವಳು ಕೋರಿಕೆಯನ್ನಿತ್ತು। ಶರಣಾಗಿ ನಮಿಸಿದರೆ ಹರಕೆ ಹೊತ್ತಲ್ಲಿ। ನಗು ನಗುತ ಹರಸುವಳು ಶುಭಮಸ್ತು ಶುಭಮಸ್ತು॥3॥

ವಂದನೆಗೈಯ್ಯುವೆನಿಂದು ಮೂಕಾಂಬಿಕೆ

ವಂದನೆಗೈಯ್ಯುವೆನಿಂದು ಮೂಕಾಂಬಿಕೆ ಬಂದೆನ್ನ ಸಲಹು ತಾಯೆ। ದೇವಿಯೆ ಭವಬಂಧನ ಬಿಡಿಸು ಮಾಯೆ ಕೇಳವ್ವ ನಾನೆಂದುದ ನೀಶಜಾಯೆ ಈ ದೇಹದಿ ನೊಂದಿರ್ಪೆನೀಗ ಕಾಯೆ॥ ಅಜ್ಞಾನದಿಂದ ನೊಂದನರಿಯದೆ ಮೋಹ ಜಾಲಗಳೆಂದು ಸತ್ಕೀರ್ತನೆಯ ತೊರೆಯದಾನಂದದ -ಲಿದ್ದೆನು ಪಾರ್ವತಿಯೆ ನಾನೆಂದು ನಿನ್ನ ಮರೆಯೆನೆನ್ನುತ ಕುಂದಣದಾರತಿಯ ಬೆಳಗುವೆ॥1॥ ಭೂಮಿಗುನ್ನತ ಮುನಿಸ್ತೋಮ ಕೂಡಿರುವಂಥ ಹೇಮಾದ್ರಿವರಸಂಭವೆ ಶಂಕರಾಚಾರ್ಯ ಸ್ವಾಮಿಗೆ ಒಲಿದಿರುವೆ। ಮತ್ತವರಿಟ್ಟ ನೇಮದಿಂದಲಿ ಮೆರೆವೆ। ಶ್ರೀರಾಮದೇವರ ನಾಮವೆನ್ನಯ ಜಿಹ್ವೆಯೊಳು ನಿಜದಾಮ ಗೈದಿರುವಂತೆ ನೀ ಸುಪ್ರೇಮವಿರುಸುತಲೆನ್ನ ಕಾಯೆ ಮಹಾಮಹಿಮೆ ನೀನೆಂದು ನಂಬುತ ಹೇಮದಾರತಿಯ ಬೆಳಗುವೆ॥2॥ ಅಂಬುಜೋದ್ಭವನತಿ ಬಿಂಬಮುರಿದು ಹರ ಶಂಭು ಮಹೇಶನನು ಸೇರಿರುವೆ ನೀ ಶಾಂಭವಿ ಸಲಹೆನ್ನನೂ ನಿನ್ನಾಟದ ಬೊಂಬೆಯಾಗಿರುವೆ ನಾನು ಸಾಷ್ಟಾಂಗದಿ ಕುಂಭಿನಿಗೆರಗುವೆನು। ಶಂಕರಿಯೆ ನೀನು ಅಂಬುರುಹದಳನೇತ್ರೆ ಶ್ರೀದುರ್ಗಾಂಬಿಕೆ ಸರ್ವಾಪರಾಧಗಳೆಂಬ ಗಿರಿಗೆ ವಜ್ರಾಯುಧಳೆ ಕರುಣಾಂಬುಧಿಯ ತೋರೆಂದು ಬೇಡುತ ಅಂಬುಜದಾರತಿಯ ಬೆಳಗುವೆ॥3॥ ರಾಜಿಪ ಸುರತಮೆ ರಾಜನ ಮಕುಟದಿ ರಾಜವೈಭವಗಳಿಂದ ಪೂಜೆಯಗೊಂಬೆ ರಾಜಿಪಾನನವು ಚಂದ। ನೀನಿರುತಿಪ್ಪ ರಾಜ್ಯವಿದೇನಾನಂದ। ಸೋಮೇಶವಲ್ಲಭ

ರಾಜರಾಜಗಂಡ ಭಾರ್ಗವ ರಾಜ ನಿರ್ಮಿತ ಭೂಮಿಯೊಳಗೆ ವಿರಾಜಿಸುವ ಪೊಳಲಿಯೊಳು ನೆಲೆಸಿಹ ರಾಜರಾಜೇಶ್ವರಿಯೆ ಪಾಲಿಸು ರಾಜಿಸುವಾರತಿಯ ಬೆಳಗುವೆ॥4॥

ಹೂವ ಪಾಲಿಸು ತಾಯಿ ಮೂಕಾಂಬಿಕೆ **ರಾಗ: ಆರಭಿ**

ಹೂವ ಪಾಲಿಸು ತಾಯಿ ಮೂಕಾಂಬಿಕೆ ಹೂವ ಪಾಲಿಸೆ ದೇವಿ॥ಪ॥ ಕುಸುಮ ಗಂಧಿನಿ ನಿನ್ನ ಚರಣಕೆ ಎರಗುವೆ। ನಾ ಮುನ್ನ ಕರಮುಗಿದು ಬೇಡಿಕೊಂಬೆ। ನಿನ್ನೊಳು ನಾನೀಗ ಮರೆಯದೆ ಪಾಲಿಸೆ ಮುಡಿದ ಮಲ್ಲಿಗೆಯ॥1॥ ಕುಸುಮಗಂಧಿನಿ ನಿನ್ನ ಚರಣಕ್ಕೆ ಎರಗುವೆ। ನಾ ಮುನ್ನ ಸೆರಗೊಡ್ಡಿ ಬೇಡಿ ಕೊಂಬೆ। ನಿನ್ನೊಳು ಈಗ ಮರೆಯದೆ ಪಾಲಿಸೆ ಮುಡಿದ ಸಂಪಿಗೆಯ॥2॥ ಮರುಗ ಮಲ್ಲಿಗೆ ಸಂಪಿಗೆ ಕ್ಯಾದಿಗೆ ಅರಳಿದ। ತಾವರೆಯ ದಾಸವಾಳ ಪಾರಿಜಾತ ಘಮಘಮಿಸುವಂತಹ। ತಾಪತ್ರಯ ಬಿಡಿಸುವಂಥ ಸೌಭಾಗ್ಯ ಒಲಿಸುವಂಥ ಹೂವ ಪಾಲಿಸೆ॥3॥

ಸತ್ಯದೇವಿ ಕೊಡು ಪ್ರಸಾದವ **ರಾಗ: ಮಧ್ಯಮಾವತಿ**

ಸತ್ಯದೇವಿ ಕೊಡು ಪ್ರಸಾದವ ಕೊಡು ಪ್ರಸಾದವನು ಅಂಬಿಕೆ। ದೇವಿ ತಾಯೆ। ಎಮ್ಮ ಮೊರೆಯ ಲಾಲಿಸೇ। ಮೂಕಾಂಬಿಕೆ॥ ಬಿಡದೆ ನಿಮ್ಮ ಪಾದವನ್ನು ದೃಢದಿ ತೊಯ್ದಿ ತನುಗಳನ್ನು ಪಡೆದು ಪ್ರಸಾದವನ್ನು ಮುಡಿದು ಧನ್ಯಳಾಗುವೆನು॥1॥ ಕೊಂಕಿದಾ ಕೊರಳು ಕುಂತಳೇ। ಮಧ್ಯದಲ್ಲಿ ವಂಕಿ ಚಂದ್ರ ಬಟ್ಟು ಬೈತಲೆ। ಅಲಂಕರಿಸೀ ಪೂಜಿಸಿರುವೆ ಅಮರ ಲೋಕದಾ ಸುಮವಾ। ಶಂಕರನಾ ರಾಣಿ ನಿಮಗೆ ಸೆರಗನೊಡ್ಡಿ ಬೇಡಿಕೊಂಬೆ॥2॥ ತ್ರಿಜಗವಂದ್ಯೆ ತ್ರಿಪುರ ಸುಂದರಿ। ಓಂಕಾರಿ ಅಜನ ಪಿತನ ನಿಜ ಸಹೋದರಿ। ಭುಜಗವೇಣಿ ನಿಮ್ಮ ಬಾಹು। ಭುಜದಲಿರುವ ಪುಷ್ಪ ಸರವ। ಗಜವನೇರಿ ಕೊಡು ಎನಗೆ। ನಿಜವ ಕೋರಿ ನಿಮ್ಮವರಿಗೆ॥3॥ ಅನ್ನಪೂರ್ಣೆ ಅಮರ ವಂದಿತೇ। ಮಾತಂಗರಾಜ। ಕನ್ಯಾಭರಣ ಕನಕ ಭೂಷಿತೆ। ನಿನ್ನ ಮೊರೆಯ ಹೊಕ್ಕಿ ನಾನು। ಇನ್ನು ಪೇಳ್ವೆ ನೀನು। ಸಂಪನ್ನೆ ನಿನ್ನ ಮುಡಿಯಲಿರುವ ಸುವರ್ಣ ಕೇದಿಗೆಯ ಹೂವ॥

ಕೊಲ್ಲೂರು ಕ್ಷೇತ್ರದಲಿ **ರಾಗ: ಮಲಯಮಾರುತ**

ಕೊಲ್ಲೂರು ಕ್ಷೇತ್ರದಲಿ ಕೊಡಚಾದ್ರಿ ಗಿರಿಮಧ್ಯೆ। ನಿಂದಿಹಳು ನಮ್ಮಮ್ಮ ಮೂಕಾಂಬಿಕೆ। ಭಕ್ತಜನರ ಸಂಕಷ್ಟ ತಾಪಗಳ ನೀಗಿಸುತ್ತಾ। ಮಮತೆಯ ಮೈದೋರಿ ಕೈಪಿಡಿದು ಕಾಯುವಳು॥1॥ ಮೂಕಾಸುರನ ಕೊಂದು ಮೂಕಾಂಬಿಕೆ ಎನಿಸಿ। ಚಂಡಮುಂಡರ ತರಿದು ಚಾಮುಂಡಿ ಎನಿಸಿ। ದುಷ್ಟ ಜನರ ಸೊಕ್ಕಡಗಿಸಿ ವಿಜಯ ಮಾಲೆಯ ಧರಿಸಿ। ಗಿರಿಬನದ ಸಿರಿರಾಣಿ ಮೆರೆಯುತ್ತಲಿ ರುವಳು॥2॥ ಸೌಪರ್ಣಿಕ ನದಿ ತೀರ ಕಲಕಲ ನಿನಾದದಲ್ಲೂ। ಸುಮನೋಹರ ಬನಸಿರಿಯ ಹಸಿರು ಹಾಸುಗಳಲ್ಲೂ। ಹಕ್ಕಿಗಳಿಂಚರದಲ್ಲೂ ಜೋಗುಳವ ತಾ ಪಾಡಿ। ಉಕ್ಕುತಿಹ ಪ್ರೀತಿಯಲಿ ಲಾಲಿಸುವಳು॥3॥ ನೊಂದು ಅಮ್ಮ ಎನಲು ಅನ್ನಪೂರ್ಣೆಯಾಗುವಳು। ತಾಯೆ ಎಂದವರ ಮನವ ಪುಳಕಿತ ಗೊಳಿಸುವಳು। ತ್ರಾಹಿ ಎನ್ನುವರ ಭಾಗ್ಯ ತಾರೆಯಾಗಿ ಬರುವಳು। ಶಾರದೆ ಸನ್ನುತೆ ದೇವಿ ಒಳಿತೆನ್ನ ಕೋರುವಳು॥4॥

ಕೊಡುತಾಯೆ ಕುಸುಮವನು **ರಾಗ: ಮೋಹನ**

ಕೊಡುತಾಯೆ ಕುಸುಮವನು। ಬೇಡುವೆ ನಾನು॥ಪ॥ ಕೊಡುತಾಯೆ ಕುಸುಮವ। ಪರಕೆ ಸಾಧನವಾದ। ಮರುಗ ಮಲ್ಲಿಗೆ ಜಾಜಿ ಸುರಗಿ ಶಾವಂತಿಗೆ ಹೂವ॥1॥ ಜೀವ ಭೇದಗಳೆಂಬೊ। ಕೇವಲಾನಂದದ। ಸಾವಿರದಳದೊಡನೆ। ಅರಳಿದ ತಾವರೆಯ॥2॥ ಸಂತತ ಅಧಿಕವಾದಂತೆ ನೀ ಮಾಡುತ। ಶಾಂತರೂಪದಲಿರುವ ಸಂಪಿಗೆ ಹೂವಿನ ಸರವಾ॥3॥ ಎಲ್ಲರ ಮನಸಿಗೆ। ಉಲ್ಲಾಸ ತೋರುವ ಮಲ್ಲಿಗೆ ಹೂವಿನ ಸರವ। ಕೊಲ್ಲೂರ ಮೂಕಾಂಬಿಕೆ॥4॥

ಕೊಡು ಪ್ರಸಾದವನು ಅಂಬಿಕೆ **ರಾಗ: ಆನಂದಭೈರವಿ**

ಕೊಡು ಪ್ರಸಾದವನು ಅಂಬಿಕೆ ತಾಯೆ ಎನ್ನ ನುಡಿಯ ಲಾಲಿಸು ಮೂಕಾಂಬಿಕೆ॥ಪ॥ ಲೋಕಪೂಜೆ ಅಮರವಂದಿತೆ....

ಸನ್ನುತಾಂಗಿ। ಲಲಿತಾಂಗಿ ಭ್ರಮರವಂದಿತೆ ಎಮ್ಮ ತಪ್ಪುಗಳನ್ನು ಮನ್ನಿಸಿ। ಬಿನ್ನಪವ ಮಾಡೆ ಎಂದು ಕೊಡೆ ಪ್ರಸಾದವನ್ನು। ಸೆರಗನೊಡ್ಡಿ ಬೇಡಿಕೊಂಬೆ।।

ಆರತಿ ಎತ್ತಿರೆ ನಾರಿಯರೆಲ್ಲರೂ — ರಾಗ:ಅಭೇರಿ

ಆರತಿ ಎತ್ತಿರೆ ನಾರಿಯರೆಲ್ಲರೂ। ಮೂರ್ ಜಗನ್ಮಾತೆ ಮೂಕಾಂಬಿಕೆಗೆ।।ಪ।। ಗಂಧ ಚೆಂದದ ಸಿಂಧೂರ ಕಸ್ತೂರಿ ಇಟ್ಟು। ಚೆಂದ ಚೆಂದದ ಮಣಿಮಾಲೆಯ ಹಾಕಿರೆ। ಮಲ್ಲೆ ಚಂಪಕ ಮಾಲೆ। ಜಾಜಿ ಸೇವಂತಿಗೆ। ಪಾರಿಜಾತದ ಹೂಮಾಲೆಯ ಹಾಕಿರೆ।।1।। ಲೀಲಾ ವಿನೋದಿನಿ ಲಾವಣ್ಯ ಶಾಲಿನಿ। ಲೀಲಲೋಚನೆ ಶ್ರೀ ಶೀಲೇ ನಿರ್ಮಲೆಗೆ। ಮಾನಾಭಿಮಾನಿನಿ। ಮಾಂಗಲ್ಯದಾಯಿನಿ। ಮಣಿದ್ವೀಪವಾಸಿನಿ। ಶ್ರೀವರಲಕ್ಷ್ಮಿಗೆ।।2।। ಅರಿಯದೆ ಮಾಡಿದ ಅಪರಾಧವ ಕ್ಷಮಿಸೆ। ಮರೆಯದೆ ಪಾಲಿಪ ಶ್ರೀಜಗಜನನಿಗೇ। ದಿನಕರ ಕೋಟಿ ತೇಜಪ್ರಕಾಶಿನಿ। ಶಾರದೆ ಸನ್ನುತೆ ಶ್ರೀ ವರಲಕ್ಷ್ಮಿಗೆ।।3।।

ಶ್ರೀ ದುರ್ಗಾದೇವಿ

ಉತ್ತಿಷ್ಠೋತ್ತಿಷ್ಠ ದೇವೇಶಿ (ಸುಪ್ರಭಾತ)

ಉತ್ತಿಷ್ಠೋತ್ತಿಷ್ಠ ದೇವೇಶಿ ಉತ್ತಿಷ್ಠ ಭ್ರಮರಾಂಭಿಕೇ। ಉತ್ತಿಷ್ಠ ಕಟಿಲಾಧೀಶೇ ತ್ರೈಲೋಕ್ಯಂ ಮಂಗಲಂ ಕುರು।। ಶ್ರೀಮಾತರಂಬ ಕರುಣಾನಿಕುರುಂಬಮೂರ್ತೇ ನಮ್ರಾವಲಂಬನಕರಂಬಿತ ಪಾದಬಿಂಬೇ। ಜಾಬಾಲಿಮುಖ್ಯವರದೇ ಪರದೇವತಾ ಯಾ ದುರ್ಗೇ ಕಟೀಲುತಟಗೇ ತವ ಸುಪ್ರಭಾತಮ್।।1।। ದೇವೇಶವಾತಸಲಿಲೇಶನಿಶಾಚರೇಶ - ಪ್ರಾಣೇಶವಹ್ನಿ ಮನುಜೇಶ ಮಹೇಶ ಪೂರ್ವಾಃ। ಗಾಯಂತ್ಯಮುತ್ರಸಮಿತಾ ಅಮಿತಾಃ ಸುರೌಘಾಃ ದುರ್ಗೇ ಕಟೀಲು ತಟಗೇ ತವ ಸುಪ್ರಭಾತಮ್।।2।। ಕುಲ್ಯೋಪಕುಲ್ಯ ಕರುಣೇ ಕುಲಶೈಲಕನ್ಯೇ ಕುಂದೇಂದು ಮಂದಹಸಿತೇ ಕುಟಿಲೇಂದುಚೂಡೇ। ನಂದಿನ್ಯುಪಪ್ಲವಹರೇ ವಿಹರೇರಜಸ್ರಂ ದುರ್ಗೇ ಕಟೀಲುತಟಗೇ ತವ ಸುಪ್ರಭಾತಮ್।।3।। ಯಾ ಭ್ರಾಮರಮ್ ವಪುರಪೂರ್ವ ಮುಪಾದ ದಾನಾ ಧೃಷ್ಟಂ ಸದುಷ್ಟ ಮರುಣಾಸುರಮಾಜಘಾನ। ತಸ್ಮೈತ್ರಿಲೋಕ ಮಹಿತೇ ಸುಹಿತೇ ನಮಸ್ತೇ ದುರ್ಗೇ ಕಟೀಲುಕಲಿಕೇ ತವ ಸುಪ್ರಭಾತಮ್।।4।। ಆಲೋಕಯಾಮ ಶೃಣವಾಮ ವದಾಮ ಯಾಮ ಕ್ಷೇಮಂ ಸುಖಂ ಚ ನಿವಸಾಮ ಶತಂ ಸಮಾನಾಮ್। ಸೌಜನ್ಯ ಸಾರಸರಸೇ ಸರಸೀರುಹಾಕ್ಷಿ ದುರ್ಗೇ ಕಟೀಲುಸುಷಮೇ ತವ ಸುಪ್ರಭಾತಮ್।।5।। ಭ್ರಷ್ಟಪ್ರಕೃಷ್ಟ ದನುಜೇಂದ್ರನಿಬರ್ಹಣೇನ ಹೃಷ್ಟಪ್ರಪುಷ್ಟ ಜನತಾವಿನುತಾವದಾನೇ। ಶಿಷ್ಟಾನುಶಿಷ್ಟಪದವೀಷ್ಟ ದವೀಯಸೀ ಯಾ ದುರ್ಗೇ ಕಟೀಲುಸಹಿತೇ ತವಸುಪ್ರಭಾತಮ್।।6।। ನಿತ್ಯೇ ನಿರಂಜನನಿಭೇ ನಿಜಭಕ್ತಿನಿಘ್ನೇ ನಿಃಶ್ರೇಯ ಸೈಕನಿರತೇ ನಿಗಮಾಂತನಿಷ್ಠೇ। ನಿಸ್ಸೀಮಸಾಂದ್ರಕರುಣಾವರುಣಾ ಲಯಾಕ್ಷಿ ದುರ್ಗೇ ಕಟೀಲುಚಟುಲೇ ತವ ಸುಪ್ರಭಾತಮ್।।7।। ಕೇಲೀಪರೇ ಮಧುರ ಸಾಂದ್ರ ಸುಕೋಮಲೇನ ಕೇರಾಂಬುನಾ ಶಿರಸಿ ತೇ ವಿಹಿತೇಭಿಷೇಕೇ। ಕೇ ಮನ್ಯತೇ ಸ್ವಯಜನಂ ನ ಜನಾಃಕೃತಾರ್ಥಂ ದುರ್ಗೇ ಕಟೀಲುಸುಘಟೇ ತವ ಸುಪ್ರಭಾತಮ್।।8।। ಆನಂದಕಂದಲದ ಮಂದಕೃಪಾ ಪ್ರವಾಹಾಂ ರಾಕೇಂದುಸುಂದರಮುಖೀಂ ವರಮಂದ ಹಾಸಾಮ್। ತಾಂ ತ್ವಾ ಸುಧಾಬ್ಧಿ ಶರಣಾಂ ಶರಣಂ ವ್ರಜಾಮ ದುರ್ಗೇಕಟೀಲುವಿಭವೇ ತವ ಸುಪ್ರಭಾತಮ್।।9।। ಕೋಟೀರಲಕ್ಷ್ಮ ಸುಮಹಾನವರತ್ನ ಪೋಟಿ ಕೋಟೀಲಸದ್ಯುವಕಲಾ ಧರಚಾರುಪೇಟಿ। ಪಾಟೀರ ವಾಸಸುವಿಶೇಷಿತ ನೀಪವಾಟಿ ದುರ್ಗೇ ಕಟೀಲುಕರುಣೇ ತವ ಸುಪ್ರಭಾತಮ್।।10।। ಸಿದ್ಧಾಪ್ಸರೋನಿವಹಗುಹ್ಯಕಯಕ್ಷರಕ್ಷೋ ಗಂಧರ್ವಕಿಂಪುರುಷಭೂತ ಪಿಶಾಚಕೈಶ್ಚ। ವಿದ್ಯಾಧರೈಶ್ಚ ವಿನುತೇ ವಿನತೈರ್ವಿನೀತೈಃ ದುರ್ಗೇ ಕಟೀಲುಸುರುಚೇ ತವ ಸುಪ್ರಭಾತಮ್।।11।। ಘಂಟಾಮೃದಂಗಮುರ ಜಾದಿನಿನಾದಭಂಗಿ ತುಂಗೀಭವಚ್ಛ್ರುತಿ ರಸಾಯನಯಕ್ಷಗಾನೈಃ। ಭಕ್ತ್ಯೈಃ ಸುನಾಟ್ಯಕುಶಲೈಃ ಪರಿತೋಷ್ಯಮಾಣೇ ದುರ್ಗೇ ಕಟೀಲುವರದೇ ತವ ಸುಪ್ರಭಾತಮ್।।12।। ಜಾಬಾಲಿಶಾಪಶಬರೀಕೃತಸೌರಭೇಯಿ ನಾದೇಯರೂಪಪರಿರಕ್ಷಣ ಬದ್ಧದೀಕ್ಷೇ। ಲೀಲಾವಿಲಾಸ ಲಲಿತೇ ಕಲಿತೇಷ್ಟಪೂರ್ತೇ ದುರ್ಗೇಕಟೀಲುಕಮಲೇ ತವ ಸುಪ್ರಭಾತಮ್।।13।।

ತ್ವಾಮಗ್ನಿವರ್ಣಾ ರುಚಿರಾಂ ತಪಸಾ ಜ್ವಲಂತೀಂ ವೈರೋಚನೀಮಖಿಲ ಕರ್ಮಫಲೇಷು ಜುಷ್ಟಾಂ। ದುರ್ಗಾಮನನ್ಯ ಶರಣಾಂ ಶರಣಂ ಗತಾಃ ಸ್ಮಃ ದುರ್ಗೇ ಕಟೀಲುಶುಭದೇ ತವ ಸುಪ್ರಭಾತಮ್ ॥14॥ ಆಸ್ರಣ್ಣವಂಶಮ ಹಿತೈರ್ವರಾತಾಂತ್ರಿಕೈಶ್ಚ ಸಂಪೂಜಿತಾ ಚ ಸತತಂ ಪರಿಸೇವಿತಾ ಯಾ। ಆಸ್ತೇ ಚ ಸರ್ವಜಗತಾಮವಲಂಬನಂ ಯಾ ದುರ್ಗೇ ಕಟೀಲುಕುಶಲೇ ತವ ಸುಪ್ರಭಾತಮ್ ॥15॥ ನೀಲೋತ್ಪಲಾಭನಯನೇ ನಿಪುಣ್ಯೈಕವೇದ್ಯೇ ಕಂಠಾವಲಂಬಿತಿಥಿರತ್ನ ವಿಚಿತ್ರಮಾಲೇ। ಪ್ರೋಕ್ತಂ ಸದೇತದಮಲಂ ಕಮಲಂ ನ ಕುರ್ಯಾತ್ ದುರ್ಗೇ ಕಟೀಲುಕವಿತೇ ತವ ಸುಪ್ರಭಾತಮ್॥16॥ ಮಂಗಲಂ ಭ್ರಾಮರೀದೇವಿ। ಮಂಗಲಂ ನಂದೀನಿಸುತೇ। ಮಂಗಲಂ ದೈತ್ಯದರ್ಪಘ್ನೇ। ಮಂಗಲಂ ಸುರಪೂಜಿತೇ॥

ಪ್ರಥಮಂ ಶೈಲಪುತ್ರೀಚ (ನವದುರ್ಗಾಸ್ತೋತ್ರ)

ಪ್ರಥಮ ಶೈಲಪುತ್ರೀಚ। ದ್ವಿತೀಯಂ ಬ್ರಹ್ಮಚಾರಿಣೀ। ತೃತೀಯಂ ಚಂದ್ರ ಘಂಟಾತಿ। ಕೂಷ್ಮಾಂಡೇ ಚತುರ್ಥಕಮ್। ಪಂಚಮಂ ಸ್ಕಂದ ಮಾತೇತಿ। ಷಷ್ಟಂ ಕಾತ್ಯಾಯನೀ ತಿ ಚ। ಸಪ್ತಮಂ ಕಾಲ ರಾತ್ರಿಶ್ಚ। ಮಹಾಗೌರಿ ತಿ ಚಾಷ್ಟಕಮ್। ನವಮಂ ಸಿದ್ಧರಾತ್ರೀಚ ನವ ದುರ್ಗಾಃ ಪ್ರಕೀರ್ತಿತಾಃ॥

ದುರ್ಗಾಪದಕಮಲವನ್ನು ಸ್ಮರಿಸಿ

ದುರ್ಗಾಪದಕಮಲವನ್ನು ಸ್ಮರಿಸಿ ಹಗಲು ಇರುಳು ನೀವು॥ ಮನದಿ ಧರಿಸಿ ನಾಮಾಮೃತ। ಜನನ ಮರಣ ದಾಟಿರಿ॥ ಚರಣಕಮಲಧ್ಯಾನದಿಂದ ಪರಮಶಾಂತಿ ಪಡೆಯಿರೆಲ್ಲ। ಜ್ಞಾನ ಭಕ್ತಿಯೋಗ ಭೋಗ। ತನಗೆ ತಾನೆ ಬಪ್ಪುದು॥

ದುರ್ಗಾದೇವೀ ದುರಿತ ನಿವಾರಿಣಿ — ರಾಗ: ಕಲ್ಯಾಣಿ

ದುರ್ಗಾದೇವೀ ದುರಿತ ನಿವಾರಣಿ॥ಪ॥ ಸರ್ಗಾಪವರ್ಗಾಸೌಖ್ಯದಾಯಿನಿ। ಸುರೇಶ ಪಾಲಿನಿ ಸಲಹು ಜನನೀ॥ಅ.ಪ॥ ಪ್ರಾಣಾಗ್ನಿ ಸಂಯೋಗದಿ ಜನಿಸಿದಾ। ಪ್ರಣವ ನಾದ ಸಪ್ತ ಸ್ವರ ರೂಪಿಣಿ॥ ವೀಣಾದಿವಾದ್ಯ ನೃತ್ಯ ಗಾನ। ವಿನೋದಿನೀ ಹರಿಕೇಶ ಭಾಮಿನಿ॥ಚ॥

ದುರ್ಗಾ ದುರ್ಗೆಯ ಮಹದುಷ್ಟಜನ (ಶ್ರೀ ದುರ್ಗಾದೇವಿ ಸ್ತೋತ್ರ ಸುಳಾದಿ)

ದುರ್ಗಾ ದುರ್ಗೆಯ ಮಹದುಷ್ಟಜನ ಸಂಹಾರೆ। ದುರ್ಗಾಂತರ್ಗತ ದುರ್ಗೆ ದುರ್ಲಭೆ ಸುಲಭೆ। ದುರ್ಗಮವಾಗಿದೆ ನಿನ್ನ ಮಹಿಮೆ ಬೊಮ್ಮ। ಭರ್ಗಾದಿಗಳಿಗೆಲ್ಲ ಗುಣಿಸಿದರೂ। ಸ್ವರ್ಗ ಭೂಮಿ ಪಾತಾಳ ವ್ಯಾಪುತ ದೇವಿ। ವರ್ಗಕ್ಕೆ ಮೀರಿದ ಬಲು ಸುಂದರೀ। ದುರ್ಗುಣದವರ ಬಾಧೆ ಬಹಳವಾಗಿದೆ ತಾಯಿ। ದುರ್ಗತಿಹಾರೆ ನಾನು ಪೇಳುವುದೇನು। ದುರ್ಗಂಧವಾಗಿದೆ ಸಂಸ್ಕೃತಿ ನೋಡಿದರೆ। ನಿರ್ಗಮ ನಾ ಕಾಣೆನಮ್ಮ ಮಂಗಳಾಂಗೇ। ದುರ್ಗೇ ಹೇ ದುರ್ಗೇ ಮಹಾ ದುರ್ಗೆ ಭೂದುರ್ಗೇ ವಿಷ್ಣು ದುರ್ಗೇ। ದುರ್ಜಯ ದುರ್ಧಕ್ಷೆ ಶಕ್ತಿ। ದುರ್ಗ ಕಾನನ ಗಹನ ಪರ್ವತ ಘೋರ ಸರ್ಪ। ಗರ್ಗರ ಶಬ್ದ ವ್ಯಾಘ್ರ ಕರಡಿ ಮೃತ್ಯು। ವರ್ಗ ಭೂತ ಪ್ರೇತ ಪಿಶಾಚಿ ಮೊದಲಾದ। ದುರ್ಗಣ ಸಂಕಟ ಪ್ರಾಪ್ತವಾಗೆ। ದುರ್ಗಾ ದುರ್ಗೆ ಎಂದು ಉಚ್ಚ ಸ್ವರದಿಂದ। ನಿರ್ಗಳಿತನಾಗಿ ಒಮ್ಮೆ ಕೂಗಿದರೂ। ಸ್ವರ್ಗಾಪವರ್ಗದಲ್ಲಿ ಹರಿಯೊಡನೆ ಇದ್ದರೂ। ಸುರ್ಗುಣ ಜಯ ಜಯವೆಂದು ಪೊಗಳುತಿರೆ। ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿ ಭೂತೆ। ನಿರ್ಗುಡಿದಂತೆ ಲೋಕಲೀಲೆ ನಿನಗೆ ಸ್ವರ್ಗಾಂಗಾಜನಕ ನಮ್ಮ ವಿಜಯವಿಠ್ಠಲನಂಘ್ರಿ। ದುರ್ಗಾಶ್ರಮ ಮಾಡಿ ಬದಕುವಂತೆ ಮಾಡು॥1॥ ಅರಿದರಾಂಕುಶ ಶಕ್ತಿ ಪರಶು ನೇಗಲಿಖಡ್ಗ। ಸರಸಿಜ ಗದೆ ಮುದ್ಗರ ಚಾಪ ಮಾರ್ಗಣ। ವರ ಅಭಯ ಮುಸಲ ಪರಿಪರಿ ಆಯುಧವ। ಧರಿಸಿ ಮೆರೆವ ಲಕುಮಿ ಸರಸಿಜ ಭವರುದ್ರ। ಸರುವ ದೇವತೆಗಳ ಕರುಣಾಪಾಂಗದಲ್ಲಿ। ನಿರೀಕ್ಷಿಸಿ ಅವರವರ ಸ್ವರೂಪಸುಖ ಕೊಡುವ। ಸಿರಿಭೂಮಿ ದುರ್ಗಾ ಸರ್ವೋತ್ತಮ ನಮ್ಮ। ವಿಜಯ-ವಿಠ್ಠಲನಂಘ್ರಿ। ಪರಮ ಭಕುತಿಯಿಂದ ಸ್ಮರಿಸುವ ಜಗಜ್ಜನನಿ॥2॥ ಸ್ತುತಿಮಾಡುವೆ ನಿನ್ನ ಕಾಳಿ ಮಹಾಕಾಳಿ ಉ। ನ್ನತ ಬಾಹು ಕರಾಳವದನೆ

ಚಂದಿರೆಮುಖಿ। ಧೃತಿಶಾಂತಿ ಬಹುರೂಪೆ ರಾತ್ರಿ ರಾತ್ರಿ ಚರಣೆ। ಸ್ಥಿತಿಯೆ ನಿದ್ರಾಭದ್ರೆ ಭಕ್ತವತ್ಸಲೆ ಭವ್ಯೇ। ಚತುರಷ್ಟ ದ್ವಿಹಸ್ತೆ ಹಸ್ತಿ ಹಸ್ತಿಗಮನೆ ಅ-।ದ್ಭುತ ಪ್ರಬಲೆ ಪ್ರವಾಸೆ ದುರ್ಗಾರಣ್ಯವಾಸೆ। ಕ್ಷಿತಿಭಾರಹರಣೆ ಕ್ಷೀರಾಬ್ಧಿ ತನೆಯೆ ಸ। ದ್ಗತಿ ಪ್ರದಾತೆ ಮಾಯಾ ಶ್ರೀಯೆ ಇಂದಿರೆ ರಮೆ।ದಿತಿ ಜಾತ ನಿಗ್ರಹೆ ನಿರ್ಧೂತ ಕಲ್ಮಷೆ। ಪ್ರತಿಕೂಲ ಭೇದೆ ಪೂರ್ಣಬೋಧೆ ರೌದ್ರೇ। ಅತಿಶಯ ರಕ್ತಜಿಹ್ವಾಲೋಲೇ ಮಾಣಿಕ್ಯಮಾಲೇ। ಜಿತಕಾಮೆ ಜನನ ಮರಣ ರಹಿತ ಖ್ಯಾತೆ। ಘೃತ ಪಾತ್ರ ಪರಮಾನ್ನ ತಾಂಬೂಲ ಹಸ್ತೆ ಸು। ವ್ರತೆ ಪತಿವ್ರತೆ ತ್ರಿನೇತ್ರೆ ರಕ್ತಾಂಬರೆ। ಶತಪತ್ರನಯನೆ ನಿರುತಕನ್ಯೇ ಉದಯಾರ್ಕ। ಶಕಕೋಟಿ ಸನ್ನಿಭೆ ಹರಿಯಾಂಕಸಂಸ್ಥೆ। ಶೃತಿತತಿನುತೆ ಶುಕ್ರಶೋಣಿತ ರಹಿತೆ ಅ। ಪ್ರತಿಹತೆ ಸರ್ವದಾ ಸಂಚಾರಿಣಿ ಚತುರೆ। ಚತುರ ಕಪರ್ದಿಯೆ ಅಂಭೃಣಿ ಹ್ರೀ। ಉತ್ಪತ್ತಿ ಸ್ಥಿತಿಲಯ ಕರ್ತೆ ಶುಭ್ರಶೋಭನ ಮೂರ್ತೆ। ಪತಿತಪಾವನೆ ರನ್ನೆ ಸರ್ವೌಷಧಿಯಲ್ಲಿದ್ದು ಹತಮಾಡು ಕಾಡುವ ರೋಗಗಳಿಂದ। ಕ್ಷಿತಿಯೊಳು ಸುಖದಲ್ಲಿ ಬಾಳುವ ಮತಿಯಿತ್ತು। ಸತತ ಕಾಯಲಿಬೇಕು ದುರ್ಗೇ ದುರ್ಗೇ। ಚ್ಯುತಿದೂರ ವಿಜಯವಿಠ್ಠಲರೇಯನ ಪ್ರೀಯೇ। ಕೃತಾಂಜಲಿಯಿಂದಲಿ ತಲೆಬಾಗಿ ನಮಿಸುವೆ॥3॥ ಶ್ರೀಲಕ್ಷ್ಮೀ ಕಮಲಾ ಪದ್ಮಾ ಪದ್ಮಿನಿ ಕಮ। ಲಾಲಯೆ ರಮಾ ವೃಷಾಕಪಿ ಧನ್ಯಾವೃದ್ಧಿ। ಶಾಲಾ ಯಜ್ಞಾ ಇಂದಿರೆ ಹಿರಣ್ಯಾ ಹರಿಣಿ। ವಾಲಯ ಸತ್ಯ ನಿತ್ಯಾನಂದತ್ರಯಿ ಸುಧಾ। ಶೀಲೆ ಸುಗಂಧ ಸುಂದರಿ ವಿದ್ಯಾ ಸುಶೀಲೆ। ಸುಲಕ್ಷಣದೇವಿ ನಾನಾ ರೂಪಂಗಳಿಂದ ಮೆರೆವ ಮೃತ್ಯುನಾಶೆ। ವಾಲಗಕೊಡು ಸಂತರ ಸನ್ನಿಧಿಯಲ್ಲಿ। ಕಾಲ ಕಾಲಕ್ಕೆ ಎನ್ನ ಭಾರವಹಿಸುವ ತಾಯಿ। ಮೇಲು ಮೇಲು ನಿನ್ನ ಶಕ್ತಿ ಕೀರ್ತಿ ಬಲು। ಕೇಳಿ ಕೇಳಿ ಬಂದೆ ಕೇವಲ ಈ ಮನ। ಘಾಳಿಯಂತೆ ಪರದ್ರವ್ಯಕ್ಕೆ ಪೋಪದು। ಎಳಲಮಾಡದೆ ಉದ್ಧಾರ ಮಾಡುವ। ಕೈಲಾಸಪುರದಲ್ಲಿ ಪೂಜೆಗೊಂಬ ದೇವಿ। ಮೂಲಪ್ರಕೃತಿ ಸರ್ವಾವರ್ಣಾಭಿಮಾನಿನಿ। ಪಾಲಸಾಗರಶಾಯಿ ವಿಜಯವಿಠ್ಠಲನೊಳು ಲೀಲೆಮಾಡುವ ನಾನಾಭರಣೆ ಭೂಷಣೆ ಪೂರ್ಣೆ॥4॥ ಗೋಪಿನಂದನೆ ಮುಕ್ತೆ ದೈತ್ಯ ಸಂತತಿಗೆ ಸಂ। ತಾಪವ ಕೊಡುತಿಪ್ಪ ಮಹಾ ಕಠೋರೆ ಉಗ್ರ। ರೂಪ ವೈ ಲಕ್ಷಣೆ ಅಜ್ಞಾನಕ್ಕಭಿಮಾನಿ। ತಾಪತ್ರಯವಿನಾಶ ಓಂಕಾರೆ ಹೂಂಕಾರೆ। ಪಾಪಿ ಕಂಸಗೆ ಭಯ ತೋರಿದೆ ಬಾಲ ಲೀಲೇ ವ್ಯಾಪೃತ ಧರ್ಮಮಾರ್ಗಪ್ರೇರಣೆ ಅಪ್ರಾಕೃತೆ। ಸ್ವಾಪದದಲಿ ನಿನ್ನ ನೆನಿಸಿದ ಶರಣನಿಗೆ। ಅಪಾರವಾಗಿದ್ದ ವಾರಿಧಿಯಂತೆ ಮಹಾ। ಆಪತ್ತು ಬಂದಿರಲು ಹಾರೆ ಪೋಗೋವು ಸಪ್ತ। ದ್ವೀಪನಾಯಿಕೆ ನರಕ ನಿರ್ಲೇಪೆ ತಮೋಗುಣದ। ವ್ಯಾಪಾರ ಮಾಡಿಸಿ ಭಕ್ತಜನಕೆ ಪುಣ್ಯ ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ ದುರ್ಗೆ। ಪ್ರಾಪುತವಾಗಿ ಎನ್ನ ಮನದಲಿ ನಿಂದು ದುಃಖ। ಕೂಪದಿಂದಲಿ ಎತ್ತಿ ಕಡೆಮಾಡು ಜನ್ಮಂಗಳ। ಸೌಪರ್ಣೆ ಮಿಗಿಲಾದ ಸತಿಯರು ನಿತ್ಯ ನಿನ್ನ। ಅಪಾದ ಮೌಳಿತನಕ ಭಜಿಸಿ ಭವ್ಯರಾದರು। ನಾ ಪೇಳುವುದೇನು ಪಾಂಡವರ ಮನೋಭೀಷ್ಟೆ। ಈ ಪಂಚ ಭೌತಿಕದಲ್ಲಿ ಆವ ಸಾಧನೆ ಕಾಣೆ। ಶ್ರೀಪತಿ ನಾಮ ಒಂದೇ ಜಿಹ್ವಾಗ್ರದಲಿ ನೆನೆವ। ಔಪಾಸನ ಕೊಡು ರುದ್ರಾದಿಗಳ ವರದೇ। ತಾಪಸ ಜನಪ್ರೀಯ ವಿಜಯವಿಠ್ಠಲ ಮೂರ್ತಿಯ। ಶ್ರೀಪಾದಾರ್ಚನೆ ಮಾಳ್ಪಾ ಶ್ರೀಭೂದುರ್ಗಾವರ್ಣಾಶ್ರಯೆ॥5॥ ದುರ್ಗೆ ಹಾ ಹೇ ಹೋ ಹಾಃ। ದುರ್ಗೆ ಮಂಗಳ ದುರ್ಗೆ। ದುರ್ಗತಿ ಕೊಡದಿರು ವಿಜಯವಿಠ್ಠಲ ಪ್ರೀಯೆ॥6॥

ದುರ್ಗೇ ಸ್ಮೃತಾ ಹರಸಿ ಭೀತಿ (ದುರ್ಗಾಪದುದ್ಧಾರಸ್ತೋತ್ರಂ)

ದುರ್ಗೇ ಸ್ಮೃತಾ ಹರಸಿ ಭೀತಿ ಮಶೇಷ ಜಂತೋಃ। ಸ್ವಸ್ಥೈಃ ಸ್ಮೃತಾ ಮತಿಮತೀವ ಶುಭಾಂ ದದಾಸಿ। ದಾರಿದ್ರ್ಯ ದುಃಖ ಭಯಹಾರಿಣಿ ಕಾಽತ್ವಧನ್ಯಾ। ಸರ್ವೋಪಕಾರ ಕರಣಾಯ ಸದಾಽರ್ದ್ರ ಚಿತ್ತಾ॥1॥ ನಮಸ್ತೇ ಶರಣ್ಯೇ ಶಿವೇ ಸಾನುಕಂಪೇ। ನಮಸ್ತೇ ಜಗದ್ವ್ಯಾಪಿಕೆ ವಿಶ್ವರೂಪೇ। ನಮಸ್ತೇ ಜಗದ್ವಂದ್ಯ ಪಾದಾರವಿಂದೆ। ನಮಸ್ತೇ ಜಗತ್ತಾರಿಣಿ ತ್ರಾಹಿ ದುರ್ಗೇ॥2॥ನಮಸ್ತೇ ಜಗಚ್ಚಿಂತ್ಯ ಮಾನಸ್ವರೂಪೇ। ನಮಸ್ತೇ ಮಹಾಯೋಗಿನೀ ಜ್ಞಾನರೂಪೆ। ನಮಸ್ತೇ ನಮಸ್ತೇ ಸದಾನಂದ ರೂಪೇ। ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥3॥ ಅನಾಥಸ್ಯ ದೀನಸ್ಯ ತೃಷ್ಣಾತುರಸ್ಯ। ಭಯಾರ್ತಸ್ಯ ಭೀತಸ್ಯ ಬದ್ಧಸ್ಯ ಜಂತೋಃ। ತ್ವಮೇಕಾ ಗತಿರ್ದೇವಿ ನಿಸ್ತಾರ ಕರ್ತ್ರೀ। ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥4॥ ಅರಣ್ಯೇರಣೇ ದಾರುಣೇ ಶತ್ರುಮಧ್ಯೇ। ಅನಲೇ, ಸಾಗರೇ, ಪ್ರಾಂತರೇ ರಾಜಗೇಹೆ। ತ್ವಮೇಕಾ ಗತಿರ್ದೇವಿ ನಿಸ್ತಾರ ನೌಕಾ। ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥5॥ ಅಪಾರೇ ಮಹಾದುಸ್ತರೇಽತ್ಯಂತ ಘೋರೆ। ವಿಪಸ್ತಾಗರೇ ಮಜ್ಜತಾಂ ದೇಹ

ಭಾಜಾಮ್। ತ್ವಮೇಕಾ ಗತಿರ್ದೇವಿ ನಿಸ್ತಾರ ಹೇತುಃ ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥6॥ ನಮಃಶ್ಚಂಡಿಕೇ ಚಂಡ ದುರ್ದಂಡ ಲೀಲಾ। ಸಮುತ್ಖಂಡಿತಾ ಖಂಡಿತಾಽಶೇಷ ಶತ್ರೋಃ। ತ್ವಮೇಕ ಗರ್ತಿದೇವಿ ನಿಸ್ತಾರ ಬೀಜಂ। ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥7॥ ತ್ವಮೇವಾಘ ಭಾವಾಧೃತಾ ಸತ್ಯವಾದೀಃ। ನಜಾತಾಜಿತಾಕ್ರೋಧನಾತ್ ಕ್ರೋಧನಿಷ್ಠಾ। ಇಡಾಪಿಂಗಳಾತ್ವಂ ಸುಷುಮ್ನಾಚ ನಾಡಿ। ನಮಸ್ತೇ ನಮಸ್ತೇ ನಮಸ್ತೇ ನಮಸ್ತೇ॥8॥ ನಮೋ ದೇವಿ ದುರ್ಗೇ ಶಿವೇ ಭೀಮನಾದ। ಸರಸ್ವತ್ಯವ್ಯಂದತ್ಯಮೋಘ ಸ್ವರೂಪೇ। ವಿಭೂತಿಃ ಶುಚಿ ಕಾಲ ರಾತ್ರಿಃ ಸತೀತ್ವಂ। ನಮಸ್ತೇ ನಮಸ್ತೇ ನಮಸ್ತೇ॥9॥ ಚರಣಮಸಿ ಸುರಾಣಾಂ ಸಿದ್ಧ ವಿದ್ಯುಧರಾಣಾಂ। ಮುನಿಮನುಜ ಪಶೂನಾಂ, ದಸ್ಯುಭಿಸ್ತ್ರಾ ಸಿತಾನಾಮ್। ನೃಪತಿ ಗೃಹ ಗತಾನಾಂ। ವಾದಿಭಿಃ ಪೀಡೀತಾನಾಂ। ತ್ವಮಸಿ ಶರಣ ಮೇತಾ, ದೇವಿ ದುರ್ಗೇ ಪ್ರಸೀದ॥10॥ ಇದಂ ಸ್ತೋತ್ರ ಮಯಾ ಪ್ರೋಕ್ತಮ್। ಆಪದುದ್ಧಾರ ಹೇತುಕಮ್। ಸ್ತ್ರೀಸಂಧ್ಯಂ ಏಕಸಂಧ್ಯಂವಾ। ಪಠನಾದ್ಘೋರ ಸಂಕಟಾತ್। ಮುಚ್ಯತೆ ನಾತ್ರ ಸಂದೇಹೋ ಭುವಿ ಸ್ವರ್ಗೇ ರಸಾತಲೇ। ಸರ್ವಂ ವಾ ಶ್ಲೋಕಮೇಕಂವಾ ಯಃ ಪಠೇದ್ಭಕ್ತಿಮಾನ್ ಸದಾ॥ ಸ ಸರ್ವಂ ದುಷ್ಕೃತಂ ತ್ಯಕ್ತ್ವಾ। ಪ್ರಾಪ್ನೋತಿ ಪರಮಂ ಪದಂ। ಪಠನಾದಸ್ಯ ದೇವೇಶಿ ಕಿಂ ನ ಸಿದ್ಧ್ಯತಿ ಭೂತಲೇ। ಸ್ತವರಾಜಮಿದಂ ದೇವೀ ಸಂಕ್ಷೇಪಾತ್ಕಥಿತಂ ಮಯಾ॥ ಇತಿ ಶ್ರೀ ವಿಶ್ವಸಾರತಂತ್ರೇ ಶ್ರೀಪಾವರ್ತೀ ಪರಮೇಶ್ವರ ಸಂವಾದೇ "ಶ್ರೀ ದುರ್ಗಾಪದುದ್ಧಾರ ಸ್ತೋತ್ರಂ" ಸಂಪೂರ್ಣಂ

ನಮೋ ನಮೋ ದುರ್ಗೇ (ದುರ್ಗಾಚಾಲೀಸ್)

ನಮೋ ನಮೋ ದುರ್ಗೇ ಸುಖಕರಣೀ। ನಮೋ ನಮೋ ಅಂಬೇ ದುಃಖಹರಣೀ॥1॥ ನಿರಂಕಾರ ಹೈ ಜ್ಯೋತಿ ತುಮ್ಹಾರೀ। ತಿಹುಂ ಲೋಕ ಫೈಲೀ ಉಜಿಯಾರೀ॥2॥ ಶಶಿಲಲಾಟ ಮುಖಮಹಾವಿಶಾಲ। ನೇತ್ರಲಾಲ ಭೃಕುಟಿ ವಿಕರಾಲ॥3॥ ರೂಪಮಾತು ಕೋ ಅಧಿಕ ಸುಹಾವೇ। ದರಶಕರತ ಜನ ಅತಿ ಸುಖ ಪಾವೇ॥4॥ ತುಮ ಸಂಸಾರ ಶಕ್ತಿ ಲಯ ಕೀನಾ। ಪಾಲನ ಹೇತು ಅನ್ನಧನ ದೀನಾ॥5॥ ಅನ್ನಪೂರ್ಣ ಹುಯಿ ಜಗಪಾಲಾ। ತುಮಹೀ ಆದಿ ಸುಂದರೀ ಬಾಲಾ॥6॥ ಪ್ರಳಯ ಕಾಲ ಸಬ್ ನಾಶನ ಹಾರೀ। ತುಮಗೌರೀ ಶಿವಶಂಕರ ಪ್ಯಾರೀ॥7॥ ಶಿವಯೋಗೀತುಮ್ಹರೇ ಗುಣಗಾವೇಂ। ಬ್ರಹ್ಮ ವಿಷ್ಣು ತುಮ್ಹೇ ನಿತ್ಯಧ್ಯಾವೇಂ॥8॥ ರೂಪ ಸರಸ್ವತಿ ಕೋ ತುಮ್ ಧಾರಾ। ದೇಸುಬುದ್ಧಿ ಋಷಿ ಮುನೀನ ಉಬಾರಾ॥9॥ ಧರಯೋ ರೂಪ ನರಸಿಂಹ ಕೋ ಅಂಬಾ। ಪ್ರಗಟ ಭಯಿ ಫಾಡಕರ ಖಂಬಾ॥10॥ ರಕ್ಷಾಕರಿ ಪ್ರಹ್ಲಾದ ಬಚಾಯೋ। ಹಿರಣ್ಯಾಕ್ಷ ಕೋ ಸ್ವರ್ಗಪಟಾಯೋ॥11॥ ಲಕ್ಷ್ಮೀ ರೂಪ ಧರೋ ಜಗಮಾಹೀ॥ ಶ್ರೀನಾರಾಯಣ ಅಂಗ ಸಮಾಹೀ॥12॥ ಕ್ಷರೀ ಸಿಂಧೂಮೆ ಕರತ ವಿಲಾಸಾ। ದಯಾ ಸಿಂಧು ದೀಜೆ ಮನ ಆಸಾ॥13॥ ಹಿಂಗ ಲಾಜುಮೆ ತುಮ್ಹಿ ಭವಾನೀ। ಮಹಿಮಾ ಅಮಿತನ ಜಾತ ಭಖಾನೀ॥14॥ ಮಾತಂಗೀ ಧೂಮಾವತಿ ಮಾತಾ। ಭುವನೇಶ್ವರಿ ಬಗಲಾ ಸುಖದಾತಾ॥15॥ ಶ್ರೀಭೈರವ ತಾರಾ ಜಗತಾರಿಣೇ। ಛನ್ನ ಭಾಲ ಭವ ದುಃಖ ನಿವಾರಿಣಿ॥16॥ ಕೇಹಂ ವಾಹನ ಸೋಹ ಭವಾನೀ। ಲಾಂಗೂರವೀರ ಚಲತ ಆಗಾ ವಾನೀ॥17॥ ಕರಮೇ ಖಪ್ಪರ ಖಡ್ಗ ವಿರಾಜೇ। ಜಾಕೋ ದೇಖಕಾಲಡರ ಭಾಜೇ॥18॥ ಸೋಹೇ ಅಸ್ತ್ರ ಔರ್ ತ್ರಿಶೂಲಾ। ಜಾಸೇ ಉಠತ ಶತ್ರು ಹಿಯ ಶೂಲಾ॥19॥ ನಗರ ಕೋಟ ಮೇ ತುಮ್ಹಿವಿರಾಜತ। ತಿಹುಂ ಲೋಕ ಮೆ ಡಂಕಾ ಭಾಜತ॥20॥ ಶುಂಭ ನಿಶುಂಭ ದಾನವ ತುಮಮಾರೇ। ರಕ್ತ ಬೀಜ ಶಂಖನ ಸಂಹರೇ॥21॥ ಮಹಿಷಾಸುರ ನೃಪ ಅತಿ ಅಭಿಮಾನೀ। ಜೆಹಿ ಆಘ ಭಾರ ಮಹಿ ಅಕುಲಾನೀ॥22॥ ರೂಪ ಕರಾಲ ಕಾಲಿಕಾ ಧಾರಾ। ಸೇನ ಸಹಿತ ತುಮ ತಿನ ಸಂಹಾರಾ॥23॥ ಪರೀಗಾರ್ಹ ಸಂತನ ಪರ ಜಬ್ ಜಬ್। ಭಯೀ ಸಹಾಯ ಮಾತು ತುಮ ತಬ್ ತಬ್॥24॥ ಅಮರ ಪುರಿ ಅರು ಬಸವ ಲೋಕಾ। ತಬ್ ಮಹಿಮಾ ಸಬ್ ರಹೆ ಅಸೋಕಾ॥25॥ ಜ್ವಾಲಾಮೇಂ ಹೈ ಜ್ಯೋತಿ ತುಮ್ಹಾರೀ। ತುಮ್ಹೇ ಸದಾ ಪೂಜೇಂ ನರ ನಾರೀ॥26॥ ಪ್ರೇಮ ಭಕ್ತಿ ಸೇ ಜೋ ಯಶ ಗಾವೇ। ದುಃಖದಾರಿದ್ರ ನಿಕಟ ನಹೀಂ ಆವೇ॥27॥ ಧ್ಯಾವೇ ತುಮ್ಹೇ ಜೋ ನರಮನ ಲಾಯೀ। ಜನ್ಮ ಮರಣ ತಾಕೌ ಛುಟಿ ಜಾಯೀ॥28॥ ಜೋಗೀ ಸುರ ಮುನಿ ಕಹತ ಪುಕಾರೀ। ಜೋಗ ನಹೋ ಬಿನ ಶಕ್ತಿ ತುಮ್ಹಾರೀ॥29॥ ಶಂಕರ ಆಚರಜ ತಪ ಕಿನ್ಹೋಂ। ಕಾಮ ಅರು ಕ್ರೋಧ ಜೀತ ಸಬ್ ಲಿನ್ಹೋಂ॥30॥

ನಿಶಿದಿನ ಧ್ಯಾನ ಧರೋ ಶಂಕರ ಕೋ। ಕಾಹುಕಾಲನಹೀಂ ಸುಮಿರೋತುಮಕೋ॥31॥ ಶಕ್ತಿ ರೂಪಕೇ ಮರ್ಮನ ಪಾಯೇ। ಶಕ್ತಿ ಗಯಿ ತಬ್ ಮನಪಛಿತಾ ಯೋ॥32॥ ಶರಣಾಗತ ಹುಯಿ ಕೀರ್ತಿ ಬಖಾನೀ। ಜಯಜಯಜಯ ಜಗದಂಬ ಭವಾನೀ॥33॥ ಭಯಿ ಪ್ರಸನ್ನ ಆದಿ ಜಗದಂಬಾ। ದಯಿ ಶಕ್ತಿ ನಹೀಂ ಕೀನ ವಿಲಂಬಾ॥34॥ ಮೀಕೋಂ ಮಾತು ಕಷ್ಟ ಅತಿ ಘೋರೋ। ತುಮ್ ಬಿನ ಕೌನ್ ಹರೇ ದುಃಖಮೇರೇ॥35॥ ಆಶಾತೃಷ್ಣಾ ನಿಪಟ ಸತಾವೇಂ। ಮೋಹ ಮದಾದಿಕ ಸಬ್ ವಿನ ಸಾವೇ॥36॥ ಶತ್ರು ನಾಶ ಕೀಜೋ ಮಹಾರಾಣೀ। ಸುಮಿರೋಂ ಇಕಚಿತ್ ತುಮ್ಹೇ ಭವಾನೀ॥37॥ ಕರೋ ಕೃಪಾಹೇ ಮಾತು ದಯಾಲಾ। ರುದ್ಧಿಸಿದ್ಧಿದೇ ಕರಹು ನಿಹಾಲಾ॥38॥ ಜಬ್ ಲಗಿ ಜೀವೋ ದಯಾ ಫಲ ಪಾವೂಂ। ತುಮ್ಹಾರೋ ಯಶ್ ಮೈ ಸದಾಸುಗಾವೋಂ॥39॥ ದುರ್ಗಾ ಚಾಲೀಸಾ ಜೋ ನಿತ್ ಗಾವೇ। ಸುಖ್ ಸುಖ್ ಭೋಗ್ ಪರಮ ಪದ ಪಾವೇ। ದೇವಿದಾಸ ಶರಣ ನಿಜ ಜಾನೀ। ಕರಹು ಕೃಪಾ ಜಗದಂಬ ಭವಾನೀ॥40॥

❖ ❖ ❖

ಲಲಿತಾ

ಪ್ರಾತಃಸ್ಮರಾಮಿ ಲಲಿತಾ (ಲಲಿತಾ ಪಂಚಕ)

ಪ್ರಾತಃಸ್ಮರಾಮಿ ಲಲಿತಾವದನಾರವಿಂದಂ ಬಿಂಬಾಧರಾಂ ಪೃಥುಲಮೌಕ್ತಿಕಶೋಭಿನಾಸಮ್। ಆಕರ್ಣದೀರ್ಘನಯನಂ ಮಣಿಕುಂಡಲಾಢ್ಯಂ ಮಂದಸ್ಮಿತಂ ಮೃಗಮದೋಜ್ವಲಭಾಲ ದೇಶಮ್॥1॥ ಪ್ರಾತರ್ಭಜಾಮಿ ಲಲಿತಾ ಭುಜಕಲ್ಪವಲ್ಲೀಂ। ರಕ್ತಾಂಗುಲೀಯ ಲಸದಂಗುಲಿ ಪಲ್ಲವಾಢ್ಯಮ್। ಮಾಣಿಕ್ಯ ಹೇಮವಲಯಾಂಗದ- ಶೋಭಮಾನಾಂ ಪುಂಡ್ರೇಕ್ಷು ಚಾಪ ಕುಸುಮೇಷುಸೃಣೀರ್ದಧಾನಾಮ್॥2॥ ಪ್ರಾತರ್ನಮಾಮಿ ಲಲಿತಾಚರಣಾರವಿಂದಂ ಭಕ್ತೇಷ್ಟದಾನ ನಿರತಂ ಭವಸಿಂಧುಪೋತಮ್। ಪದ್ಮಾಸನಾದಿ ಸುರನಾಯಕಪೂಜನೀಯಂ ಪದ್ಮಾಂಕುಶಧ್ವಜ ಸುದರ್ಶನ ಲಾಂಛನಾ ಢ್ಯಮ್॥3॥ ಪ್ರಾತಃಸ್ತುವೇ ಪರಶಿವಾಂ ಲಲಿತಾಂ ಭವಾನೀಂ ತ್ರಯ್ಯಂತವೇದ್ಯ ವಿಭವಾಂ ಕರುಣಾ ನವದ್ಯಾಮ್ ವಿಶ್ವಸ್ಯ ಸೃಷ್ಟಿ ವಿಲಯಸ್ಥಿತಿ ಹೇತುಭೂತಾಂ ವಿದ್ಯೇಶ್ವರೀಂ ನಿಗಮ ವಾಙ್ಮನಸಾದಿ ದೂರಮ್॥4॥ ಪ್ರಾತರ್ವದಾಮಿ ಲಲಿತೇ ತವ ಪುಣ್ಯನಾಮ ಕಾಮೇಶ್ವರೀತಿ ಕಮಲೇತಿ ಮಹೇಶ್ವರೀತಿ। ಶ್ರೀಶಾಂಭವೀತಿ ಜಗತಾಂ ಜನನೀ ಪರೇತಿ ವಾಗ್ದೇವತೀತಿ ವಚಸಾ ತ್ರಿಪುರೇಶ್ವರೀತಿ॥5॥ ಯಃ ಶ್ಲೋಕ ಪಂಚಕಮಿದಂ ಲಲಿತಾಂಬಿಕಾಯಾಃ ಸೌಭಾಗ್ಯದಂ ಸುಲಲಿತಂ ಪಠತಿ ಪ್ರಭಾತೇ। ತಸ್ಮೈ ದದಾತಿ ಲಲಿತಾ ಝಟಿತಿ ಪ್ರಸನ್ನಾ ವಿದ್ಯಾಂ ಶ್ರೀಯಂ ವಿಮಲಸೌಖ್ಯಮನಂತಕೀರ್ತಿಮ್॥6॥ ಇತಿ ಶ್ರೀಮತ್ ಜಗದ್ಗುರು ಆದ್ಯ ಶಂಕರಾಚಾರ್ಯ ಕೃತ ಲಲಿತಾಪಂಚಕ ಸ್ತೋತ್ರಮ್ ಸಂಪೂರ್ಣಮ್॥

ದೇವೀ ಲಲಿತೇ ಹೇ ಜಗದಂಬಾ

ದೇವೀ ಲಲಿತೇ ಹೇ ಜಗದಂಬಾ। ಶಂಕರಿ ಗೌರಿ ಭವಾನಿ ಜನನೀ॥ಪ॥ ಶಾರದೆ ಪೀಠ ಜಗದೀಶ್ವರಿ। ಓಡ್ಯಾಣಪೀಠ ಜಗದೀಶ್ವರಿ। ಮಂತ್ರಪೀಠೆ ಜಗದೀಶ್ವರಿ। ಜಗಜ್ಜನನೀ ಜಗನ್ಮಾತಾ ಜಗಜ್ಜನನೀ ಶಕ್ತಿಪೀಠೆ ಜಗನ್ಮಾತಾ॥1॥ ಮೂಲಾಧಾರೇ ಜಗನ್ಮೋಹಿನಿ ವಿಶುದ್ಧಿನಿಲಯೇ ಜಗನ್ಮೋಹಿನಿ ಜಗಜ್ಜನನಿ ಜಗನ್ಮಾತಾ। ಜಗಜ್ಜನನಿ ಸೌಂದರ್ಯ ಲಹರಿ ಜಗನ್ಮಾತಾ॥2॥ ಶ್ರೀಚಕ್ರವಾಸಿನಿ, ಪರದೇವತೆ, ವನ್ಹಿವಾಸಿನಿ, ಪರದೇವತೆ ಸುಮೇರು ಮಧ್ಯೆ, ಪರದೇವತೆ ಶ್ರೀಪುರನಾಯಕಿ। ಪರದೇವತೆ ಆಜ್ಞಾಚಕ್ರ ಜಗನ್ಮೋಹಿನಿ ಮಾನಸರೂಪೆ ಜಗನ್ಮೋಹಿನಿ ಜಗಜ್ಜನನೀ, ಜಗನ್ಮಾತಾ। ಜಗಜ್ಜನನಿ। ದಾಕ್ಷಾಯಣಿ ಜಗನ್ಮಾತಾ॥3॥ ಚಾಮುಂಡೇಶ್ವರಿ ಶ್ರೀದುರ್ಗೇ ವೈಷ್ಣವಿ ಕಾಳಿ, ಹೈಮಾವತೀ ಶಾಂಭವಿ ಶ್ಯಾಮಲ ಭಗವತೇ ಗಾಯತ್ರಿ ಭೈರವಿ ಕೌಮಾರಿ ಜಗಜ್ಜನನಿ। ಜಗನ್ಮಾತಾ ಮಹಿಷಾಸುರ ಮರ್ಧಿನಿ ಜಗನ್ಮಾತಾ॥4॥ ಆದಿಲಕ್ಷ್ಮೀ, ವರಲಕ್ಷ್ಮೀ, ಧಾನ್ಯಲಕ್ಷ್ಮೀ, ಧನಲಕ್ಷ್ಮೀ, ಧೈರ್ಯಲಕ್ಷ್ಮೀ, ಗಜಲಕ್ಷ್ಮೀ, ವಿಜಯಲಕ್ಷ್ಮೀ, ಮಹಾಲಕ್ಷ್ಮೀ, ಜಗಜ್ಜನನೀ, ಜಗನ್ಮಾತಾ, ಜಗಜ್ಜನನಿ ಅಷ್ಟಲಕ್ಷ್ಮೀ ಜಗನ್ಮಾತಾ॥5॥ ವಾಗ್ದೇವಿ, ಸರಸ್ವತೀ ಮಧುರ ಭಾಷಿಣಿ ಸರಸ್ವತಿ

ವೀಣಾಧಾರಿಣಿ ಸರಸ್ವತಿ ಪುಸ್ತಕ ರೂಪಿಣಿ ಸರಸ್ವತಿ। ಜಗಜ್ಜನನೀ ಜಗನ್ಮಾತಾ। ಜಗಜ್ಜನನಿ ಸಕಲಕಲಾಮಣಿ ಜಗನ್ಮಾತಾ॥6॥ ಪದ್ಮಾಸನಸ್ತು ಅಂಬಿಕಾ। ವಿಕಸಿತಾ ವದನೇ ಅಂಬಿಕಾ। ಕಮಲಾಯತಾಕ್ಷೀ ಅಂಬಿಕಾ ತಾಟಂಕ ಯುಗಳೇ ಅಂಬಿಕಾ। ಜಗಜ್ಜನನೀ ಜಗನ್ಮಾತಾ। ಜಗಜ್ಜನನಿ। ಅಲಂಕಾರ ಭೂಷಿತೆ ಜಗನ್ಮಾತಾ॥7॥ ಅಗಸ್ತ್ಯ ಅರ್ಚಿತೆ ಶಿವಶಕ್ತಿ, ದೂರ್ವಾಸವಂದಿತೆ ವಿಜಯಾಂಬಿಕೆ ಮನ್ಮಥ ಪಾಲಿಕೆ ಕಾಮಾಕ್ಷಿ, ನಾರದ ವಂದಿತೆ ನಾರಾಯಣೀ ಜಗಜ್ಜನನೀ ಜಗನ್ಮಾತಾ ಜಗಜ್ಜನನೀ ಶಂಕರ ಪೂಜಿತೆ ಜಗನ್ಮಾತಾ॥8॥ ದುಃಖ ನಿವಾರಿಣಿ ಶ್ರೀದುರ್ಗೆ। ಐಶ್ವರ್ಯದಾಯಿನಿ ಶ್ರೀಲಕ್ಷ್ಮೀ ವಿದ್ಯಾದಾಯಿನಿ ಸರಸ್ವತಿ ಸೌಭಾಗ್ಯದಾಯಿನಿ ಪರಾಶಕ್ತಿ ಜಗಜ್ಜನನೀ ಜಗನ್ಮಾತಾ, ಜಗಜ್ಜನನಿ ನವರಾತ್ರಿ ನಾಯಿಕೆ ಜಗನ್ಮಾತಾ॥9॥

ಶ್ರೀ ಲಲಿತಾಂಬ ಪಾಹಿಮಾಂ — ರಾಗ: ಸರಸ್ವತಿ

ಶ್ರೀ ಲಲಿತಾಂಬ ಪಾಹಿಮಾಂ (2ಸಾರಿ) ಶ್ರಿತ ಜನ ಪಾಲಿನಿ ಶಂಕರಿ ಶುಭಕರಿ॥ಪ॥ ಶೀಲ ಸುಗುಣ ದಯಾಪರಿ ಪುರಾಣಿ। ಶ್ರೀ ರಾಜ ಕೌಮಾರಿ ಮಹೇಶ್ವರಿ॥ಅ.ಪ॥ ಪಂಕೇರೂರು ಹಾಭವ ಶಂಖ ಚಕ್ರಗದಾ ಶಂಕರ ಶಂಕ ಶೀಲಾಗ್ರ ವಿಹಾರ। ಪದ್ಮಜ ಪನ್ನಗಯುವತಿ ಸರಸ್ವತಿ ಕಿನ್ನರ ಕಿಂಪುರುಷಾದಿ ಸೇವಿತೆ ॥1॥ ಮದನ ಕೋಟಿ ಲಾವಣ್ಯ ಲತಾಂಗಿನಿ ಮಾರ್ತಂಡ ಸೋಮ ಅನಿಲ ವಿಭಾಗಿನಿ। ಮಾನಸ ಚಾರಿ ವಾಮಾಂಗ ನಿವಾಸಿನಿ ಸರ್ವೇಶ್ವರಿ ಭವತ್ರಯ ಸುಂದರಿ॥2॥ ಸಾಮಗಾನ ಸಕಲಾಗಮ ಪೋಷಿಣಿ ಕೋಮಲ ಕಾಮಕಲಾ ಪ್ರದರ್ಶಿನಿ। ಸುಸ್ವರಗಾನ ಸುಧಾರಸ ವಾಹಿನಿ ಸುಂದರೇಶ್ವರ ಮನಃ ಪ್ರದಾಯಿನಿ॥3॥ ಕೋಕಿಲ ಕೋಮಲ ಗಾನ ವಿನೋದಿನಿ ಸುಮಧುರ ವೀಣಾ ವಾಣಿ ವಿಲಾಸಿನಿ। ಅಖಿಲಾಂಡ ಕೋಟಿ ಜೀವ ಧಾರಿಣಿ ಆನಂದ ರೂಪಿಣಿ ಅಖಂಡ ವ್ಯಾಪಿನಿ॥4॥ ಕನಕದುಕೂಲ ಕಲೇಬರ ನೀಲ ಕಾಂಚನ ಮಾಲಾ ಕರವುಕ ಶೂಲ ಕುಂಕುಮ ಪಂಕೇನಲಿಪ್ತ ಕುಚಯುತ ಕಂದರ್ಪಕೋಟಿ ಕಾಂತಿ ಮನೋಹರಿ॥5॥ ಕವಿಜನ ರಚಿತ ಮಹೋನ್ನತ ಕಾವ್ಯ ಕದಂಬ ಕಾನನ ವಿಹಾರಿಣಿ ಕವಿಜನ ಮಾನಸ ಕಾಮಿತ ಕಲ್ಪನ ಕಾವ್ಯ ತುರಂಗ ವಾಸಿನಿ ಅಂಬಾ॥6॥ ಮೀನ ಲೋಚನಿ ದುರಿತ ವಿಮೋಚನಿ। ಮೀನಾಕ್ಷೀಸುತ ಹೃದಯ ಪ್ರಸನ್ನ ಮಧುರ ಶ್ರೀಲಲಿತಾಂಬ ಪಾಹಿಮಾಂ॥7॥

ಲಲಿತಾ ಲಲಿತಾ ಹೇ ಲಲಿತಾ — ರಾಗ: ದುರ್ಗ

ಲಲಿತಾ ಲಲಿತಾ ಹೇ ಲಲಿತಾ। ಲಲಿತಾ ಲಲಿತಾ ಹೇ ಮಾತಾ। ಲಲಿತಾ ಲಲಿತಾ ಜಗದಂಬಾ। ಶರಣಾಗತೆಯೆ ಲಲಿತಾಂಬ। ಸರ್ವಾಕರ್ಷಣಿ ಲಲಿತಾಂಬಾ। ಸರ್ವೋನ್ಮಾದೆ ಲಲಿತಾಂಬಾ। ಪೂಜಿಪೆ ನಿನ್ನ ಲಲಿತಾಂಬಾ। ಪಾದಕ್ಕೆರಗುವೆ ಲಲಿತಾಂಬಾ। ತೇಜೋ ರೂಪಿಣಿ ಲಲಿತಾಂಬಾ। ತ್ರಿಭುವನಜನನಿ ಲಲಿತಾಂಬಾ॥ ಓಂ ಮಾತಾ ಶ್ರೀ ಮಾತಾ। ಓಂ ಶ್ರೀ ಮಾತಾ ಲಲಿತಾಂಬಾ॥

ಪರಮ ಪಾವನೇ ಲಲಿತೆ — ರಾಗ: ಅಠಾಣ

ಪರಮ ಪಾವನೇ ಲಲಿತೆ। ಸುರನುತೆ ಲೋಕಮಾತೆ॥ಪ॥ ಮುರಹರ ಪ್ರೀತೇ ಹಿತೇ। ಪೊರೇ ಗಿರಿರಾಜಸುತೇ॥ಅ.ಪ॥ ರಾಜಿತ ಹಿಮಗಿರಿ ರಾಜಕುಮಾರಿ। ರಾಜಶಂಕರಿ ಗೌರಿ ರಾಜ ರಾಜೇಶ್ವರಿ॥1॥ ನಾರದ ಮುನಿನುತೇ ಚಾರುಗುಣಾನ್ವಿತೇ। ನೀರಜ ಭವಸುತೇ ಧೀರ ಸುರಾರ್ಚಿತೇ॥2॥ ಈ ಮಹಿಷಾಪುರದ ಚಾಮ ಭೂಪಾಲನ। ಪ್ರೇಮದಿ ನೀ ಕಾಯೆ ಶ್ರೀ ಚಾಮುಂಡೇಶ್ವರಿ॥3॥

ಜಯ ಜಯ ವೈಷ್ಣವಿ ದುರ್ಗೇ (ಲಲಿತಾಷ್ಟಕ) — ರಾಗ: ಪುನ್ನಾಗವರಾಳಿ

ಜಯ ಜಯ ವೈಷ್ಣವಿ ದುರ್ಗೇ ಲಲಿತೆ। ಜಯ ಜಯ ಭಾರತಿ ದುರ್ಗೇ ಲಲಿತೆ। ಜಯಜಯ ಭಾರ್ಗವಿ ದುರ್ಗೇ ಲಲಿತೆ। ಜಯ ಪ್ರಣಮಾಮಿ ಸದಾ ಶ್ರೀಲಲಿತೆ॥ ಬ್ರಹ್ಮಾದ್ಯಮರ ಸೇವಿತೆ ಲಲಿತೆ। ಧರ್ಮಾಧರ್ಮ ವಿಚಕ್ಷಣೆ ಲಲಿತೆ। ಕರ್ಮ ನಿರ್ಮೂಲಕಾರಿಣಿ ಲಲಿತೆ। ತ್ವಾಂ ಪ್ರಣಮಾಮಿ ಸದಾ ಶ್ರೀಲಲಿತೆ। ಅಷ್ಟಾದಶ ಪೀಠೇಶ್ವರಿ ಲಲಿತೆ। ಕಷ್ಟ ನಿವಾರಿಣಿ

ಕಾರಿಣಿ ಲಲಿತೆ। ಅಷ್ಟೈಶ್ವರ್ಯ ಪ್ರದಾಯಿನಿ ಲಲಿತೆ। ತ್ವಾಂ ಪ್ರಣಮಾಮಿ ಸದಾ ಶ್ರೀಲಲಿತೆ।। ಚಂದ್ರಕಲಾಧರಿ ಶ್ರೀಕರಿ ಲಲಿತೆ। ಚಂದ್ರ ಸಹೋದರಿ ಶ್ರೀಕರಿ ಲಲಿತೆ। ಚಂದ್ರಮಂಡಲ ವಾಸಿನಿ ಲಲಿತೆ। ತ್ವಾಂಪ್ರಣಮಾಮಿ ಸದಾ ಶ್ರೀ ಲಲಿತೆ। ದುಷ್ಟದಾನವ ಭಂಜಿನಿ ಲಲಿತೆ।। ಶಿಷ್ಟಜನಾವನ ಪೋಷಣೆ ಲಲಿತೆ। ಆರ್ತತ್ರಾಣ ಪರಾಯಣೆ ಲಲಿತೆ। ತ್ವಾಂ ಪ್ರಣಮಾಮಿ ಸದಾಶ್ರೀ ಲಲಿತೆ।।ಅರುಣಾರುಣ ಕೌಶುಂಬಿನಿ ಲಲಿತೆ। ಸರ್ವಾಭರಣ ಭೂಷಿಣೆ ಲಲಿತೆ। ಮಾಣಿಕ್ಯ ಮುಕುಟ ವಿರಾಜಿತೆ ಲಲಿತೆ। ತ್ವಾಂ ಪ್ರಣಮಾಮಿ ಸದಾ ಶ್ರೀ ಲಲಿತೆ।। ಪತಿತೋದ್ಧಾರಿಣೆ ಪಾವನಿ ಲಲಿತೆ। ಪರಮದಯಾಕರಿ ಪಾರ್ವತಿ ಲಲಿತೆ। ಸತತ ಮಂಗಳದಾಯಿನಿ ಲಲಿತೆ। ತ್ವಾಂ ಪ್ರಣಮಾಮಿ ಸದಾ ಶ್ರೀ ಲಲಿತೆ।। ಶ್ರೀ ಚಕ್ರಾಂಕಿತ ವಾಸಿನಿ ಲಲಿತೆ। ಶ್ರೀಮತ್ರಿಪುರಸುಂದರಿ ಲಲಿತೆ। ಸಿಂದೂರಾರುಣ ವಿಗ್ರಹೆ ಲಲಿತೆ। ತ್ವಾಂ ಪ್ರಣಮಾಮಿ ಸದಾ ಶ್ರೀ ಲಲಿತೆ।।

❖ ❖ ❖

ಶ್ರೀ ಅನ್ನಪೂರ್ಣೇಶ್ವರೀ ದೇವಿ

ಕಣ್ಣು ನೂರು ಸಾಲದು **ರಾಗ: ಬೇಹಾಗ್-ಮಿಶ್ರಛಾಪು**

ಕಣ್ಣು ನೂರು ಸಾಲದು ಅನ್ನಪೂರ್ಣೇಯ ನೋಡಲು। ನಾಲಿಗೆ ಸಾವಿರ ಸಾಲದು ಈಶ್ವರಿ ಇವಳನು ಹೊಗಳಲು।।ಪ।। ಭಿಕ್ಷಾಂದೇಹಿ ಎನ್ನಲು ಶಂಕರ ಭಿಕ್ಷೆಯ ನೀಡಿತು ಈ ಕರ। ಧೈರ್ಯದಾಗರ ಪ್ರೇಮಸಾಗರ ಭಕ್ತರಿಗಿವಳೆ ಆಧಾರ।।1।। ಮಲೆನಾಡಿನ ಮನೆ ಬೇಕೆಂದಿವಳು ನೆಲಸಿಹಳಿಲ್ಲಿ ಹೊರನಾಡಿನಲಿ। ಚೆಲುವಿನ ತಾಣ ಒಲವಿನ ಪ್ರಾಣ ಆಗಿದೆ ಮಂದಿರ ಕಾಡಿನಲಿ।।2।।

ಪಾಲಿಸೆ ಎನ್ನ ಅನ್ನಪೂರ್ಣೇಶ್ವರಿಯೇ **ರಾಗ: ಶ್ರೀರಾಗ-ಆದಿತಾಳ**

ಪಾಲಿಸೆ ಎನ್ನ ಅನ್ನಪೂರ್ಣೇಶ್ವರಿಯೇ। ಪಾಲಿಸೆಯಮ್ಮನು ಹೊರನಾಡಿನ ಮಾತೇ।। ಪರಮೇಶ್ವರಿಯೇ ದೇವಿ ಮಂಗಳ ದೇವಿ। ಪಾಲಿಸೆ ತಾಯೆ ಶ್ರೀ ಅನ್ನಪೂರ್ಣೇಶ್ವರಿಯೇ।।ಪ।। ಧರ್ಮದೇವತೆಯೆ ನೀ ಭಜಿಪ ಭಕ್ತರಿಗೆ। ದರುಶನವನು ನೀಡೆ। ದಾನವಾಂತಕಳೆ ನೀ ದೀನರಕ್ಷಕಳೇ। ಅನ್ನದಾತಳೆ ನಿನಗೆ ವಂದಿಸಿ ಬೇಡುವೆ ತಾಯೆ।।1।। ತಾಯೆ ನೀನಲ್ಲದೆ ರಕ್ಷಿಪರನು ಕಾಣೆ। ನಾ ಮುನ್ನ ನಿರುತವು ನಿನ್ನ ಸ್ಮರಿಸಿ ಬೇಡುವೆನಮ್ಮ। ಕುಕ್ಕೆ ಸ್ವಾಮಿ ಮಾತೆ ನಿನ್ನ ಸೇವೆಯ ಭಾಗ್ಯವ ನೀಡು ತಾಯೆ।।2।।

ಅನ್ನಪೂರ್ಣೇ ವಿಶಾಲಾಕ್ಷಿ **ರಾಗ: ಸಾಮ-ಆದಿತಾಳ**

ಅನ್ನಪೂರ್ಣೇ ವಿಶಾಲಾಕ್ಷಿ ರಕ್ಷ ಅಖಿಲ ಭುವನಸಾಕ್ಷಿ ಕಟಾಕ್ಷಿ।।ಪ।। ಉನ್ನತಗರ್ಕ ತೀರವಿಹಾರಿಣೆ ಓಂಕಾರಿಣೆ ದುರಿತಾದಿ ನಿವಾರಿಣೆ। ಪನ್ನಗಾಭರಣ ರಾಜ್ಞಿ ಪುರಾಣಿ ಪರಮೇಶ್ವರ ವಿಶ್ವೇಶ್ವರ ಭಾಸ್ವರಿ।।ಅ.ಪ.।। ಪಾಯಸಾನ್ನಪೂರಿತ ಮಾಣಿಕ್ಯಪಾತ್ರ ಹೇಮದರ್ವೀ ವಿಧೃತಕರೇ। ಕಾಯಜಾದಿ ರಕ್ಷಣ ನಿಪುಣತರೇ ಕಾಂಚನಮಯ ಭೂಷಣಾಂಬರಧರೇ।। ತೋಯಜಾಸನಾದಿ ಸೇವಿತಪರೇ ತುಂಬುರು ನಾರದಾದಿನುತವರೇ। ತ್ರಯಾತೀತ ಮೋಕ್ಷಪ್ರದ ಚತುರೇ ತ್ರಿಪದ ಶೋಭಿತ ಗುರುಗುಹಸಾದರೇ।।ಚ।।

ಅನ್ನಪೂರ್ಣೆ ಸದಾಪೂರ್ಣೆ **ರಾಗ: ಸಾಮ-ಆದಿತಾಳ**

ಅನ್ನಪೂರ್ಣೆ ಸದಾಪೂರ್ಣೆ। ಸನ್ನುತಾಂಗಿಯೆ ನಿನ್ನ ಸಮರಾರಿಹರು।।ಪ।। ಹೊರನಾಡಲಿ ಶಾಶ್ವತವಾಗಿ ನೆಲಸಿ। ಶರಣುಬಂದ ಭಕ್ತವೃಂದವ ಒಲಿಸಿ। ಪರಿಪೂರ್ಣಮೂರ್ತಿಯ ಕಣ್ತುಂಬ ನಿಲಿಸಿ। ತಾರತಮ್ಯವಿಲ್ಲದೆ ಎಲ್ಲರ ತಣಿಸುವೆ।।1।। ಉದಾರಗುಣಯುತೆ ಉದರ ಪೋಷಕಿಯೆ। ಸದಾಶಿವಜಾಯೆ ಸಾಮಗಾನಪ್ರಿಯೆ। ವಿಧಾತೃಮಾತೆ ಸಕಲ ಸಂಪದದಾತೆ। ಸದಾ ಬೆಂಬಿಡದೆ ಎನ್ನ ಕಂದನಂತೆಣಿಸೆ।।2।। ಸರ್ವಸೌಭಾಗ್ಯವ ಕರುಣಿಸು ತಾಯೆ। ಸರ್ವಮಂಗಳೆ

ಗಿರಿರಾಜ ತನಯೆ। ಸರ್ವಶ್ರೇಷ್ಠಳೆ ದೇವೀ ಸರ್ವೋತ್ತುಂಗೆ। ಸರ್ವಶಂಕರಿ ಅಖಿಲಾಂಡೇಶ್ವರಿ॥3॥

ಅನ್ನಪೂರ್ಣೇ ದಯಾಸಾಗರೀ **ರಾಗ: ರಂಜನಿ**

ಅನ್ನಪೂರ್ಣೇ ದಯಾಸಾಗರೀ। ಅಭಯವ ನೀಡು ನೀ ಯೋಗೀಶ್ವರಿ। ಭಕ್ತವೃಂದವ ಪಾಲಿಸಿ ಮುಕ್ತಿ ಮಾರ್ಗವ ತೋರಿಸಿ। ಕಷ್ಟ ನಿಷ್ಠುರದಿಂದ ಕೃಪೆಯಮಾಡಿ ಪೊರೆಯೈ॥1॥ ನಿತ್ಯಾನ್ನದಾಯಿನಿ ಸತ್ಯವ ದೇವಿ ಸುತಗೆ। ತತ್ವ ಬೋಧೆಯಿಂ ತೋರಿ ಪೊರೆಯೈ। ವಿಶ್ವವ್ಯಾಪಿನಿ ಸದಾಶಿವ ಶಕ್ತಿಯೇ ಶರಣೆಂಬೆ ನಾ ಧರಣೀ ಜಾತೆಗೆ॥2॥

ಕೋಪವೇತಕೆ ಎನ್ನಮೇಲೆ **ರಾಗ: ಪಂತುವರಾಳಿ**

ಕೋಪವೇತಕೆ ಎನ್ನಮೇಲೆ ಶ್ರೀ ಪಾರ್ವತಾದೇವಿ ಅನಾಥ ರಕ್ಷಕಿ ಅನ್ನಪೂರ್ಣೆ ಭವಾನಿ ಲೋಕಪಾವನೆ ಅನ್ನಪೂರ್ಣೇ ನೀ ತಿಳಿದೆನ್ನ ಪ್ರೀತಿಯಿಂದ ಕರುಣಿಸಬೇಕೆಂದು ಹೂರಣ ದಾರುತೀಯ ಬೆಳಗೀರೆ॥ಪ॥ ಉಪ್ಪಲ ಗೌರಿ ನೀ ಸಿಟ್ಟು ಮಾಡಿದರೆನ್ನ ರಕ್ಷಿಸುವವರ್‍ಯಾರೆ। ಕಟ್ಟಾಣಿ ಮಣಿಯೇ ಮುಕ್ತಿದಾಯಕಿ ಅನ್ನಪೂರ್ಣೇ ನೀ ತಿಳಿದೆನ್ನ ಮುತ್ತೈದೆ ಭಾಗ್ಯವ ಕರುಣಿಸಬೇಕೆಂದು। ಮುತ್ತಿನಾರುತೀಯ ಬೆಳಗೀರೆ॥1॥ ಮಂದ ಬುದ್ಧಿಯ ಬಿಟ್ಟು ಮನವಾ ನಿಶ್ಚಯ ಮಾಡಿ ಬಂದು। ಸೇರಿದೆ ನಿಮ್ಮಂಘ್ರಿ ಕಮಲದಲ್ಲಿ ಮಂಗಳ ಗೌರಿ ಅನ್ನಪೂರ್ಣೇ ನೀ ತಿಳಿದೆನ್ನ ಮಾಂಗಲ್ಯ ಭಾಗ್ಯವ ಕರುಣಿಸಬೇಕೆಂದು ಮಂಗಳಾರುತೀಯ ಬೆಳಗೀರೆ॥2॥ ಕಾಮಕ್ರೋಧಗಳೆಂಬೊ ಹೀನ ಶರಧಿಯಲಿ ಹಾರಿ ಮುಳುಗಿ ತೇಲುತಲಿಹೆನು। ಲೋಲಲೋಚನೆ ಅನ್ನಪೂರ್ಣೇ ನೀ ತಿಳಿದೆನ್ನ ವಾಲೆ ಭಾಗ್ಯವ ಕರುಣಿಸಬೇಕೆಂದು ಹೂವಿನಾರುತೀಯಾ ಬೆಳಗೀರೆ॥3॥ ನಿಮ್ಮ ನಂಬಿದೆತಾಯೆ ಎನ್ನ ರಕ್ಷಿಸಿ ಕಾಯೆ ಕನ್ನಡಿ ಕದಪಿನ ಕಾಂತೆ ಅನ್ನಪೂರ್ಣೇ ಹೊನ್ನೋಲೆ ಭಾಗ್ಯವ ಎನಗೆ ಕರುಣಿಸಬೇಕೆಂದು ಬಿನ್ನಾಣದಾರುತೀಯ ಬೆಳಗೀರೆ॥

ತಡವೇತಕೆ ತಾಯೆ ಅನ್ನಪೂರ್ಣೆಯೆ **ರಾಗ: ಕಾನಡ-ಆದಿತಾಳ**

ತಡವೇತಕೆ ತಾಯೆ। ಅನ್ನ ಪೂರ್ಣೆಯೆ। ಮೃಡನೊಡನೆ ಕೃಪೆತೋರು। ಜಗದಂಬೆಯೆ॥ಪ॥ ಅಡಿಗಡಿ ಗೆರಗುವೆ। ಆದಿಶಕ್ತಿಯೆ ನೀ। ಕಡು ಸಂಭ್ರಮದೀ। ಸಲಹಮ್ಮ ಜನನಿ॥ಅ.ಪ.॥ ಸನಕಾದಿ ಮುನಿವಂದ್ಯೆ। ಸುರಪೂಜಿತೆ। ಅನುಗಾಲ ಭಕ್ತರನು ಪರಿಪಾಲಿತೆ। ಅನುಮಾನ ವೇಕಮ್ಮ ಪರದೇವತೆ। ಅನುಮಾನ ವೇಕಮ್ಮ ಪರದೇವತೆ। ಅನುದಿನವು ಸಲಹಮ್ಮ ಅಧಿದೇವತೆ॥1॥ ನವರಾತ್ರಿ ದಿನದಿನವು। ನವರೂಪಿಲಿ। ನವಶಕ್ತಿ ತುಂಬುತಲಿ। ಭಯ ನೀಗುವೆ। ನವಶಕ್ತಿ ಧಾರಿಣಿ ನವ ಭೂಷಿಯೆ। ನವರಾಗ ಪಾಡುತ। ನಲಿದಾಡುವೆ॥2॥

ಕರುಣಿಸು ತಾಯೇ ಅನ್ನಪೂರ್ಣೇಶ್ವರಿ **ರಾಗ: ಕಲ್ಯಾಣಿ-ಆದಿತಾಳ**

ಕರುಣಿಸು ತಾಯೇ ಅನ್ನಪೂರ್ಣೇಶ್ವರಿ। ಸ್ಮರಿಸುವೆ ನಿನ್ನನು ಶ್ರೀ ವರದಾಯಿನಿ॥ಪ॥ ಹೊರನಾಡ ಭುವಿಯಲ್ಲಿ ಗಿರಿಶಿಖರ ಮಡಿಲಲ್ಲಿ। ಪರಮಶಾಂತಿಯ ನೀಡೆ ನೆಲೆಸಿರುವೆಯಮ್ಮ। ಭಕ್ತರಾ ಭೀಷ್ಟಗಳ ಪೂರೈಸುತಲೊಮ್ಮೆ। ಕರುಣಾದೃಷ್ಟಿಯ ಬೀರು ಹೇ ಕರುಣಾಮಯಿ॥1॥ ಜಗಜನನೀ ಜಗದೀಶ್ವರಿ ಮಾತ। ಸೃಷ್ಟಿಸ್ಥಿತಿಲಯ ಕಾರಣೆ ಮಾತ। ಜ್ಞಾನಸಿಂಧು ಸುಖದಾಯಿನಿ ಮಾತ। ತ್ರಿಲೋಕ ಸುಂದರಿ ಪಾವನಿ ಮಾತ॥2॥ ಸತ್ಯಸ್ವರೂಪಿಣಿ ಶ್ರೀ ಚಕ್ರವಾಸಿನಿ। ತ್ರಿಭುವನ ಮೋಹಿನಿ ಪ್ರೇಮಸ್ವರೂಪಿಣಿ। ನಿತ್ಯಕಲ್ಯಾಣಿ ಶಾಂಭವಿ ಶಂಕರಿ। ರಾಜರಾಜೇಶ್ವರಿ ಚೈತನ್ಯ ದಾಯಿನಿ॥3॥

ಶ್ರೀ ಅನ್ನಪೂರ್ಣೇ ಮಹಾ ಮಾತೆಯೇ **ರಾಗ: ಮಧ್ಯಮಾವತಿ**

ಶ್ರೀ ಅನ್ನಪೂರ್ಣೇ ಮಹಾ ಮಾತೆಯೇ। ಅಂಬ ಕೋಟಿಸೂರ್ಯ ಪ್ರಕಾಶಿನಿ। ಸರ್ವಾರಿಷ್ಟ ನಿವಾರಿಣಿ॥ಪ॥ ಹೇಮ ಕಿರೀಟಧಾರಿಣೀ। ಕಾಮರೂಪಿಣೀ ಕಾತ್ಯಾಯಿನಿ। ದೇವ ದೇವಿಸುತ ಕರವಾಸಿನಿ। ಕ್ಷಾಮಪೀಡಾ ಪರಿಹಾರಿಣಿ॥1॥ ಅತಳ ಸುತಳ ರಸ ಪಾತಾಳ। ಅಷ್ಟ ದಿಗ್ಗಜ ಚಿತ್ರಿತ ಆಲಯವಾಸಿನಿ। ಇಷ್ಟದೇವಿ ಹೊರನಾಡ ಕ್ಷೇತ್ರದಿ। ಶ್ರೇಷ್ಠ ಕುಂಭಯಂತ್ರ ಮಧ್ಯದಿ॥2॥

ಜ್ಯೋತಿಯ ಬೆಳಗಮ್ಮಾ ರಾಗ: ಬಿಲಹರಿ

ಜ್ಯೋತಿಯ ಬೆಳಗಮ್ಮಾ। ಮಂಗಳ ಜ್ಯೋತಿಯ ಬೆಳಗಮ್ಮ।।ಪ।। ಕನಕಾಂಬರ ನವರತ್ನಧಾರಿಣಿ। ಸುಂದರರೂಪಿಣೀ। ಮಾತಾನ್ನ ಪೂರ್ಣೆಗೆ।।ಅ.ಪ।। ಸೂರ್ಯಚಂದ್ರಾದಿ ತೇಜೋರೂಪಿಣಿ।। ತ್ರಿಭುವನಾಂತಿಕೆ। ತ್ರಿಪುರೇಶ್ವರಿಗೆ। ಆದಿ ಅಂತ್ಯವು ತಾನಾಗಿರುವ। ಆನಂದಮಯಿ ಅನ್ನಪೂರ್ಣೆಗೆ।।1।। ಅರಿಶಿನ ಕುಂಕುಮ ಗಂಧವನಿರಿಸಿ। ಚೆಂದದ ಪರಿಮಳ ಪುಷ್ಪವ ಮುಡಿಸಿ। ಕ್ಷೀರಾನ್ನ ಪಾಯಸ ನೈವೇದ್ಯ ಮಾಡಿ। ಶ್ರೀ ಚಕ್ರಧಾರಿಣಿ ಅನ್ನಪೂರ್ಣೆಗೆ।।2।। ಸಪ್ತಸ್ವರಗಳ ಘಂಟಾನಾದದಿ। ಮಂಗಳ ಘೋಷವ ಹರುಷದಿ ಮೊಳಗಿಸಿ। ಗೀತೆಯ ಹಾಡುತ ಜ್ಯೋತಿಯ ಬೆಳಗಿರಿ। ಮಹಿಮಾನ್ವಿತೆ ಶ್ರೀ ಅನ್ನಪೂರ್ಣೆಗೆ।।3।।

ನಿತ್ಯಾನಂದಕರೀ ವರಾಭಯಕರೀ (ಅನ್ನಪೂರ್ಣಾಷ್ಟಕಮ್)

ನಿತ್ಯಾನಂದಕರೀ ವರಾಭಯಕರೀ ಸೌಂದರ್ಯರತ್ನಾಕರೀ। ನಿರ್ಧೂತಾಖಿಲ ಘೋರ ಪಾವನಕರೀ। ಪ್ರತ್ಯಕ್ಷಮಾಹೇಶ್ವರೀ। ಪ್ರಾಲೇಯಾಚಲ ವಂಶಪಾವನಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರಿ।। ನಾನಾರತ್ನ ವಿಚಿತ್ರ ಭೂಷಣ ಕರೀ ಹೇಮಾಂಬರಾಡಂಬರೀ। ಮುಕ್ತಾಹಾರ ವಿಡಂಬಮಾನವಿಲಸ ದ್ವಕ್ಷೋಜಕುಂಭಾಂತರೀ। ಕಾಶ್ಮೀರಾಗುರು ವಾಸಿತಾಂಗರುಚಿರಾ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಯೋಗಾನಂದಕರೀ ರಿಪುಕ್ಷಯಕರೀ ಧರ್ಮೈಕ ನಿಷ್ಠಾಕರೀ। ಚಂದ್ರಾರ್ಕಾನಲ ಭಾಸಮಾನಲಹರೀ ತ್ರೈಲೋಕ್ಯರಕ್ಷಾಕರೀ। ಸರ್ವೇಶ್ವರ್ಯಕರೀ ತಪಃಫಲಕಾರೀ ಕಾಶೀಪುರಾಧೀಶ್ವರೀ। ಭಿಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂಣೇಶ್ವರೀ।। ಕೈಲಾಸಾಚಲ ಕಂದರಾಯಲಕರೀ ಗೌರೀ ಉಮಾಶಾಂಕರೀ। ಕೌಮಾರೀ ನಿಗಮಾರ್ಥ ಗೋಚರಕರೀ ಓಂಕಾರ ಭೀಜಾಕ್ಷರೀ। ಮೋಕ್ಷದ್ವಾರ ಕವಾಟಪಾಟನಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ದೃಶ್ಯಾದೃಶ್ಯವಿಭೂತಿ ಪಾವನಕರೀ ಬ್ರಹ್ಮಾಂಡಭಾಂಡೋದರೀ। ಲೀಲಾನಾಟಕ ಸೂತ್ರಖೇಲನಕರೀ ವಿಜ್ಞಾನ ದೀಪಾಂಕುರೀ। ಶ್ರೀವಿಶ್ವೇಶಮನಃ ಪ್ರಮೋದನ ಕರೀ ಕಾಶೀ ಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಆಧಿಕ್ಷಾಂತ ಸಮಸ್ತ ವರ್ಣನಕರೀ ಶಂಭುಪ್ರಿಯೇ ಶಾಂಕರೀ। ಕಾಶ್ಮೀರೇ ತ್ರಿಪುರೇಶ್ವರೀ ತ್ರಿಣಯಿನೀ ವಿಶ್ವೇಶ್ವರೀ ಶ್ರೀಧರೀ। ಸ್ವರ್ಗದ್ವಾರ ಕವಾಟ ಪಾಟನಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾ ವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಉರ್ವೀ ಸರ್ವಜಯೇಶ್ವರೀ ಜಯಕರೀ ಮಾತಾ ಕೃಪಾಸಾಗರೀ। ನಾರೀ ನೀಲಸಮಾನ ಕುಂತಲಧಾರಿ ನಿತ್ಯಾನ್ನದಾನೇಶ್ವರೀ। ಸಾಕ್ಷಾನ್ಮೋಕ್ಷಕರಿ ಸದಾ ಶುಭಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ದೇವೀ ಸರ್ವ ವಿಚಿತ್ರರತ್ನರಚಿತಾ ದಾಕ್ಷಾಯಣೀ ಸುಂದರೀ। ವಾಮಾ ಸ್ವಾದುಪಯೋಧರ ಪ್ರಿಯಕರೀ ಸೌಭಾಗ್ಯ ಮಾಹೇಶ್ವರೀ। ಭಕ್ತಾಭೀಷ್ಟಕರೀ ಸದಾ ಶುಭಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಚಂದ್ರಾರ್ಕಾನಲ ಕೋಟಿಕೋಟಿ ಸದೃಶಾ ಚಂದ್ರಾಂಶುಬಿಂಬಾದರೀ। ಚಂದ್ರಾರ್ಕಾಗ್ನಿ ಸಮಾನ ಕುಂಡಲಧರೀ ಚಂದ್ರಾರ್ಕವರ್ಣೇಶ್ವರೀ। ಮಾಲಾಪುಸ್ತಕ ಪಾಶಸಾಂಕುಶಧರೀ ಕಾಶೀ ಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಕ್ಷತ್ರತ್ರಾಣಕರೀ ಸದಾ ಶಿವಕರೀ ಮಾತಾ ಕೃಪಾಸಾಗರೀ। ಸಾಕ್ಷಾನ್ಮೋಕ್ಷಕರೀ ಸದಾ ಶಿವಕರೀ ವಿಶ್ವೇಶ್ವರೀ ಶ್ರೀಧರೀ। ದಕ್ಷಾಕ್ರಂದಕರೀ ನಿರಾಮಯಕರೀ ಕಾಶೀಪುರಾಧೀಶ್ವರೀ। ಭೀಕ್ಷಾಂದೇಹಿ ಕೃಪಾ ವಲಂಬನಕರೀ ಮಾತಾನ್ನ ಪೂರ್ಣೇಶ್ವರೀ।। ಅನ್ನಪೂಣೇ ಸದಾಪೂಣೇ ಶಂಕರಪ್ರಾಣ ವಲ್ಲಭೇ।ಜ್ಞಾನವೈರಾಗ್ಯ ಸಿಧ್ಯರ್ಥಂ ಭಿಕ್ಷಾಂದೇಹಿ ಚ ಪಾರ್ವತಿ। ಮಾತಾಚ ಪಾರ್ವತೀ ದೇವೀ ಪಿತಾ ದೇವೋ ಮಹೇಶ್ವರಃ। ಬಾಂಧವಾಃ ಶ್ಶಿವಭಕ್ತಾಶ್ಚಾ ಸ್ವದೇಶೋ ಭುವನತ್ರಯಂ।।

ಭಗವತಿ ಭವರೋಗಾತ್ (ಅನ್ನಪೂರ್ಣಾ ಸ್ತೋತ್ರಂ)

ಭಗವತಿ ಭವರೋಗಾತ್ ಪೀಡಿತಂ ದುಷ್ಕತೋತ್ಥಾತ್। ಸುತದುಹಿತ್ರ ಕಲತ್ರೋಪದ್ರ ವೇಣಾನುಯಾತಮ್।

ವಿಲಸದಮೃತದೃಷ್ಟ್ಯಾ ವೀಕ್ಷ್ಯ ವಿಭ್ಯಾಂತ ಚಿತ್ತಂ। ಸಕಲಭುವನ ಮಾತಸ್ತ್ರಾಹಿ ಮಾಮೋಂ ನಮಸ್ತೇ॥1॥ ಮಾಹೇಶ್ವರೀ ಮಾಶ್ರೀತಕಲ್ಪವಲ್ಲೀ। ಮಹಂ ಭವೋಚ್ಛೇದಕರೀಂ ಭವಾನೀಮ್। ಕ್ಷುಧಾರ್ತಜಾಯಾ ತನಯಾದ್ಯುಪೇತ। ಸ್ತ್ವಾಮನ್ನಪೂರ್ಣೇ ಶರಣಂ ಪ್ರಪದ್ಯೇ॥2॥ ದಾರಿದ್ರ್ಯಾವಾನಲ ದಹ್ಯಮಾನಂ। ಪ್ರಾಹ್ಯನ್ನ ಪೂರ್ಣೇ ಗಿರಿರಾಜ ಕನ್ಯೇ। ಕೃಪಾಂಬುಧೌ ಮಜ್ಜಯ ಮಾಂ ತ್ವದೀಯೇ। ತ್ವಾತ್ಪದ ಪದ್ಮಾರ್ಪಿತ ಚಿತ್ತವೃತ್ತಿಮ್॥3॥ ಇತ್ಯನ್ನಪೂರ್ಣಾ ಸ್ತುತಿ ರತ್ನಮೇತತ್। ಶ್ಲೋಕತ್ರಯಂ ಯಃ ಪಠತೀಹ ಭಕ್ತ್ಯಾ। ತಸ್ಮೈದದಾತ್ಯನ್ನ ಸಮೃದ್ಧಿಮಾಂಬಾ। ಶ್ರೀಯಾಂ ಚ ವಿದ್ಯಾಂ ಚ ಯಶಶ್ಚಮುಕ್ತಿಮ್॥4॥ ಇತಿ ಶ್ರೀ ಶ್ರೀಮತ್ ಶಂಕರ ಭಗವತ್ಪಾದಾಚಾರ್ಯ ವಿರಚಿತಂ ಶ್ರೀ ಅನ್ನಪೂರ್ಣಾ ಸ್ತೋತ್ರಂ ಸಂಪೂರ್ಣಂ॥

ಶ್ರೀ ನಿಮಿಷಾಂಬಾ ದೇವಿ

ನಿಮಿಷಾಂಬಾ ಜಗದ್ಧಾತ್ರಿ (ಸುಪ್ರಭಾತ) ರಾಗ: ಭೌಳಿ

ನಿಮಿಷಾಂಬಾ ಜಗದ್ಧಾತ್ರಿ ಪೂರ್ವಾಸಂಧ್ಯಾಪ್ರವರ್ತತೇ। ಉತ್ತಿಷ್ಠ ಮುಕ್ತವರದೇ ತ್ರೈಲೋಕ್ಯಂ ಮಂಗಳಂ ಕುರು॥1॥ ಉತ್ತಿಷ್ಠ ದೇವದೇವೇಶಿ ಸೋಮವಂಶಜನೇಶ್ವರಿ। ಉತ್ತಿಷ್ಠ ಕರುಣಾಪೂರ್ಣೇತ್ವಮುತ್ತಿಷ್ಠ ಮೃಡೇಶ್ವರಿ॥2॥ ಪ್ರಾತಃ ಪ್ರಶಾಂತಾಸಮಯಃ ಸಮುಪಸ್ಥಿತ ತೋಽಯಂ ಹಂಸಾದ್ಯಶೇಷ ಜಲಗಾಶ್ಚ ಖಗಾಃ ಪಿಕಾದ್ಯಾಃ॥ ಮಧ್ವಾದೃತಾಃ ಮಧುಕರಾ ಮಧುರಂ ಧ್ವನಂತಿ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥3॥ ಸೇವಾ ನಿವರ್ತ್ಯ ನಿಯತಾಂ ರಜನೀಶ್ವರೋಽದ್ಯ। ಪ್ರತ್ಯಗ್ಭವಂ ವಿಶತಿ ಭೂಧರಮಾತ್ಮ ಗೇಹಂ॥ ರಕ್ತೋಽರುಣಸ್ಸಪದಿ ಪೂರ್ವದಿಶಂ ಗತೋಸ್ತಿ। ಮಾತಸ್ತವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥4॥ ಆವಾತಿಮಂದಮಿಹ ಶೀತಸುಗಂಧಿವಾತಃ। ಸೇವಾಪರಾಸ್ತವ ಪುರೋ ನತಮಸ್ತಕಾಶ್ಚ॥ ಸಂತ್ಯತ್ರಭಕ್ತ ವರದೇಽಭಯದಾನ ಶೀಲೇ। ಮಾತಸ್ತವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥5॥ ಸಹ್ಯಾದ್ರಿಜಾ ಸಲಿಲಮಜ್ಜನ ಪೂತದೇಹಾಃ। ಅವ್ಯಾಹತ ಶ್ರುತಿ ಸು-ಮಂತ್ರ ಗತಾಂತರಂಗಾಃ॥ ಸ್ತುತ್ಯಾದೃತಾಸ್ತವ ಪುರೋ ವಿಲಸಂತಿ ವಿಪ್ರಾಃ। ಮಾತಸ್ತವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥6॥ ಕೂಲೇ ಕವೇರ ಮುನಿಜಾತ ಸರಿದ್ವರಾಯಾಃ। ಘಟ್ಟೇ ಚ ಪಾವನತಮೇ ಮಣಿಕರ್ಣಿಕಾಖ್ಯೇ॥ ಸನ್ಮಂದಿರೇ ವಸಸಿ ದೇವೀ ನಿಮೇಷಮಾತಃ। ಶ್ರೀಚಕ್ರಗೇಹ ನಿಲಯೇ ತವ ಸುಪ್ರಭಾತಂ॥7॥ ತ್ವನ್ಮಂಜುವಕ್ರಗತ ಮೀನಯುಗಂ ವಿಲೋಕ್ಯ। ಮೀನಾಸ್ತು ಪಾರ್ಶ್ವಸರಿತೋವಿರತಂ ಡಯಂತೇ॥ ಅತ್ಯದ್ಭುತಂ ಕಥಮಿಹೇತಿ ವಿಚಾರಯಂತಃ। ಮೀನಾಕ್ಷಿ! ಮಂಗಳಮಯಂ ಭವತಾತ್ಪ್ರಭಾತಂ॥8॥ ಬೀಜ ಪ್ರಪೂರ್ಣ ಫಲಭಾರ ವಿನಮ್ರವೃಕ್ಷಾಃ। ಮಂದೇನ ಗಂಧವಹನೇನ ನಿದೇಶಿತಾಶ್ಚ। ಶಶ್ವನ್ನಮಂತಿ ಪರಿತಃ ಕಿಲ ವಾಟಿಕಾಸು। ಮಾತಸ್ತು ವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥9॥ ತ್ವನ್ಮಂದಿರಂ ಚ ಪರಿತಃ ಕಲಿಮಾಹ ಸುಪಕ್ವಾಃ। ಕೈದಾರಿಕೇಷು ವಿಲಸಂತಿ ವಿನಮ್ರಶೀರ್ಷಾಃ॥ ಮಾತುರ್ಭುವಸ್ತು ಪುರತೋ ಜನನೀ ಸುಭಕ್ತಿಂ। ನಿತ್ಯಂ ದಿಶಂತಿ ನಿಮಿಷೇಶ್ವರಿ ಸುಪ್ರಭಾತಂ॥10॥ ತ್ವತ್ಪೂತ ನಾಮ ರಸಪಾನ ಧುರಂಧರಾಣಾಂ। ಚೇತಃ ಪ್ರಸಾದನಕೃತೇ ಮಧುದಂಡ ವೃಕ್ಷಾಃ॥ ಕೇದಾರ ಮಧ್ಯಭುವಿ ಸಂತ್ಯಭಿತೋ ಮಹೇಶಿ। ಮಾತಸ್ತವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥11॥ ವಾರಣಾಸೀ ಪುರಪತಿರ್ವರಲಿಂಗರೂಪಃ। ವಿಶ್ವೇಶ್ವರೋ ಲಸತಿ ತೇ ಪುರತೋ ಮಹೇಶಃ॥ ಸಹ್ಯಾದ್ರಿಜಾಪರ ತಟಸ್ಥ ಸುಮಂದಿರೇಽತ್ರ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥12॥ ಅಖ್ಯಾಪಯತ್ಯ ವಿರತಂ ನರಸಿಂಹದೇವಃ। ಗುಂಜಾಂ ನಿಧಾಯ ತು ಕರೇ ಶುಭತೀರ್ಥಮೇತತ್॥ ಕಾಶೀ ಪುರಾದಧಿಕ ಮಿತ್ಯನಿಮೇಷಮಾತಃ। ಶ್ರೀಚಕ್ರಗೇಹ ನಿಮಿಷಾಂಬ ತವ ಸುಪ್ರಭಾತಂ॥13॥ ಶೇಷಾದ್ರಿ ವಾಸನರಿತೋ ವರ ವೆಂಕಟೇಶಃ। ತ್ವತ್ಪಾದಸೇವನಧಿಯಾ ಪುರತಸ್ತವಾದ್ಯ॥ ಸಂರಾಜತೇ ಕರಿಗಿರೌ ಶುಭಮಂದಿರೇ ಚ। ಮಾತಸ್ತವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥14॥ ದುರ್ಗೇಸ್ಮೃತಾಹರಸಿ ಭೀತಿಮಶೇಷ ಜಂತೋಃ। ಸ್ವಸ್ಥೈಸ್ಮೃತಾ ಮತಿಮತೀವ ಶುಭಾಂ ದದಾಸಿ। ದಾರಿದ್ರ್ಯ ದುಃಖ ಭಯಹಾರಿಣಿ ಕಾ ತ್ವದನ್ಯಾ। ಮಾತಸ್ತ ವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥15॥ ಬಾಹುದ್ವಯಾದಥ ಪುರಾ ಕಮಲಾಸನಸ್ಯ। ಜಾತೌ ಪುಮಾಂಶ್ಚ ಸುಮನಾ ಲಲನಾ ಸುಶೀಲಾ। ತತ್ಪೌಂಡರೀಕ ಮುಖರಕ್ಷಣ ಹೇತುಭೂತಃ। ಯೋ ಭೂಚ್ಚ ಮುಕ್ತ ಕಮನಿಶ್ಯವಚಿತ್ತ ಜಾತಃ॥16॥ ತಸ್ಮೈ

ಮಹಾರ್ಹಗುಣಶೀಲ ವಿಭೂಷಿತಾಯ। ಭಕ್ತಾಗ್ರಗಾಯ ತದಪೇಕ್ಷಿತ ಸಾಹ್ಯದಾತ್ರಿ॥ ಭೀಮೇರಿಭೀಕರಿ ಭೈರವನಾದ ಘೋರೇ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥17॥ ರಕ್ಷ ಕುಲಂ ಪ್ರತಿನಿಮೇಷ ವಿಭಿನ್ನರೂಪಂ। ಹತ್ಯಾಯುಧೈಃ ಪ್ರತಿನಿಮೇಷ ಮಹೋ ಮಹೇತಿ। ತ್ವನ್ನಾಮ ಸಾರ್ಥಕಕರೀ ಭವತೀ ಬಭೂವ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥18॥ ರಾಕಾ ಶಶಾಂಕ ನಿಭಸುಂದರವಕ್ತ್ರ ಶೋಭೇ। ರಾಜಾಧಿರಾಜವಿನುತೇ ರಜನೀಚರಘ್ನೇ॥ ಶ್ರೀಚಕ್ರ ರಾಜ ಸುವಿಲಾಸಿತ ದಿವ್ಯಗೇಹೇ (ಕಾಯೇ)। ಮಾತಸ್ತ ವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥19॥ ವರ್ಣೈಶ್ಚತುರ್ಭಿರಪಿ ಭೂಸುರ ಭೂಭುಜಾರ್ಯ। ಮುಖೈರ್ನಿಷೇವಿತ ಪದಾಂಬುಜ ಶೋಭಮಾನೇ। ಧರ್ಮಾದಿಜೀವಿತ ಚತುಷ್ಟಯ ಸಿದ್ಧಿದಾತ್ರಿ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥20॥ ವೇದತ್ರಯ್ಯೈಃ ಕಥಿತ ಮಂಗಳನಾಮಕಾಂತೇ। ಸಾಮ್ನಾ ಸುಗೀತ ಗುಣಗುಂಭಿತ ದಿವ್ಯರೂಪೇ॥ ನೇತ್ರತ್ರಯ್ಯೈಸ್ತ್ರಿವಿಧ ತಾಪ ವಿನಾಶ ಶೀಲೇ। ಶ್ರೀಚಕ್ರರಾಜ ನಿಲಯೇ ತವ ಪ್ರಭಾತಂ॥21॥ ಸದ್ರತ್ನ ಹೇಮ ಕಟಕದ್ವಯ ಶೋಭಿತಾಂಘ್ರೇ। ಮಾಣಿಕ್ಯ ಶೋಭಿರಶನಾದೃತ ಮಧ್ಯಭಾಗೇ। ಹೀರಾದಿ ರತ್ನ ಸುವಿರಾಜಿತ ಹಾರಕಂಠೇ। ಮಾತಸ್ತು ವಾಸ್ತು ನಿಮಿಷೇಶ್ವರಿ ಸುಪ್ರಭಾತಂ॥22॥ ಕಸ್ತೂರಿ ಕುಂಕುಮ ವಿಲಾಸಿತ ಫಾಲದೇಶೇ। ನೀಲೋಪಲೇನ ಕಮನೀಯ ಕಿರೀಟಶೀರ್ಷೆ। ಕಾರುಣ್ಯಪೂರ್ಣಲಸಿತೇ ಕುಚಕುಂಭಕಾಂತೇ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥23॥ ಚೀನಾಂಬರಾಂಚಿತ ಸುಚಾರು ಶರೀರ ಶೋಭೇ। ಚಂದ್ರಾರ್ಧಶೇಖರ ಕರಾರ್ಚಿತ ಕಮ್ರಕಾಯೇ। ಚಂದ್ರಾಸ್ಯತೋಷಿತ ಸುಭಕ್ತ ಚಕೋರ ಚಕ್ರೇ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥24॥ ಆಧ್ಯಾತ್ಮಿಕಾದಿ ತಪನತ್ರಯ ತಪ್ತಲೋಕ। ತಾಪಂ ವಿನಾಶಯಿತು ಮಂಬ ತವೈಕ ಹಸ್ತೇ। ಧತ್ಸೇತ್ರಿಶೂಲ ಮತಿತೀಕ್ಷ್ಣ ಮನಂತರೂಪೇ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥25॥ ತ್ವದ್ಧಸ್ತಮಧ್ಯ ಲಸಿತೋ ಡಮರುಸ್ಸುಘೋಷೈಃ। ಧರ್ಮಾಯ ತೇ ಜನನಮದ್ಯ ವೃಥಾ ಚ ಮಾಭೂತ್। ಏವಂ ಸಚೇತಯತಿ ಪಾದರತಂ ಜನಂ ಭೋಃ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥26॥ ಸತ್ಯತವಾಂಘ್ರಿ ಜಲಜಾಶ್ರೀತ ಭಕ್ತವರ್ಗಃ। ವಾಂಛಾನುಕೂಲ ಮಖಿಲಂ ಲಭತೇ ಚ ನೂನಂ॥ ನಾಸ್ತ್ಯೇವ ಸಾಧ್ವಸಲವೋಪಿ ಮಹೇಶಿ ತಸ್ಯ। ಮಾತಸ್ತೆ ವಾಸ್ತು ನಿಮಿಶೇಶ್ವರಿ ಸುಪ್ರಭಾತಂ॥27॥ ಪಾದೋ ದುರಧ್ವನಿ ಚ ಸಂಕುಚಿತಸ್ತವ ಸ್ಯಾತ್। ಅಲಂಬತಾಂ ಸಪದಿ ಧರ್ಮ ಪಥಂ ತವಾಂಘ್ರಿಃ॥ ಪಾದದ್ವಯಂ ದಿಶತಿ ನೀತಿಮಿಮಾಂ ಜನಾನಾಂ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥28॥ ತ್ವಂ ಶಾಂಭವೀ ಭವಶಿ ಶೂಲಕರಾ ನಿಮೇಷ। ಮಾತಃ! ಕರಾಬ್ಜ ಲಸಿತಾಬ್ಜ ಭವಾನಿ ನೂನಂ। ಏವಂ ದ್ವಿಧಾಕೃತಿಧರಾ ಪರಿಶೋಭಸೇ ತ್ವಂ। ಶ್ರೀಚಕ್ರಗೇಹ ಜಗದೀಶ್ವರಿ ಸುಪ್ರಭಾತಂ॥29॥ ಮೇಧಾಸಿ ದೇವಿ ವಿದಿತಾಖಿಲ ಶಾಸ್ತ್ರಸಾರಾ। ದುರ್ಗಾಸಿ ದುರ್ಗಭವ ಸಾಗರ ನೌರ ಸಂಗಾ॥ ಶ್ರೀಃ ಕೈಟಭಾರಿ ಹೃದಯೇ ಚ ಕೃತಾಧಿವಾಸಾ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥30॥ ಆತ್ಮಾನ್ವವಾಯ ಪರಿರಕ್ಷಣ ದೀಕ್ಷಿತಾಂ ತ್ವಾಂ। ತೇ ಕ್ಷತ್ರಿಯಾ ಅನುದಿನಂ ನನು ಸೋಮವಂಶ್ಯಾಃ। ಆರ್ಯಾಸ್ತು ಭಕ್ತಿ ಭರಿತಾಃ ನಿತರಾಂ ಭಜಂತೇ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥31॥ ದಿವ್ಯಾಂ ತ್ವದೀಯ ಕರುಣಾಕಲಿತಾಂ ಹಿ ದೃಷ್ಟಿ। ವೃಷ್ಟಿಂ ಭವಾನಿ! ಭವ ದಾವ ನಿತಾಂತ ತಪ್ತಃ॥ ವಾಂಛಾಮಿ ನಿತ್ಯಮಖಿಲೇಶ್ವರಿ ದೇವಮಾತಃ। ಶ್ರೀಚಕ್ರಗೇಹ ನಿಮಿಷಾಂಬ ತವ ಪ್ರಭಾತಂ॥32॥ ಮಾತರ್ಮಹೇಶ್ವರಿ ಮನೋ ಮಧುಲೋಲುಪೋಮೇ। ತ್ವತ್ಪಾದ ಪದ್ಮ ಮಕರಂದ ರಸಾಭಿಲಾಷೀ। ತ್ವದ್ವಕ್ತ್ರ ಚಂದ್ರಕಿರಣಾಮೃತ ಪಾನಸಕ್ತಃ। ನಿತ್ಯಂ ಹಿ ಲೋಚನ ಚಕೋರ ಯುಗೋ ಮದೀಯಃ॥33॥ ಗೀರ್ದೇವತೇತಿ ಗರುಡಧ್ವಜ ಭಾಮಿನೀತಿ। ಶಾಕಂಭರೀತಿ ಶಶಿಶೇಖರ ವಲ್ಲಭೇತಿ। ನಿತ್ಯಂ ರಟನ್ ತವ ಸುನಾಮ ನಿಮೇಷಮಾತಃ। ಸತ್ಯಂ ಹಿ ನೇತು ಮಥ ಕಾಲಮ ಹಂತು ಕಾಂಕ್ಷೇ॥34॥ ನಿಮೇಷಾಂಬ ಮಹಾದೇವಿ ಚಾರು ಚಂದ್ರ ಕಲಾಧರೇ॥ ತ್ರಿಲೋಕ ವಂದಿತೇ ಶಾಂತೇ। ತ್ರಂಬಕೇ ಮಂಗಳಂ ಕುರು ಮಂಗಳಂ ವೇದವೇದ್ಯಾಯೈ। ಮಂಗಳಾಂಗ್ಯೈ ಚ ಮಂಗಳಂ॥ ಮಂಗಳಂ ವಿಶ್ವವಂದ್ಯಾಯೈ। ಮಂಗಳಂ ಶುಭಮಂಗಳಂ॥35॥

ಪೂಜೆ ಮಾಡುವೆವು ನಿಮಿಷೇಶ್ವರಿ **ರಾಗ: ಆನಂದಭೈರವಿ**

ಪೂಜೆ ಮಾಡುವೆವು ನಿಮಿಷೇಶ್ವರಿ ನಿನ್ನ॥ಪ॥ ಜರತಾರಿ ಸೀರೆಉಟ್ಟು ಶೃಂಗಾರವಾಗಿ। ಕಂಗೊಳಿಪ ನಿನಗೆ ಸಂಗೀತವಾ

ಪಾಡಿ। ಸಾಲು ದೀಪವ ಹಚ್ಚಿ।1।। ನಷ್ಟ ಜೀವನವೆ ಶ್ರೇಷ್ಠ ಎಂದು ನಂಬಿಹೆವು...। ದುಷ್ಟರಾಗಿಹ ಎಮ್ಮ। ಭ್ರಷ್ಟ ನಡತೆ ನೀಗೆ।।2।। ಎಷ್ಟು ವರ್ಣಿಸಲಿ ಜ್ಯೇಷ್ಠಳೆ ನಿನ್ನ ಪುಷ್ಟಿ ಮಾರ್ಗದಲಿ। ಅಂತರ್‌ಮುಖಿಯಾಗಿ ಸಂತುಷ್ಟಿ ಗೊಳಿಸೆನ್ನ।।3।। ಇಷ್ಟದಿಂದಲಿ ಬಂದು ನಮ್ಮ ಕೋರಿಕೆಯನ್ನೆಲ್ಲಾ....। ಈಡೇರಿಸು ತಾಯೆ ಕರವನು ಮುಗಿವೆವು।।4।।

ಶ್ರೀ ನಿಮಿಷಾಂಬಾ ದೇವಿಯೆ **ರಾಗ: ಜುಂಜೋಟಿ**

ಶ್ರೀ ನಿಮಿಷಾಂಬಾ ದೇವಿಯೆ। ಕೋಮಲ ಪೀಠಕೆ ಪ್ರೇಮದಿಂ ಕರೆಯುವೆ।।ಪ।। ತಾಯೇ ನಂಬಿಹೆ ನಿನ್ನ ನಿಮಿಷೇಶ್ವರಿಯೇ। ನಾದಮಯೀ ಶ್ರೀ ಚಕ್ರಧಾರಿಣಿ। ನಿಮಿಷ ನಿಮಿಷ ನೆನೆವೆನು ನಿನ್ನ। ಯೋಗೇಶ್ವರಿಯೇ। ಸಲಹಲು ಎಮ್ಮನು ಬಾರೆ।।1।। ನೀರೇ ನಗೆಮೊಗದರಸಿ ನಿಗಮಗೋಚರೆ। ನಾರೀ ಶಿರೋಮಣಿ ನಿತ್ಯೋತ್ಸವೆ। ನವರಾತ್ರಿ ನವೋತ್ಸವದಿ ನವರೂಪ ಧರಿಸಿ। ನಿತ್ಯನವೀನಳಾದ ಪರಮ ಪಾವನಿಯೇ ಬಾರೆ।।2।। ಅಂಬಾ ದುಷ್ಟರ ಶಿಕ್ಷಿಸಿ ದುರ್ಗೆಯಾಗಿ। ಶಿಷ್ಟರ ರಕ್ಷಿಸಿ ಮಾತೆಯಾಗಿ। ಭವಬಂಧ ಬಿಡಿಸಿ ಭಕುತಿಯ ಬೆಳೆಸಿ। ತಮವನು ತೊಲಗಿಸಿ ಭ್ರಮೆಯನು ಬಿಡಿಸಲು ಬಾರೆ।।3।।

"ಶ್ರೀ ನಿಮಿಷಾಂಬಾ ನವಾವರಣ" (12 ಕೃತಿಗಳು)

ನಂಬಿಹೆ ನಿನ್ನ ನಿಮಿಷಾಂಬಿಕೆ (ಧ್ಯಾನಕೃತಿ) **ರಾಗ: ಲಲಿತ-ಆದಿತಾಳ**

ನಂಬಿಹೆ ನಿನ್ನ ನಿಮಿಷಾಂಬಿಕೆ। ನಾದಮಯಿ ನಿಗಮಗೋಚರೆ।।ಪ।। ಕಷ್ಟಗಳ ಹರಿಸಿ ಕೈ ಹಿಡಿದು ಕಾಪಾಡು ಕರುಣಾಮಯಿ। ಸೌಭಾಗ್ಯದಾಯಿನಿ ಸರ್ವಮಂಗಳೆ ಸಲಹೆಮ್ಮನು ತಾಯೆ ।।1।। ನೆಮ್ಮದಿಯನ್ನಿತ್ತು ನವಿರಾದ ಭಾವನೆ ಸುರಿಸಿ। ನಿತ್ಯನವೀನಳಾಗಿ ನವ್ಯ ಗೀತೆಗಳ ನುಡಿಸಿ। ನವರಾತ್ರಿ ನವೋತ್ಸವದಿ ನವರೂಪ ಧರಿಸಿ। ಶ್ರೀ ಚಕ್ರಧಾರಿಣಿ ಧರಣಿ ನಗೆಮೊಗದ ಅರಸಿ।।2।।

ಪರಮ ಪಾವನಿ ನಿಮಿಷೇಶ್ವರಿಯೆ (ಪ್ರಥಮಾವರಣ ಕೃತಿ) **ರಾಗ: ದುರ್ಗ-ಆದಿತಾಳ**

ಪರಮ ಪಾವನಿ ನಿಮಿಷೇಶ್ವರಿಯೆ ಪವಾಡವನು ನೀ ಪಾಡಿಸು। ಪಾಡ್ಯದ ದಿನ ಪ್ರಾರ್ಥಿಪೆನಮ್ಮ ಪಾರ್ವತಿ ದೇವಿಯೆ ಪಾಲಿಸು।।ಪ।। ಪನ್ನಗಾಭರಣೆ ಪುಣ್ಯರೂಪಿಣೆ ಪರದೇವತೆ ಪರಿಪಾಲಿಸು। ಪ್ರಸನ್ನವದನೆ ಪ್ರಸಾದವನಿತ್ತು ಪೂಜಿಪ ಪ್ರಜೆಗಳ ಪಾಲಿಸು।।1।। ಪಾಪಹರಿಸಿ ಪುಣ್ಯಫಲ ನೀಡೆಂದು ಪದವ ಪಾಡುವ ಪಾಮರರ। ಫಲಪುಷ್ಪ ಅರ್ಪಿಸಿ ಪಾದಕ್ಕೆರಗುವರ ಪಾಲಿಸು ಪಾಲಿಸು ಪುರಜನರ।।2।। ದುಷ್ಟರ ಶಿಕ್ಷಿಸಲು ದುರ್ಗೆಯಾದೆ। ದುಃಖವದೂಡಿ ದಯಾಮಯಿಯಾದೆ। ಶಿಷ್ಟರ ರಕ್ಷಿಸಲು ಮಾತೆಯಾದೆ। ವಿಶ್ವದಿ ವಿಭಿನ್ನ ಅವತಾರೆಯಾದೆ।।3।। ಕರುನಾಡ ಜನರಿಗೆ ಕರುಣೆಯ ತೋರಿ ಕಾವೇರಿತೀರ ನಿವಾಸಿಯಾದೆ। ಪ್ರಜ್ಞೆಯನಿತ್ತು ಪ್ರಶಂಸೆಗೆ ಪಾತ್ರಳಾಗಿ ಪವಾಡಕಾರಿಣೆ ನೀನಾದೆ।।4।।

ಭಕುತಿಯಲಿ ಭಜಿಸುತಿಹೆ (ದ್ವಿತೀಯಾವರಣ ಕೃತಿ) **ರಾಗ: ಸಿಂಧುಭೈರವಿ-ಆದಿತಾಳ**

ಭಕುತಿಯಲಿ ಭಜಿಸುತಿಹೆ ಭಾರತಿ ಭಾರ್ಗವಿ ಭಂಡಾಸುರ ಭಂಜನಿ। ಭಗಮಾಲಿನಿ ನಿಮಿಷೇಶ್ವರಿ ಬೇಡುವೆನು ಬಿದಿಗೆಯಂದು ಭಾಗ್ಯದಾಯಿನಿ।।ಪ।। ಭವ ಬಂಧಗಳ ಬಿಡಿಸು ಭರದಿ। ಬೆಂಗಾಯ್ವ ಭಾಗ್ಯಲಕ್ಷ್ಮಿಯೇ। ಭಯ ಬಿಡಿಸು ಭಕ್ತೆಗೆ ಬೇಡಿದ ವರವೀವ। ಭುವನೇಶ್ವರಿಯೆ।।ಅ.ಪ.।। ಭಕ್ತಿ ಭಾವದಿ ಬಿಡದೆ ಬೆನ್ನತ್ತಿ। ಬಾಗಿಲ ಬಳಿ ಬಂದಿಹೆ ದಾಸಳು। ಭವ್ಯ ಭವನದಲ್ಲಿ ಭಾವನೆಗಳನು। ಬೇಸರಿಸದೆ ಬೇಗ ಭರಿಸು। ಭಕ್ತಿಬೀಜವ ಬಿತ್ತು ಭಜಿಪಗೆ। ಭಕ್ತಿ ಭಾವವ ಬಲಪಡಿಸು ಭಗವತಿ ಬಣ್ಣಿಪ ಬಯಕೆಯ ನೀಡೆ।।1।। ಭ್ರಮರದಂತೆ ಬಡಬಡಿಸಿ ಬಣ್ಣವ ಭ್ರಮಿಸುವೆ। ಭ್ರಮೆಯ ಬರಿದು ಮಾಡಿಸು ಬದುಕಲರಿಯೆ। ಬವಣೆ ಭಾರದಲ್ಲಿಹ ಬಹುಜನರ ಬಯಕೆಯನು। ಭಾವೈಕ್ಯಗೊಳಿಸೆ ಭಕುತರಾ ಬಂಧುವೆಂಬ ಬಿರುದಾಂಕಿತೆಯೇ। ಭೈರವಿ ಶ್ರೀ ಬೀಜಾಕ್ಷರಿಯೆ।।2।।

ತಪ್ಪುಗಳಾ ಒಪ್ಪಿಸುವೆ ತನುಮನವ (ತೃತೀಯಾವರಣ ಕೃತಿ) ರಾಗ: ವಲಚಿ-ಏಕತಾಳ

ತಪ್ಪುಗಳಾ ಒಪ್ಪಿಸುವೆ ತನು। ಮನವ ಅರ್ಪಿಸುವೆ ನಿಮಿಷೇಶ್ವರಿ। ತಮವನು ತೊಲಗಿಸು, ತದಿಗೆಯಂದು। ತ್ರಿಕೋಣಾಕಾರ ಮಧ್ಯನಿಲಯೆ॥ಪ॥ ತ್ರಿಪುರ ಸುಂದರಿ ತ್ರಿಭುವನ ಜನನಿ। ತ್ರಿಪುರ ಸಂಹಾರನ ರಾಣಿ। ತ್ರಿಪುರಾ ಶ್ರೀ ಚಕ್ರೇಶ್ವರಿ। ಶ್ರೀ ಮಹಾತ್ರಿಪುರ ಸುಂದರಿ॥1॥ ತ್ರಿಭುವನ ಸಾಮ್ರಾಜ್ಞಿ ತ್ರಿಪುರ ಮಾಲಿನಿ। ತತ್ವಮಸಿ ಸ್ವರೂಪಿಣಿ। ತ್ರಿಶೂಲ ತಿವಿವುದು ತ್ರಿಭುವನ ಬವಣೆಯ। ತಾಪತ್ರಯ ಹಾರಿಣೀ॥2॥ ತ್ರಿಶತ ತ್ರಿದಶ ತ್ರಿಕೋಟಿ ದೇವತೆ। ದರ್ಶನ ಫಲದಾಯಿನಿ। ತ್ರಿಕಾಲ ಸ್ಮರಣೆಲಿ ತೊಡಗಿಸೆನ್ನನು। ತ್ರಿಪುರ ಸಿದ್ಧಿದಾಯಿನಿ॥3॥ ತ್ರಿಪುರೇಶ್ವರಿ ತವಚರಣ ಸೇವೆಗೆ। ತವಕಿಸುತಿಹೆ ತ್ರಿಪುರಾಂಬಿಕೆ। ತ್ರಿರೂಪ ಧಾರಿಣಿ ತಲೆಬಾಗಿ ನಮಿಪೆ। ತ್ರಿಕೋಣಾಂತರ ದೀಪಿಣಿ। ತತ್ವ ಚಕ್ರೇಶ್ವರಿ, ತ್ರೈಲೋಕ್ಯ ಮೋಹನ ಚಕ್ರಿಣಿ॥4॥

ಚತುರ್ವೇದ ಸ್ವರೂಪಿಣಿ (ಚತುರ್ಥಾವರಣ ಕೃತಿ) ರಾಗ: ಕಾಪಿ-ಆದಿತಾಳ

ಚತುರ್ವೇದ ಸ್ವರೂಪಿಣಿ ಚರಣಪದ್ಮವ। ಚಿತ್ತದೊಳಿರಿಸು ಪುಸ್ತಕಪಾಣಿ। ಚತುರ್ವಿಧ ಫಲನೀಡೆ ಚೆಲುವೆ ಚೇತನೆ। ಚೌತಿಯಂದು ಚಕ್ರಾಕಾರಿಣಿ॥ಪ॥ ಚಿಂತಿಪೆ ಸರಸ್ವತಿ ಶ್ರೀ ಚಕ್ರದರಸಿ। ಚಾರುವಾಮಾಂಘ್ರಿ ಸುಶೋಭಿತೆ। ಚೈತ್ಯಾಕ್ಷಿ ಚಂಡಿಕೆ ಚಾಮುಂಡೇಶ್ವರಿ। ಚಂದ್ರಮುಖಿ ಕಮಲಾವಾಸಿತೆ॥1॥ ಶ್ರೀವಾಣಿ ಕಲ್ಯಾಣಿ ಪನ್ನಗವೇಣಿ। ವೇದಸ್ವರೂಪಿಣಿ ಚಿದ್ರೂಪಿಣಿ। ವೀಣಾಪಾಣಿ ಚತುರ್ಮುಖನರಾಣಿ। ವರವಿತ್ತು ಸಲಹು ವಿದ್ಯಾಲೋಲೆ॥2॥ ಚೈತನ್ಯರೂಪಿಣಿ ಚಿತ್ತಾಕರ್ಷಿಣಿ। ಚರಾಚರಶಕ್ತಿ ರೂಪಿಣಿ। ಚರಾಚರಕಲ್ಪಿನಿ ಚತುರ್ಥಾವರಣಿ। ಚಿಂತಾಮಣಿ ಮಂದಿರವಾಸಿನಿ॥3॥ ಕೋಮಲಾಂಗಿನೀ ಢಮರುಗಧಾರಿಣಿ। ಚರಾಚರ ಜನನಿ ಹಂಸವಾಹಿನಿ। ಚಕ್ರಸ್ಥಿತೆ ಬ್ರಹ್ಮನ ಸಂಪ್ರೀತೆ। ಚರಣಕ್ಕೆ ನಮಿಪೆ ನಿಮಿಷಾಂಬಿಕೆ॥4॥

ಪಂಚಭೂತಾತ್ಮಿಕೆ ಪಂಚಕೃತ್ಯಾತ್ಮಿಕೆ (ಪಂಚಮಾವರಣ-ಕೃತಿ) ರಾಗ: ಚಕ್ರವಾಕ-ಆದಿತಾಳ

ಪಂಚಭೂತಾತ್ಮಿಕೆ ಪಂಚಕೃತ್ಯಾತ್ಮಿಕೆ। ಪೂಜಿಪೆ ನಿನ್ನ ಪುರಾಣ ಸಂವೇದಿನಿ। ಪರಮಭಕ್ತರಾ ಪೊರೆಯೆ ಪಂಚಮಿಯಂದು। ಪರಿಪೂರ್ಣ ಚಕ್ರಸ್ವಾಮಿನಿ॥ಪ॥ ಪ್ರಕಟಯೋಗಿನೀ ಪರಶಿವನ ಅರ್ಧಾಂಗಿ। ಪರಾಶಕ್ತಿ ಪಂಕಜಾಸನಿ। ಪ್ರಕಾಶಕಾರಿಣೀ ಪರಮಶಿವ ಕಾಮಿನಿ। ಸುವಾಸಿನಿ ಪದ್ಮವಾಸಿನಿ। ಪ್ರಣವನಾದ ಸಪ್ತಸ್ವರ ಸಂಚಾರಿಣಿ। ಸುಂದರವದನಳೆ ನಿತ್ಯಕಲ್ಯಾಣಿ। ಪ್ರಣವಾಕಾರಿಣಿ ಪುಣ್ಯ ಫಲ ನೀಡೆ। ಪೃಥ್ವಿ ಪಂಚಭೂತ ಸ್ವರೂಪಿಣಿ॥1॥ ಮಣಿಕರ್ಣಿಕಾ ಘಟ್ಟದಿ ಮಣಿಮಯ ಮಕುಟವಿಟ್ಟು। ಗೆಜ್ಜೆಸೊಂಟಪಟ್ಟಿ ಧರಿಸಿ ನವರತ್ನದ ಹಾರತೊಟ್ಟು। ಕರದಲ್ಲಿ ಕಂಕಣ ಕಾಲುಂಗುರ ನಾದದಿ। ಕರ್ಣಕುಂಡಲವಿಟ್ಟು। ಮೂಗುತಿ ಧರಿಸಿ ಮುಗುಳ್ನಗುತ। ಹಣೆಯಲ್ಲಿ ಕಸ್ತೂರಿ ತಿಲಕವಿಟ್ಟು॥2॥ ನೀಲಮೇಘಕೇಶಳೆ ಸಂಪಿಗೆ ನಾಸಾಪುಳೆ। ಕಮಲಾಕ್ಷಿಯೆ ನೀಲವರ್ಣಳೆ। ದಾಳಿಂಬದಂತ ಪ್ರಭಾರಂಜಿತಳೆ। ವಂಕಿ ನಾಗಮುರಿ ಧರಿಸಿಹಳೆ। ಪಂಚಬಾಣಾರಿ ಪ್ರೇಮ ಪ್ರಿಯಸಖಿ ಪವಡಿಸು। ಪದ್ಮವ ಪಿಡಿದಿಹ ಪದ್ಮಾಕ್ಷಿಯೆ। ಶೃತಿಪಾಡಿ ಮತಿಬೇಡಿ ಪಾದಪದ್ಮಕ್ಕೆರಗುವೆ। ಪಾಲಿಸು ಶ್ರೀ ನಿಮಿಷೇಶ್ವರಿಯೆ॥3॥

ಶ್ರೀಚಕ್ರ ಸ್ವರೂಪಿಣಿ ಶ್ರೀಕಂಠಪ್ರಿಯಳೆ(ಷಷ್ಠ್ಯಾವರಣ ಕೃತಿ) ರಾಗ: ಚಾರುಕೇಶಿ-ಆದಿತಾಳ

ಶ್ರೀಚಕ್ರ ಸ್ವರೂಪಿಣಿ ಶ್ರೀಕಂಠಪ್ರಿಯಳೆ। ಶರಣರ ಕಾಯ್ವ ಶರಣಾಗತೆಯೆ। ಶ್ರೀಚಕ್ರ ಬೀಜಾಕ್ಷರಿ ಶ್ರೀ ಪಾದಕ್ಕೆರಗುವೆ। ಷಷ್ಠಿಯಂದು ಶಕ್ತಿದೇವತೆಯೆ॥ಪ॥ ಶಿವಕಾಮೇಶ್ವರಿ ಶಂಖ ಕಂಠೇಶ್ವರಿ। ಶ್ರೀಕರಿ ಶಿವಶಂಕ।ರಿ ಶಶಿ ಶೇಖರಿ ಶಾಕಾಂಬರಿ। ಶಾತೋದರಿ ಶುಭಕರಿ ಶಾಂಭವಿ। ಶುಂಭನಿಶುಂಭಾಸುರ ಸಂಹಾರಿಣಿ। ಶಿವೆ ಶೋಣಾಂಬುಧಾರಿಣಿ। ಶತಶತಮಾನದ ಶಕ್ತಿ ಸಂಚಾರಿಣಿ। ಶೂಲಿನಿ ಶತರೂಪಿಣಿ॥1॥ ಶೃಂಗೇರಿ ಗುರುವರರ ಅಮೃತಹಸ್ತದಿ ಸ್ಥಾಪಿಣಿ। ಶೃಂಗಾರ ಶೀಲೆ। ಶಬ್ದಾತ್ಮಿಕೆ ಶರ್ವಾಣಿ ಶಾಶ್ವತಿ। ಶಿವದೂತಿ ಶೈಲಸುತೆಲೋಲೆ। ಶ್ರೀರಂಗ ಪಟ್ಟಣಕ್ಕೆ ಶ್ರೀರಕ್ಷೆಯಾಗಿ। ಶೋಭಿಸುವೆ ಶಿವಕಾಮಿನಿ। ಶ್ರದ್ಧೆಯಿಂದ ಶಿರಬಾಗಿ ಯಶವನ್ನು ಕೋರುವೆ। ನಿಮಿಷಾಂಬಿಕೆ ನಿಮಿಷಾಂಬಿಕೆ॥2॥

ಸರ್ವಾರ್ಥಸಾಧಿನಿ ಸರ್ವಾಭರಣ (ಸಪ್ತಮಾವರಣಕೃತಿ) ರಾಗ: ಗೌರಿಮನೋಹರಿ-ಆದಿತಾಳ

ಸರ್ವಾರ್ಥಸಾಧಿನಿ ಸರ್ವಾಭರಣ ಭೂಷಿಣಿ। ಸರ್ವರಕ್ಷಾಕರ ಚಕ್ರೇಶ್ವರೀ। ಸಂಗೀತ ರಸಿಕೆ ಸುಪರ್ಣೆಯ ಪಾಡುವೆನು। ಸಪ್ತಮಿಯಂದು ನಿಮಿಷೇಶ್ವರಿ॥ಪ॥ ಸಾಹಿತ್ಯ ಸಂಗೀತ ಮೂಲ ರೂಪಿಣಿ। ಸರ್ವವಿಘ್ನ ನಿವಾರಿಣಿ ಸರ್ವಾಕರ್ಷಿಣಿ। ಸರ್ವಾಂಗ ಸುಂದರಿ ಸರ್ವೋನ್ಮಾದೆ। ಸುಕವಿತ್ವ ಪ್ರದಾಯಿಣಿ ಸತ್ಯರೂಪಿಣಿ॥1॥ ಸರ್ವಮೃತ್ಯು ಪ್ರಶಮನಿ ಸರ್ವಶಾಪರಿಪೂರಕ। ಚಕ್ರಸ್ವಾಮಿನಿ ಸಿಂಹವಾಹಿನಿ। ಸರ್ವಪ್ರಿಯಕರಿ ಸರ್ವಸಿದ್ಧಿ ಪ್ರದಾಯಿನಿ। ಸ್ತೋತ್ರಪ್ರಿಯೆ ಸರ್ವ ರೋಗ ವಿಮೋಚಿನಿ॥2॥ ಸಂಗಮಸ್ಥಾನೇಶ್ವರಿ ಸೋಮವಂಶಜನೇಶ್ವರಿ। ಸರ್ವರಕ್ಷಕಿ ಸಿದ್ಧೇಶ್ವರಿ। ಸರ್ವಾನಂದಮಯಿ ಸರ್ವಸೌಭಾಗ್ಯಳೆ। ಸುರರಿಪು ಮಹಿಷಾಸುರ ಸೂದನಿ॥3॥ ಸಕಲ ಇಷ್ಟಾರ್ಥಸಾಧಿನಿ ಸಕಲೈಶ್ವರ್ಯದಾಯಿನಿ। ಸೂಕ್ಷ್ಮರೂಪಿಣಿ ಸಂಕ್ಷೋಭಣ ಚಕ್ರಿಣಿ। ಸಕಲ ದೇವಾತಾಸೇವಿತೆ ಸಕಲರ ಸಲಹು। ಸರ್ವಜ್ಞೆ ಸಂಗೀತ ಸಾಮ್ರಾಜ್ಯ ಸಂಸ್ಥಾಪಿಣಿ॥4॥

ಅರಿಷಡ್ವರ್ಗ ತರಿದು ಅಜ್ಞಾನ (ಅಷ್ಟಮಾವರಣ ಕೃತಿ) ರಾಗ: ಅಮೃತವರ್ಷಿಣಿ-ಏಕತಾಳ

ಅರಿಷಡ್ವರ್ಗ ತರಿದು। ಅಜ್ಞಾನ ಹತ್ತಿಕ್ಕಿ। ಅಭಯ ಹಸ್ತವ ನೀಡೆ। ಶ್ರೀ ನಿಮಿಷಾಂಬಿಕೆ। ಅಕಳಂಕರೂಪೆ ಆಸ್ತಿಕ ಜನಪ್ರಿಯೆ। ಆದಿಪರಾಶಕ್ತಿ ಅಷ್ಟಮಿಯಂದು॥ಪ॥ ಅರ್ಥಿಯಿಂದ ಅನುದಿನ ಪ್ರಾರ್ಥಿಪೆ। ಅಷ್ಟದಳಪದ್ಮವಾಸಿನಿ। ಅರಿಶಿನ ಕುಂಕುಮ ಅರಳಿದ ಮಲ್ಲಿಗೆ। ಅರ್ಚಿಪೆ ಅತಿಶಯರೂಪಿಣಿ। ಅಮೃತವರ್ಷಿಣಿ ಅತಿಶುಭದಾಯಕಿ। ಆರತಿ ಬೆಳಗುವೆ ಆನಂದರೂಪಿಣಿ। ಅವರ್ಣೆ ಅರುಣೆ ಅನ್ನಪೂರ್ಣೆ। ಸಂಗೀತಪ್ರಿಯೆ ಅಂತರಾತ್ಮಿಕೆ॥1॥ ಅಖಿಲಾಂಡೇಶ್ವರಿ ಅಣಿಮಾದಿ। ಸಿದ್ಧೇಶ್ವರಿ ಅಸುರ ಸಂಹಾರಿಣಿ। ಅಂಬರದೀಶ್ವರಿ ಆನಂದವಲ್ಲಿ। ಎಮ್ಮನು ಹರಸೆ ಅಭಯ ಪ್ರದಾಯಿನಿ। ಅನಾಥರಕ್ಷಕಿ ಅಘಹರಣಿ। ಅಂಬಿಕೆ ಅಪೂರ್ವರೂಪಿಣಿ। ಅಕಾರಾದಿ ಅಮೋಘ ಬೀಜಾಕ್ಷರಿ। ಅವಿನಶ್ವರಿ ಅಭೇಧಿನಿ॥2॥ ಅಂತರಂಗದಿ ಮಲಗಿರುವ ಧ್ವನಿ। ಅರಳಿಸಿ ಜ್ಞಾನವ ಅನುಗ್ರಹಿಸು। ಅಂಬಭವಾನಿ ಅಕ್ಷರಸ್ಥಿತೆ। ಅದ್ವೈತಮತ ಪ್ರಕಾಶಿನಿ। ಅಭಿಷೇಕ ಪ್ರಿಯೆ ಅಷ್ಟವರ್ಣಾತ್ಮಿಕೆ। ಆತ್ಮವ ಅತಿಶುದ್ಧಿಗೊಳಿಸೆ। ಅಮರ ರಕ್ಷಕಿ ಅಭಯಂಕರಿ। ಅಂಗದಿ ಮಂಗಲ ವಿಸ್ತರಿಸೆ॥3॥

ನವರತ್ನಧಾರಿಣಿ ನಾರೀ ಶಿರೋಮಣಿ (ನವಮಾವರಣಕೃತಿ) ರಾಗ: ಪಂತುವರಾಳಿ-ಆದಿತಾಳ

ನವರತ್ನಧಾರಿಣಿ ನಾರೀ ಶಿರೋಮಣಿ। ಖಲಸಮೂಹ ಸಂಹಾರಿಣಿ। ನವರಾತ್ರಿ ನವಮಿಯಂದು ನಮಿಸುವೆ। ನಿತ್ಯರಂಜನಿ ಶ್ರೀನಿಮಿಷಾಂಬಿಕೆ॥ಪ॥ ನವರಾತ್ರಿ ನವೋದಯದಿ ನವವಿಧ ಭಕ್ತಿಯಲಿ। ನಂಬಿಹೆ ನರ್ತನ ಸುಖಿ ಮೋಕ್ಷಾಮಣಿ। ನರಕ ನೋವು ನಂದಿಹೋಗಿ ನಂದಾದೀಪವಾಗಲಿ। ನಿತ್ಯರಾಗಿಣಿ ವ್ಯಕ್ತಹಾಸಿನಿ ಮಾಯಾವಿಣಿ॥1॥ ನಿಮಿಷ ನಿಮಿಷ ನಲಿದು ನೆನೆವೆ ನಳಿನಿ ನಿನ್ನ ಸ್ತುತಿಸುತಾ। ನಿಜದ ನೆಲೆಯ ನಾನರಿಯೆ ನಾಮಸ್ಮರಣೆ ಪಠಿಸುತಾ। ನಿಶೆಯಲಿಹೆ ನೀರಜಾಕ್ಷಿ ಜ್ಞಾನ ಜ್ಯೋತಿ ಬೆಳಗು ಬಾ। ನಿತ್ಯಹರಿದ್ವರ್ಣದಿ ನೆಲಸಿ ಶಕ್ತಿ ತೋರುಬಾ॥2॥ ನಿಮಿಷಮಾತ್ರದಿ ಬಂದು ನಿಲ್ಲುವೆ ಮಹೇಶ್ವರಿ। ನೊಂದಜನಕೆ ನಿಖರನಂಬಿಕೆ ನಯನ ಮನೋಹರಿ। ನವರತ್ನದ ಪೀಠದಡಿ ನವರಸಗಳ ಅಧಿಪತಿನಿ। ನಿತ್ಯೋತ್ಸವೆ ನವೋಲ್ಲಾಸೆ ದಾಕ್ಷಾಯಿಣಿ ಮಂಗಳಾಂಗಿ॥3॥ ನೋಡುತಿರಲು ನಲಿವುದೆನ್ನ ಮನವು ಸರ್ವೇಶ್ವರಿ। ನಯನದಲ್ಲಿ ನಿನ್ನ ರೂಪ ನೆಲೆಸಿಹುದು ರಾಜೇಶ್ವರಿ। ನಿಮಿಷ ನಿಮಿಷ ನಿನ್ನ ನಾಮ ನಾಲಿಗೆಯಲಿ ನೆಲಸಲಿ। ನರನ ನಾಡಿ ಮಿಡಿತ ನಿಮಿಷ ನಿಮಿಷ ನಿನ್ನ ಸ್ತುತಿಸಲಿ॥4॥

ಮೂರುತಿ ಮನದಲಿ ಕೀರುತಿ ಕಿವಿಯಲಿ (ಭಜನೆ) ರಾಗ: ರೇವತಿ-ಆದಿತಾಳ

ಮೂರುತಿ ಮನದಲಿ ಕೀರುತಿ ಕಿವಿಯಲಿ ನಾಮಸ್ಮರಣೆಲಿ ನಿಮಿಷಾಂಬಾ। ಧವಳಾಂಬರಧರೆ ನೆನಹು ನಿಮ್ಮಲಿ ನಲಿದು ನರ್ತಿಸಲಿ ನಿಮಿಷಾಂಬಾ॥ ಚರಣ ಸೇವಿಸಿ ಮಡಿಲಲಿ ಮಲಗಿ ಮೈಮನ ಮರೆವೆ ನಿಮಿಷಾಂಬಾ। ನಿನ್ನ ಸನ್ನಿಧಾನದಿ

ದರ್ಶನಗೈಯುವೆ ನೆಮ್ಮದಿ ನೆಲಸಲಿ ನಿಮಿಷಾಂಬಾ।। ಭವಬಂಧ ಬಿಡಿಸೈ ಆಸೆಯ ಸರಿಸೈ ಮೋಕ್ಷವ ನೀಡೈ ನಿಮಿಷಾಂಬಾ। ದುರ್ಬುದ್ಧಿ ತೊರೆಸೈ ದುಸ್ಸಂಗ ಮರೆಸೈ ಸತ್ಸಂಗ ದೊರಕಿಸೆ ನಿಮಿಷಾಂಬಾ।। ಕಾವೇರಿ ಲೋಕಪಾವನಿ ಸಂಗಮಸ್ಥಿತೆ ನಿಮಿಷಾಂಬಾ। ಕಮಲಾಸನಾದಿ ಪೂಜಿತೆ ಹೃದಯ ಕಮಲವಾಸಿತೆ ನಿಮಿಷಾಂಬಾ।। ನೀಡು ಎನಗೆ ಭಕ್ತಿಯ ತೋರು ಎನಗೆ ಮುಕ್ತಿಯ। ಸೇವೆಗೈವ ಶಕ್ತಿಯಾ ಸ್ತುತಿಸುವಾ ಆಸಕ್ತಿಯಾ।। ನಾರಾಯಣಿ ನಿಮಿಷಾಂಬಾ।।

ಮಂಗಳಂ ಶ್ರೀ ನಿಮಿಷೇಶ್ವರಿ ಲಕ್ಷ್ಮೀ ಸರಸ್ವತಿ (ಮಂಗಳ) ರಾಗ: ಶಂಕರಾಭರಣ, ಆದಿತಾಳ

ಮಂಗಳಂ ಶ್ರೀ ನಿಮಿಷೇಶ್ವರಿ ಲಕ್ಷ್ಮೀ ಸರಸ್ವತಿ ಸ್ವರೂಪಿಣಿ। ಶಕ್ತಿ ಸಂಚಾರಿಣಿ ಢಮರುಗ ಧಾರಿಣಿ ಲೋಕಪಾಲಿನಿ।।ಪ।। ದಕ್ಷಿಣಗಂಗಾ ತಟವಾಸಿನಿ ಕೃಷ್ಣ ಶಿಲಾಕೃತಿ ನೀ। ದಕ್ಷಿಣ ವೈಕುಂಠೇಶ್ವರಿ ಹ್ರೀಂಕಾರಿ ಶ್ರೀಚಕ್ರದರಸಿ।। ಜಾನು-ಸುಮಂಡಲ ದೈತ್ಯನಾಶಿನಿ। ಮುಕ್ತಕಗೊಲಿದು ಮುಕ್ತಿ ಇತ್ತವಳೆ। ಬಂಜೆ ಬಾಳ ಬೆಳಗಿಸುವ ಪವಾಡ ಸದೃಶಳೆ।।1।। ಸಪ್ತಋಷಿಗಳ ತಪೋಭೂಮಿ ಈ ಪುಣ್ಯಕ್ಷೇತ್ರವೇ ನಿಮಿಷಾನಗರ। ಕಮಲಜಾನಂದೆ ಚಿದಂಬರೆ ಕಮಲಪದೆ ಶ್ರೀ ನಿಮಿಷಾಂಬಾ।। ರಂಜಿತಾ ಭರಣ ಧಾರಿಣೆ ಹೃದಯಸಾಮ್ರಾಜ್ಞಿ! ಮಂಗಳವ ನೀಡು ಶ್ರೀನಿಮಿಷಾಂಬಾ ಗೋಪಾಲ ವನಿತೆ ರಾಜಲಕ್ಷ್ಮೀಗೆ।।2।।

❖ ❖ ❖

ಶ್ರೀ ಕಮಲಾಂಬಾ ನವಾವರಣ ಕೃತಿಗಳು

ಕಮಲಾಂಬಾ ಸಂರಕ್ಷತುಮಾಂ ರಾಗ: ಆನಂದಭೈರವಿ-ಮಿಶ್ರಚಾಪುತಾಳ

ಕಮಲಾಂಬಾ ಸಂರಕ್ಷತುಮಾಂ ಹೃತ್ಕಮಲಾನಗರ ನಿವಾಸಿನಿ ।।ಪ।। ಸುಮನಸಾರಾಧಿತಾಬ್ಜ ಮುಖೀ ಸುಂದರ ಮನಃ ಪ್ರಿಯಸಖೀ ಕಮಲಜಾನಂದ ಬೋಧಸುಖೀ ಕಾಂತಾತಾರ ಪಂಜರ ಶುಕೀ ।।ಅ.ಪ.।। ತ್ರಿಪುರಾದಿ ಚಕ್ರೇಶ್ವರೀ ಅಣಿಮಾದಿ ಸಿದ್ಧೀಶ್ವರೀ ನಿತ್ಯ ಕಾಮೇಶ್ವರಿ ಕ್ಷಿತಿಪುರ ತ್ರೈಲೋಕ್ಯ ಮೋಹನ ಚಕ್ರವರ್ತಿನೀ ಪ್ರಕಟಯೋಗಿನೀ ಸುರರಿಪು ಮಹಿಷಾಸುರಾದಿ ಮರ್ದಿನೀ ನಿಗಮ ಪುರಾಣಾದಿ ಸಂವೇದಿನೀ ತ್ರಿಪುರೇಶಿ ಗುರುಗುಹ ಜನನೀ ತ್ರಿಪುರ ಭಂಜನ ರಂಜನೀ ಮಧುರಿಪು ಸಹೋದರೀ ತಲೋದರೀ ತ್ರಿಪುರಸುಂದರೀ ಮಹೇಶ್ವರೀ ।।ಚರಣ।।

ಕಮಲಾಂಬಾಂ ಭಜರೇ ರೇ ರಾಗ: ಕಲ್ಯಾಣಿ-ಆದಿತಾಳ

ಕಮಲಾಂಬಾಂ ಭಜರೇ ರೇ ಮಾನಸ ಕಲ್ಪಿತ ಮಾಯಾ ಕಾರ್ಯಂ ತ್ಯಜರೇ ।।ಪ।। ಕಮಲಾ ವಾಣೀ ಸೇವಿತ ಪಾರ್ಶ್ವಾಂ ಕಂಬುಜಯಗ್ರೀವಾಂ ನತದೇವಾಂ ಕಮಲಾಪುರ ಸದನಾಂ ಮೃದುಗದನಾಂ ಕಮನೀಯ ರದನಾಂ ಕಮಲವದನಾಂ।।ಅ.ಪ.।। ಸರ್ವಾಶಾಪರಿ ಪೂರಕ ಚಕ್ರ ಸ್ವಾಮಿನೀಂ ಪರಮಶಿವ ಕಾಮಿನೀಂ ದುರ್ವಾಸಾರ್ಚಿತ ಗುಪ್ತಯೋಗಿನೀಂ ದುಃಖಧ್ವಂಸಿನೀಂ ಹಂಸಿನೀಂ ನಿರ್ವಾಣ ನಿಜಸುಖಪ್ರದಾಯಿನೀಂ ನಿತ್ಯಕಲ್ಯಾಣೀಂ ಕಾತ್ಯಾಯಿನೀಂ ಶರ್ವಾಣೀಂ ಮಧುಪ ವಿಜಯ ವೇಣೀಂ ಸದ್ಗುರುಗುಹ ಜನನೀಂ ನಿರಂಜನೀಂ ಗರ್ವಿತ ಭಂಡಾಸುರ ಭಂಜನೀಂ ಕಾಮಾಕರ್ಷ ಣ್ಯಾದಿ ರಂಜನೀಂ ನಿರ್ವಿಶೇಷ ಚೈತನ್ಯ ರೂಪಿಣೀಂ ಉರ್ವೀತತ್ವಾದಿ ಸ್ವರೂಪಿಣೀಂ।।ಚರಣ।।

ಶ್ರೀ ಕಮಲಾಂಬಿಕಯಾ ಕಟಾಕ್ಷಿತೋಹಂ ರಾಗ: ಶಂಕರಾಭರಣ-ರೂಪಕತಾಳ

ಶ್ರೀ ಕಮಲಾಂಬಿಕಯಾ ಕಟಾಕ್ಷಿತೋಹಂ ಸಚ್ಚಿದಾನಂದ ಪರಿಪೂರ್ಣ ಬ್ರಹ್ಮಾಸ್ಮಿ ।।ಪ।। ಪಾಕ ಶಾಸನಾದಿ ಸಕಲದೇವತಾ ಸೇವಿತಯಾ ಪಂಕಜಾಸನಾದಿ ಪಂಚಕೃತ್ಯ ಕೃತ್ ಭಾವಿತಯಾ ಶೋಕಹರ ಚತುರ ಪದಯಾ ಮೂಕ ಮುಖ್ಯ ವಾಕ್ಪ್ರದಯಾ ಕೋಕನದ ವಿಜಯಪದಯಾ ಗುರುಗುಹತತ್ರೈಪದಯಾ ।।ಅ.ಪ।। ಅನಂಗ ಕುಸುಮಾದ್ಯಷ್ಟ ಶಕ್ತ್ಯಾಕಾರಯಾ ಅರುಣವರ್ಣ ಸಂಕ್ಷೋಭಣ ಚಕ್ರಾಕಾರಯಾ ಅನಂತ ಕೋಟ್ಯಂಡ ನಾಯಕ ಶಂಕರ ನಾಯಿಕಯಾ ಅಷ್ಟವರ್ಗಾತ್ಮಕ ಗುಪ್ತತರಯಾ ವರಯಾ ಅನಂಗಾದ್ಯುಪಾಸಿತಯಾ ಅಷ್ಟದಳಾಬ್ಜ ಸ್ಥಿತಯಾ ಧನುರ್ಬಾಣಧರ ಕರಯಾ ದಯಾಸುಧಾಸಾಗರಯಾ ।।ಚರಣ।।

ಕಮಲಾಂಬಿಕಾಯೈ ಕನಕಾಂಶುಕಾಯೈ **ರಾಗ: ಕಾಂಬೋಜಿ-ಅಟ್ಟತಾಳ**

ಕಮಲಾಂಬಿಕಾಯೈ ಕನಕಾಂಶುಕಾಯೈ ಕರ್ಪೂರ ವೀಟಿಕಾಯೈ ನಮಸ್ತೇ ನಮಸ್ತೇ ।।ಪ।। ಕಮಲಾ ಕಾಂತಾನುಜಾಯೈ ಕಾಮೇಶ್ವರ್ಯೈ ಅಜಾಯೈ ಹಿಮಗಿರಿ ತನುಜಾಯೈ ಹ್ರೀಂಕಾರ ಪೂಜ್ಯಾಯೈ ಕಮಲಾನಗರ ವಿಹಾರಿಣ್ಯೈ ಖಲಸಮೂಹ ಸಂಹಾರಿಣ್ಯೈ ಕಮನೀಯ ರತ್ನ ಹಾರಿಣ್ಯೈ ಕಲಿ ಕಲ್ಮಷ ಪರಿಹಾರಿಣ್ಯೈ ।।ಅ.ಪ।। ಸಕಲ ಸೌಭಾಗ್ಯದಾಯೈ ಕಾಂಬೋಜ ಚರಣಾಯೈ ಸಂಕ್ಷೋಭಿಣ್ಯಾದಿ ಶಕ್ತಿಯುತ ಚತುರ್ಥಾವರಣಾಯೈ ಪ್ರಕಟ ಚತುರ್ದಶ ಭುವನ ಭರಣಾಯೈ ಪ್ರಬಲ ಗುರುಗುಹ ಸಂಪ್ರದಾಯಾಂತಃಕರಣಾಯೈ ಅಕಳಂಕರೂಪ ವರ್ಣಾಯೈ ಅಪರ್ಣಾಯೈ ಸುಪರ್ಣಾಯೈ ಸುಕರಧೃತ ಚಾಪ ಬಾಣಾಯೈ ಶೋಭನಕರ ಮನುಕೋಣಾಯೈ ಸಕುಂಕುಮಾದಿ ಲೇಪನಾಯೈ ಚರಾಚರಾದಿಕಲ್ಪನಾಯೈ ಚಿಕುರವಿಜಿತ ನೀಲಘನಾಯೈ ಚಿದಾನಂದ ಪೂರ್ಣಘನಾಯೈ ।।ಚರಣ।।

ಶ್ರೀ ಕಮಲಾಂಬಿಕಾಯಾಃ ಪರಂ ನಹಿರೇ **ರಾಗ: ಭೈರವಿ-ಝಂಪೆತಾಳ**

ಶ್ರೀ ಕಮಲಾಂಬಿಕಾಯಾಃ ಪರಂ ನಹಿರೇ ರೇಚಿತ್ತ ಕ್ಷಿತ್ಯಾದಿ ಶಿವಾಂತ ತತ್ವ ಸ್ವರೂಪಿಣ್ಯಾಃ ।।ಪ।। ಶ್ರೀಕಂಠ ವಿಷ್ಣು ವಿರಿಂಚಾದಿ ಜನಯಿತ್ರ್ಯಾಃ । ಶಿವಾತ್ಮಕ ವಿಶ್ವ ಕರ್ತ್ಯಾಃ ಕಾರಯಿತ್ರ್ಯಾಃ । ಶ್ರೀಕರ ಬಹಿರ್ದಶಾರ ಚಕ್ರ ಸ್ಥಿತ್ಯಾಸ್ಸೇವಿತ । ಭೈರವೀ ಭಾರ್ಗವೀ ಭಾರತ್ಯಾಃ ।।ಅ.ಪ.।। ನಾದಮಯ ಸೂಕ್ಷ್ಮರೂಪ ಸರ್ವಸಿದ್ಧಿ ಪ್ರದಾದಿ। ದಶ ಶಕ್ತ್ಯಾರಾಧಿಕ ಮೂರ್ತೇಃ ಶ್ರೋತ್ರಾದಿ ದಶಕರಣಾತ್ಮಕ ಕುಳತೌಳಿಕಾದಿ ಬಹುವಿಧೋಪಾಸಿತ ಕೀರ್ತೇಃ । ಅಭೇದ ನಿತ್ಯ ಶುದ್ಧ ಬುದ್ಧ ಮುಕ್ತ ಸಚ್ಚಿದಾನಂದ ಪರಮಾದ್ವೈತ ಸ್ಫೂರ್ತೇಃ ।। ಆದಿ ಮಧ್ಯಾಂತರ ರಹಿತಾಪ್ರಮೇಯ ಗುರುಗುಹ ಮೋದಿತ ಸರ್ವಾರ್ಥ ಸಾಧಕ ಸ್ಫೂರ್ತೇಃ । ಮೂಲಾದಿ ನವಾಧಾರ ವ್ಯಾವೃತ್ತ ದಶಧ್ವನಿ ಭೇದಜ್ಞ। ಯೋಗಿಬೃಂದ ಸಂರಕ್ಷಣ್ಯಾಃ ಅನಾದಿ ಮಾಯಾ ವಿದ್ಯಾ ಕಾರ್ಯಕಾರಣ ವಿನೋದಕರಣ ಪಟುತರ ಕಟಾಕ್ಷ ವೀಕ್ಷಣ್ಯಾಃ ।।ಚರಣ।।

ಕಮಲಾಂಬಿಕಾಯಾಃ ಸ್ತವ ಭಕ್ತೋಹಂ **ರಾಗ: ಪುನ್ನಾಗವರಾಳಿ-ರೂಪಕತಾಳ**

ಕಮಲಾಂಬಿಕಾಯಾಃ ಸ್ತವ ಭಕ್ತೋಹಂ ಶಂಕರ್ಯಾಃ । ಶ್ರೀಕರ್ಯಾಃ ಸಂಗೀತರಸಿಕಾಯಾಃ ಶ್ರೀ ।।ಪ।। ಸುಮಶರೇಕ್ಷು ಕೋದಂಡ ಪಾಶಾಂಕುಶ ಪಾಣ್ಯಾಃ । ಅತಿ ಮಧುರತರ ವಾಣ್ಯಾಃ ಶರ್ವಾಣ್ಯಾಃ ಕಲ್ಯಾಣ್ಯಾಃ ।। ರಮಣೀಯ ಪುನ್ನಾಗವರಾಳಿ ವಿಜಿತ ವೇಣ್ಯಾಃ ಶ್ರೀ ।।ಅ.ಪ.।। ದಶಕಲಾತ್ಮಕ ವಹ್ನಿಸ್ವರೂಪ ಪ್ರಕಾಶಾಂತರ್ದಶಾರ । ಸರ್ವ ರಕ್ಷಾಕರ ಚಕ್ರೇಶ್ವರ್ಯಾಃ ತ್ರಿದಶಾದಿನುತ । ಕಚವರ್ಗ ದ್ವಯಮಯ ಸರ್ವಜ್ಞಾದಿ ದಶಶಕ್ತಿ ಸಮೇತ ಮಾಲಿನಿ ಚಕ್ರೇಶ್ವರ್ಯಾಃ ತ್ರಿದಶ ವಂಶದ್ವರ್ಣ ಗರ್ಭಿಣೀ ಕುಂಡಲಿನ್ಯಾಃ ದಶಮುದ್ರಾ ಸಮಾರಾಧಿತ ಕೌಳಿನ್ಯಾಃ ದಶರಥಾದಿನುತ ಗುರುಗುಹ ಜನಕ ಶಿವ ಬೋಧಿನ್ಯಾಃ। ದಶಕರಣ ವೃತ್ತಿ ಮರೀಚಿ ನಿಗರ್ಭಯೋಗಿನ್ಯಾಃ ।।ಚರಣ।।

ಶ್ರೀ ಕಮಲಾಂಬಿಕಾಯಾಃ ಭಕ್ತಿಂ ಕರೋಮಿ **ರಾಗ: ಶಹಾನಾ-ತ್ರಿಪುಟತಾಳ**

ಶ್ರೀ ಕಮಲಾಂಬಿಕಾಯಾಃ ಭಕ್ತಿಂ ಕರೋಮಿ । ಶ್ರಿತಕಲ್ಪವಾಟಿಕಾಯಾಂ ಚಂಡಿಕಾಯಾಂ ಜಗದಂಬಿಕಾಯಾಂ ।।ಪ।। ರಾಕಾಚಂದ್ರ ವದನಾಯಾಂ ರಾಜೀವ ನಯನಾಯಾಂ । ಪಾಕಾರಿನುತ ಚರಣಾಯಾಂ ಆಕಾಶಾದಿ ಕಿರಣಾಯಾಂ । ಹ್ರೀಂಕಾರ ವಿಪಿನ ಹಿರಣ್ಯಾಂ ಹ್ರೀಂಕಾರ ಸುಶರೀರಿಣ್ಯಾಂ । ಹ್ರೀಂಕಾರ ತರು ಮಂಜರ್ಯಾಂ ಹ್ರೀಂಕಾರೇಶ್ವರ್ಯಾಂ ಗೌರ್ಯಾಂ ।।ಅ.ಪ.।। ಶರೀರತ್ರಯ ವಿಲಕ್ಷಣ ಸುಖತರ ಸ್ವಾತ್ಮಾನುಭೋಗಿನ್ಯಾಂ । ವಿರಿಂಚಿ ಹರೀಶಾನ ಹರಿಹಯ ವೇದಿತ ರಹಸ್ಯ ಯೋಗಿನ್ಯಾಂ । ಪರಾದಿ ವಾಗ್ದೇವತಾ ರೂಪ ವಶಿನ್ಯಾದಿ ವಿಭಾಗಿನ್ಯಾಂ । ಚರಾತ್ಮಕ ಸರ್ವರೋಗಹರ ನಿರಾಮಯ ರಾಜಯೋಗಿನ್ಯಾಂ । ಕರಧೃತ ವೀಣಾವಾದಿನ್ಯಾಂ ಕಮಲಾಗರ ವಿನೋದಿನ್ಯಾಂ । ಸುರನರ ಮುನಿಜನ ಮೋದಿನ್ಯಾಂ ಗುರುಗುಹವರ ಪ್ರಸಾದಿನ್ಯಾಂ ।।ಚರಣ।।

ಶ್ರೀ ಕಮಲಾಂಬಿಕೆ ಅವಾವ ಶಿವೇ **ರಾಗ: ಘಂಟ-ಆದಿತಾಳ**

ಶ್ರೀ ಕಮಲಾಂಬಿಕೆ ಅವಾವ ಶಿವೇ ಕರಧೃತ ಶುಕಶಾರಿಕೇ ।।ಪ।। ಲೋಕಪಾಲಿನಿ ಕಪಾಲಿನಿ ಶೂಲಿನಿ ಲೋಕಜನನಿ।

ಭಗಮಾಲಿನಿ ಸಕೃದಾಲೋಕಯ ಮಾಂ ಸರ್ವಸಿದ್ಧಿ ಪ್ರದಾಯಿಕೇ ತ್ರಿಪುರಾಂಬಿಕೇ ಬಾಲಾಂಬಿಕೇ ।।ಅ.ಪ.।। ಸಂತಪ್ತ ಹೇಮ ಸನ್ನಿಭ ದೇಹೇ ಸದಾಖಂಡೈಕರಸ ಪ್ರಭಾವೇ । ಸಂತಾಪಹರ ತ್ರಿಕೋಣಗೇಹೇ ಸಕಾಮೇಶ್ವರೀ ಶಕ್ತಿಸಮೂಹೇ। ಸಂತತಮುಕ್ತಿ ಘಂಟಾಮಣಿ ಘೋಷಾಯಮಾನ ಕವಾಟದ್ವಾರೇ । ಅನಂತ ಗುರುಗುಹ ವಿದಿತೇ ಕರಾಂಗುಲಿ ನಖೋದಯ ವಿಷ್ಣು ದಶಾವತಾರೇ ।। ಅಂತಃ ಕರುಣೇಕ್ಷು ಕಾರ್ಮುಕ ಶಬ್ದಾದಿ ಪಂಚತನ್ಮಾತ್ರ ವಿಶಿಖಾದ್ಯಂತ ರಾಗ ಪಾಶ ದ್ವೇಶಾಂಕುಶಧರಕರೇತಿ ರಹಸ್ಯ ಯೋಗಿನೀಪರೇ ।।ಚರಣ।।

ಶ್ರೀ ಕಮಲಾಂಬಾ ಜಯತಿ ಅಂಬ **ರಾಗ: ಆಹಿರಿ-ರೂಪಕತಾಳ**

ಶ್ರೀ ಕಮಲಾಂಬಾ ಜಯತಿ ಅಂಬ ಶ್ರೀ ಕಮಲಾಂಬಾ ಜಯತಿ। ಜಗದಂಬ ಶ್ರೀ ಕಮಲಾಂಬಾ ಜಯತಿ ಶೃಂಗಾರ ರಸ ಕದಂಬಾ । ಮದಂಬಾ ಶ್ರೀ ಕಮಲಾಂಬಾ ಜಯತಿ ಚಿತ್ ಬಿಂಬ । ಪ್ರತಿಬಿಂಬೇಂದು ಬಿಂಬಾಶ್ರೀ ಕಮಲಾಂಬಾ ಜಯತಿ । ಶ್ರೀಪುರ ಬಿಂದು ಮಧ್ಯಸ್ಥ ಚಿಂತಾಮಣಿ ಮಂದಿರಸ್ಥ । ಶಿವಾಕಾರಮಂಚಸ್ಥಿತ ಶಿವಕಾಮೇಶಾಂಕಸ್ಥ ।।ಪ।। ಸೂಕರಾನನಾದ್ಯರ್ಚಿತ ಮಹಾ ತ್ರಿಪುರ ಸುಂದರೀಂ । ರಾಜರಾಜೇಶ್ವರೀಂ ಶ್ರೀಕರ ಸರ್ವಾನಂದಮಯ । ಚಕ್ರವಾಸಿನೀಂ ಸುವಾಸಿನೀಂ ಚಿಂತಯೇಹಂ । ದಿವಾಕರ ಶೀತಕಿರಣ ಪಾವಕಾದಿ ವಿಕಾಸಕರಯಾ । ಭೀಕರ ತಾಪತ್ರಯಾದಿ ಭೇದನ ಧುರೀಣ ತರಯಾ । ಪಾಕರಿಪು ಪ್ರಮುಖಾದಿ ಪ್ರಾರ್ಥಿತ ಸುಕಳೇಬರಯಾ । ಪ್ರಾಕಟ್ಯ ಪರಾಪರಯಾ ಪಾಲಿತೋ ದಯಾಕರಯಾ ।।ಅ.ಪ।। ಶ್ರೀಮಾತ್ರೇ ಮಸ್ತೇ ಚಿನ್ಮಾತ್ರೇ ಸೇವಿತ ರಮಾಹರಿಕಾವಿಧಾತ್ರೇ । ವಾಮಾದಿ ಶಕ್ತಿಪೂಜಿತ ಪರದೇವತಾಯಾಃ ಸಕಲಂ ಜಾತಂ । ಕಾಮಾದಿ ದ್ವಾದಶಭಿ ರುಪಾಸಿತ ಕಾದಿ ಹಾದಿ ಸಾದಿಮಂತ್ರ। ರೂಪಿಣ್ಯಾಃ ಪ್ರೇಮಾಸ್ಪದ ಶಿವಗುರುಗುಹ ಜನನ್ಯಾಂ । ಪ್ರೀತಿಯುಕ್ತ ಮಚ್ಚಿತ್ತಂ ವಿಲಯತು ಬ್ರಹ್ಮಮಯ ಪ್ರಕಾಶಿನೀ । ನಾಮರೂಪ ವಿಮರ್ಶಿನೀ ಕಾಮಕಲಾ ಪ್ರದರ್ಶಿನೀ ಸಾಮರಸ್ಯ ನಿದರ್ಶಿನೀ ।।ಚರಣ।।

ಶ್ರೀ ಕಮಲಾಂಬಿಕೇ **ರಾಗ: ಶ್ರೀ-ಖಂಡಏಕತಾಳ**

ಶ್ರೀ ಕಮಲಾಂಬಿಕೇ ಶಿವೇ ಪಾಹಿಮಾಂ ಲಲಿತೇ । ಶ್ರೀಪತಿ ವಿನುತೇ ಸಿತಾಸಿತೇ ಶಿವಸಹಿತೇ ।।ಪ।। ರಾಕಾ ಚಂದ್ರಮುಖೀ ರಕ್ಷಿತ ಕೋಮಲಮುಖೀ । ರಮಾವಾಣೀ ಸಖೀ ರಾಜಯೋಗ ಸುಖೀ । ಶಾಕಾಂಬರೀ ಶಾತೋದರಿ ಚಂದ್ರಕಲಾಧರಿ । ಶಂಕರಿ ಶಂಕರ ಗುರುಗುಹ ಭಕ್ತವಶಂಕರಿ । ಏಕಾಕ್ಷರಿ ಭುವನೇಶ್ವರಿ ಈಶ ಪ್ರಿಯಂಕರಿ । ಶ್ರೀಕರಿ ಸುಖಕರಿ ಶ್ರೀಮಹಾತ್ರಿಪುರಸುಂದರಿ।।ಚರಣ।।

❖ ❖ ❖

ಜಯ ಜಯ ಶಂಕರಿ ಶಿವದಯಿತೇ (ಗೋಪದ್ಮದಕಥೆ-ಬೀಜಾಕ್ಷರೀನಾಮ) **ರಾಗ: ಕುರಂಜಿ**

ಜಯ ಜಯ ಶಂಕರಿ ಶಿವದಯಿತೇ। ಜಯ ಜಯ ತ್ರಿಪುರ ಸುಂದರಿ ಲಲಿತೇ।। ಬುಧ ಸನ್ಮಾನಿತಶುಭ ಚರಿತೇ। ಮಧು ಕೈಟಭ ಮರ್ದಿನಿ ಲಲಿತೇ।। ಮಹಿಷನಿಸೂದನಿ ಲೋಕಹಿತೇ। ದೃಹಿಣಾದ್ಯಮರನುತೇ ಲಲಿತೇ।। ಕುಂಭೋದ್ಭವ ಕೃತ ಸುತಿ ಮದಿತೇ। ಶುಂಭಾದ್ಯ ಸುರದಮನೀ ಲಲಿತೇ।। ಶರಣಾಗತ ಜನ ಕಲ್ಪಲತೇ। ಸುರತ ಸಮಾಧೀ ವರದೇ ಲಲಿತೇ। ಸೌಪರ್ಣಿಕಾ ತಟಕೃತ ವಸಿತೇ। ತಾಪತ್ರಯ ಹಾರಿಣಿ ಲಲಿತೇ। ಸುಂದರೇಶ ಸತಿ ಪಾಂಡ್ಯಸುತೇ। ಬಂಧು ಪೀಠ ನಿಲಯೇ ಲಲಿತೇ।। ನಿಗಮಗೀತ ಮಹಿಮಾಲಸಿತೇ। ನಗಧರ ಸೋದರಿ ಶ್ರೀಲಲಿತೇ।। ಶಶಿಸೂರ್ಯನ ನಯನಯುತೇ। ಪಶುಪಾಶವಿಮೋಚನಿ ಲಲಿತೇ।। ಶಿಷ್ಟಜನಾದ್ರಿಹರಣ ಲಲಿತೇ। ಸೃಷ್ಟಿ ಸ್ಥಿತಿಲಯ ಕರಿ ಲಲಿತೇ।। ಯೋಗಿವರ್ಯ ಹೃತ್ಪೀಠಗತೇ। ವಾಗತೀತ ವಿಭವೇ ಲಲಿತೇ।। ಸರ್ವಾಧಾತೀ ಸರ್ವಗತೇ। ಸರ್ವಸಾಕ್ಷಿರೂಪಿಣಿ ಲಲಿತೇ।। ಭ್ರಾಂತಿವಿನಾಶಿನಿ ಶೈಲಸುತೇ। ಶಾಂತಿಸುಧಾವರ್ಷಿಣಿ ಲಲಿತೇ ।। ಚಿದ್ಗಜನೋಜ್ವಲಕ ದ್ಯೋತೇ। ಸದ್ಗುರು ರೂಪಿಣಿ ಶ್ರೀಲಲಿತೇ।। ಪರಿಪಾಲಯ ಕೃಪಯೋ ಲಲಿತೇ। ಶರಣಂ ತ್ವಮೇವ ಮಮ ಲಲಿತೇ।। ಗತ ಕಲಶಂ ಕುರುಮಾಂ

ಲಲಿತೇ। ಶೃತಿಸಾರಂಭೋದಯ ಲಲಿತೇ।। ರಾಗದ್ವೇಷೌರುಹಿ ಲಲಿತೇ। ಭೋಗವಿರಕ್ತಂ ಕುರುಲಲಿತೇ। ಮೋಹಾಬ್ದೇರುದ್ಧರ ಲಲಿತೇ। ದೇಹಾತ್ಮ ಮರೆಮ್ಹರ ಲಲಿತೇ।। ತತ್ವದ ಶಕ್ತಂ ಕುರುಲಲಿತೇ। ಹೃತ್ಪರಿಯಿಂ ಕೇಶಯಿ ಲಲಿತೇ।। ಶ್ರೀಚಕ್ರಪುರೇಶ್ವರಿ ಲಲಿತೇ। ಮೋಚಯ ಬಂಧಾಮ್ಮಂ ಲಲಿತೇ।। ಪರಬ್ರಹ್ಮ ವಿಶ್ವಂ ಲಲಿತೇ। ಕುರುಮಾಂಬನ ಶಂಕರಿ ಲಲಿತೇ।। ಜಯ ಜಯ ಶಂಕರಿ ಶಿವದಯಿತೇ। ಜಯ ಜಯ ತ್ರಿಪುರಸುಂದರಿ ಲಲಿತೇ।।

ದೇವಿ ದೇವಿ ಜೈ ಪರಮೇಶ್ವರಿ (ಗೋಪದ್ಮದ ಕಥೆ)

ದೇವಿ ದೇವಿ ಜೈ ಪರಮೇಶ್ವರಿ ಇಂದ್ರರು ಚಂದ್ರರು ದೇವೇಂದ್ರರು। ಗರುಡಗಾಂಧರ್ವರು ಏಕಾದಶರುದ್ರರು ದ್ವಾದಶಾದಿತ್ಯರು। ಇಷ್ಟೂ ಮಂದಿ ಕುಳಿತಿರುವಾಗ, ಶ್ರೀ ಕೃಷ್ಣನ ಒಡ್ಡೋಲಗದಲ್ಲಿ ಗೋಪದ್ಮನೋಹಿ ನೋತವರಾರು? ನೋಯದೆ ಇದ್ದವರು ಯಾರು? ಅಂದ್ರಂತೆ।। ಇಂದ್ರಾದೇವಿ ನೋತ್ಲು ತುಳಸಾದೇವಿ ನೋತ್ಲು। ಸ್ವಾಮಿ ಶ್ರೀ ಕೃಷ್ಣತಂಗಿ ಸುಭದ್ರಾದೇವಿ ನೋಯಲಿಲ್ಲ ಅಂದ್ರಂತೆ ಹಾಗಾದ್ರೆ ಏನ್ಮಾಡಬೇಕು? ಅಂದ್ರಂತೆ ಬೆನ್ಬಾರ್ ತೆಗೆದು। ತಮಟೆಗೆ ಹಾಕ್ಬೇಕು ಅಂದ್ರಂತೆ ಆ ಮಾತ್ಕೇಳಿ ಶ್ರೀರಂಗರಾಯ ಪಟ್ಟೇ ಉಟ್ಕೊಂಡು ಫಣೇಗಿಟ್ಕೊಂಡು ಕೊಂಬೂದ್ ಸ್ಕೊಂಡು ಕೊಡೆ ಹಿಡಕೊಂಡು ತಂಗೀ ಮನೇಗ್ ಬರ್‍ತ್ತಿರೋನಂತೆ।। ಬರೋ ಅಣ್ಣನ ಭರಾ ಕಂಡು, ಪಟಿಕ ತಂದು ಪಾದತೊಳೆದು ಸಿಂಹಾಸನದಲ್ಲಿ ಏರಲ್ಹಾಕಿ ಪಟಿಕ್ಯಾಸನದಲ್ ಕುಳ್ಳಿರ್‌ಲ್ಹಾಕಿ, ಇದೇನಣ್ಣ ಈ ಪರಿ ಆಯ್ತು ಅಂದ್ಲಂತೆ ತಂಗಿ ತಂಗಿ ನಿನಗೊಂದ್ ನೋಹಿ ತಂದೆ, ವ್ರತ ತಂದೆ ಕಥೆ ತಂದೆ ಅಂದನಂತೆ।। ದೇವಕಿ ದೇವಿಯಂತೆ ತಾಯಿದ್ದಾಗ್ಯೇ ವಸುದೇವರಂತ ತಂದೆ ಇದ್ದಾಗ್ಯೆ ನಿನ್ನಂಥ ಶ್ರೀಕೃಷ್ಣನಂಥ ಒಡಹುಟ್ಟಿದವರಿದ್ದಾಗ್ಯೆ। ನಂಗೆಂಥ ನೋಹಿ ನಂಗೆಂಥ ವ್ರತ ನಂಗೆಂಥ ಕಥೆ ಅಂದ್ಲಂತೆಹಾಗಲ್ಲ ತಂಗಿ ಭೂಮಿ ಮೇಲೆ ಗೋಪದ್ಮ ನೋಹಿ ನೋಯ್ದೆ ಇದ್ದೋರ್‍ನ ಬೆನ್ ಬಾರ್ ತೆಗೆದು ತಮಟೆಗೆ ಹಾಕ್ತಾರೆ ಅಂದ್ನಂತೆ ಹಾಗಾದ್ರಣ್ಣ। ಹೇಗೆ ಮಾಡಬೇಕು ಅಂದ್ಲಂತೆ ಮೊದ್ಲೇಕಾದಶಿ ಮೊದಲ್ಗೊಂಡು ಕೊನೆ ಉತ್ಥಾನದ್ವಾದಶೀವರೆಗೂ ಅಚ್ಚಗೋವುಗಳ್ ಕಟ್ಟೋ ಬಳೀಲಿ ನಿತ್ಯ ಗೋವುಗಳ್ ನಿಲ್ಲೋ ಬಳೀಲಿ ಹಚ್ಚೀಲ್‌ಸಾರ್‍ಸಿ। ಹವಳದಲ್ಸಾರಣೆಗೊಂಡು ಪಚ್ಚುತ್ತಿದ್ ರಂಗೋಲೀಲಿ ಶಂಖ ಇಟ್ಟು ಚಕ್ರ ಇಟ್ಟು ಗೋವಿಟ್ಟು ಗೋವಿನ್ಮರೀ ಇಟ್ಟು ಗೋವಿನ ಹೊಟ್ಟೇಲಿ ಮೂವತ್ಮೂರು ಪದ್ಮ ಇಟ್ಟು ಮೂವತ್ಮೂರು ಪ್ರದಕ್ಷಿಣೆ ಮಾಡಿ ಮೂವತ್ಮೂರು ಅರ್ಘ್ಯಕೊಟ್ಟು ಸ್ವಾಮಿ ಶ್ರೀಕೃಷ್ಣ ನಿಂಗೇ ಪ್ರೀತೀಂತ ಹೇಳೋರಂತೆ ಮೊದಲ್ನೆ ವರ್ಷ ಬಂತೂಂದ್ರೆ ಮೂವತ್ಮೂರು ಬಟ್ಲು ಶಾವಿಗೆ ಪಾಯಸ ಮಾಡಿ ಅಣ್ಣಿದ್ದೋರು ಅಣ್ಣಂಗ್ ಕೊಟ್ಟು ತಮ್ಮಿದ್ದೇರ್ ತಮ್ಮಂಗ್ ಕೊಟ್ಟು। ಯಾರೂ ಇಲ್ದಿದ್ದೋರು ಊರಿಗುಂಟಾದ ಹಿರಿಬ್ರಾಹ್ಮಣನ ಕರ್‍ಕೊಂಡ್ಬಂದು। ಕಾಲ್ತೊಳೆದು ಮಣೆಕೊಟ್ಟು, ಹೂ ಕೊಟ್ಟು, ಗಂಧಕೊಟ್ಟು ಬಾಗಿನ ಕೊಟ್ಟು, ಸ್ವಾಮಿ ಶ್ರೀಕೃಷ್ಣ ನಿಂಗೇ ಪ್ರೀತಿ ಅನ್ನೋರಂತೆ ಹೀಗೆ ಎರಡ್ನೇವರ್ಷ ಬಂತೂಂದ್ರೆ ಮೂವತ್ಮೂರು ಎರೆಯಪ್ಪಮಾಡಿ। ಮೂರನೇ ವರ್ಷದಲ್ಲಿ ಮೂವತ್ಮೂರು ಮುಚ್ಚೋರೆ ಮಾಡಿ ನಾಲ್ಕನೇ ವರ್ಷದಲ್ಲಿ ಮೂವತ್ಮೂರು ಚಕ್ಕುಲಿ ಮಾಡಿ ಐದನೇ ವರ್ಷ ಬಂತೂಂದ್ರೇ ಮೂವತ್ಮೂರು ಒಬ್ಬಟ್ಟು ಮಾಡಿ ದಾನ ಕೊಟ್ಟು ಸ್ವಾಮಿ ಶ್ರೀಕೃಷ್ಣ ನಿಂಗೇ ಪ್ರೀತಿ ಅನ್ನೋರಂತೆ ಗೋವು ಕಟ್ಟೋ ಬಳಿ ಗೋಪದ್ಮ ಇಕ್ಕಿದರೆ ಗೋಪಾಲಕೃಷ್ಣ ನಿನಗೇ ಪ್ರೀತಿ ಆಕಳು ಕಟ್ಟೋ ಬಳೀಲಿ ಆದಿಪದ್ಮ ಇಕ್ಕಿದರೆ ಆದಿನಾರಾಯಣ ನಿನಗೇ ಪ್ರೀತಿ ವೃಂದಾವನದ ಬಳಿ ನಂದಪದ್ಮ ಇಕ್ಕಿದರೆ ನಂಜುಂಡೇಶ್ವರ ನಿನಗೇ ಪ್ರೀತಿ।।

❖ ❖ ❖

ಜಯ ಭಗವತಿ (ದೇವಿ ಭಾಗವತ)

ಜಯ ಜಯ ಭಗವತಿ ಮಂಗಳ ಮೂರ್ತಿ। ಜಯ ಜಯ ಜಗದಾನಂದ ವಿಧಾತ್ರಿ।। ಜಯ ಜಗದಂಬೆ ಸೌಖ್ಯ ಕದಂಬೆ। ಜಯ ಜಯ ಶರದೃತ ವರಶಶಿ ಬಿಂಬೆ।। ನಿತ್ಯ ನಿರಂಜನಿ ನಿಗಮಾತೀತೆ। ನಿತ್ಯ ಸುಮಂಗಲಿ ಭುವನ ಖ್ಯಾತೇ।। ಸರ್ವಶಕ್ತಿ ಪರಿ ಪೂರ್ಣ ಗುಣಾರ್ಣವೆ। ಸರ್ವಸಾಕ್ಷಿ ಸಕಲಾಗಮ ವಿನುತೆ।। ಸೃಷ್ಟಿಸ್ಥಿತಿಲಯ ಕಾರಣೆ ನೀನೆ। ಇಷ್ಟಾನಿಷ್ಟಪ್ರದಾಯಿನಿ

ನೀನೇ।। ಹುಟ್ಟಿದ ಹರಿಹರ ಬ್ರಹ್ಮರ ಮುದದೊಳ್। ತೊಟ್ಟಿಲಲಿಡುತಲಿ ತೂಗಿದ ಜನನೀ।। ವಿಷ್ಣು ಮಾಯೆಯಿಂ ಮಧುಕೈಟಭರ। ನಷ್ಟಗೊಳಿಸಿ ಪರಮೇಷ್ಟಿಯ ಪೊರೆದೆ।। ವಿಧಿಸಿದ ಸೃಷ್ಟಿ ಸ್ಥಿತಿಲಯವೆಸಗಲ್। ವಿಧಿ ಹರಿಹರರಿಗೆ ಕ್ರಮದಿಂ ಜಗದೊಳ್।। ಹರಿಹರ ವಿಧಿಗಳಿಗಜೇ ಯರಾದ। ದುರುಳ ದೈತ್ಯ ಕುಲ ನಾಶಕಿಯಾದೆ।। ಮೂಜನ ತೇಜಗಳೊಂದಾಗಿರುತ। ರಾಜಿಪ ಮೂರ್ತಿಯು ನೀನೆಲೆ ಮಾತೆ।। ಸಾಸಿರ ತೋಳಂ ನೀ ಧರಿಸಿರುವೆ। ವಿಶ್ವಾಭರಣವ ತಾಳುತ ಮೆರೆವೆ। ಕೋಟಿಸೂರ್ಯ ಶಶಿ ಬಿಂಬ ಪ್ರಕಾಶೆ। ಪಾಟಲಿ ಪುಷ್ಪ ವಿರಾಜಿತ ಕೇಶೆ।। ಕಾಮ ಕೋಟಿ ಲಾವಣ್ಯ ಲತಾಂಗೀ। ಕಾಮ ವೈರಿ ಅರ್ಧಾಂಗಿ ಶುಭಾಂಗಿ।। ಸಿಂಹವನೇರಿ ವಿರಾಜಿಪೆಯಮ್ಮ। ಬ್ರಹ್ಮಾಂಡಗಳಂ ಪೋಷಿಪೆಯಮ್ಮ।। ಪಿಶಿತಾಚರ ಶಿರೋಮಣಿ ರಣದೆ। ಬಸವಳಿಯದೆ ನೀ ನಸುವಂ ಬಸಿದೆ।। ಚಕ್ಷುಲ ಬಿಡಾರ ರಾಕ್ಷರರುಗಳಂ। ಲಕ್ಷ್ಯಕ್ಕೆ ತರದೆ ತ್ರಿಶೂಲದೊಳ್ ಇರಿದೆ।। ಮಹಿಯಂ ಬೆದರಿಪ ಮಹಿಷಾಸುರನಂ। ಸಹಿಸದೆ ಕೋಪದಿ ಮಹಿಗುರುಳಿಸಿದೆ।। ಮಹಿಷಾಪುರಿಯೊಳು ಹರುಷದಿ ನಿಂದು। ಮೈಸೂರರರಸರ ಸಲಹುವೆ ನೆಂದು।। ಧೂಮ್ರಲೋಚನ ಭಸ್ಮವ ಗೈದೆ। ತಾಮಸರನ್ನಿರ್ನಾಮವ ಗೈದೆ।। ಚಂಡಮುಂಡ ಕಡುಭಂಡರನೆಲ್ಲಾ। ದಂಡಿಸಿದಾ ಚಾಮುಂಡಿಯು ನೀನೇ।। ಶಕ್ತಿಯೆ ನಿನ್ನಯ ನಾಲಿಗೆ ಹಾಸಿ। ರಕ್ತ ಬೀಜ ಸಂಹಾರವ ಗೈದೆ।। ಶುಂಭ ನಿಶುಂಭಾಸುರರಂ ಮಡುಹಿ। ಶಾಂಭವಿ ಎಂಬುವ ಬಿರುದಂ ಪಡೆದೆ।। ಭ್ರಮರಾಸುರನಂ ಸಮರದಿ ಕೊಂದೆ। ಭ್ರಮರೆಯ ನಾಮದಿ ಭುವನದಿ ನಿಂದೆ।। ದುರ್ಗಾಸುರನು ವಧಿಸಿದೆ ರಣದಿ। ದುರ್ಗಿಯಾಗಿ ಕಂಗೊಳಿಸಿದೆ ಜಗದಿ।। ಜ್ವಾಲೆಯನುಗುಳುವ ಜ್ವಾಲಾಮುಖಿಯೆ। ಬಾಲಾ ತ್ರಿಪುರೆಯ ಬಕುಳಾ ಮಖಿಯೆ।। ಶಾಖಾಹಾರವ ಹಾರೈಸುವಳೇ। ಶಾಕಾಂಬರಿ ಶುಭ ನಾಮದೊಳ್ ಇಹಳೇ।। ಮಾರಿ ಭವಾನಿಯೇ ಕಾತ್ಯಾಯನಿಯೆ। ಮೀರಿದ ಚೆಲುವಿನ ಜಗನ್ಮೋಹಿನಿಯೇ।। ಸೊಂಪಿನ ಸಂಪಿಗೆ ಬನವಾಸಿನಿಯೆ। ಇಂಪಿನ ಶುಕ ಪಿಕ ಮೃದುಭಾಷಿಣಿಯೇ।। ಪದ್ಮ ಹಸ್ತೆ ಪೊರೆ ಪದ್ಮಾಸಿನಿಯೆ। ಪದ್ಮ ನೇತ್ರೆ ವರ ಪದಾಮಸನನಯೇ।। ಗೌರಿಯಾಗಿ ಶ್ರೀಶಿವಸತಿ ಎನಿಪೆ। ಭಾರ್ಗವಿ ನಾಮದಿ ವೈಷ್ಣವಿ ಎನಿಪೆ।। ವೀಣಾ ಪುಸ್ತಕ ಜಪಸರ ಧರಿಸಿ। ವಾಣಿ ಎನಿಪೆ ನೀ ಕಮಲಜನರಸಿ।। ಗಾಯಿತ್ರಿ ನೀನೆ ಸಾವಿತ್ರಿ ನೀನೇ। ಮಾಯಾಧೀಶ್ವರಿ ವ್ಯಾಕೃತಿ ನೀನೆ।। ಸಪ್ತಕೋಟಿ ಮಹ ಮಂತ್ರಾಧಾರೇ। ಸಪ್ತ ಮಾತ್ರಿಕಾ ಮಾತ್ರ ವಿದೂರೇ।। ಅಜ ಹರ ಹರ ಸುರ ನರ ಮುನಿವರರು। ಭಜಿಸುತಲತಿಶಯ ಹರುಷದೊಳ್ ಇಹರು।। ರಾಜ ರಾಜೇಶ್ವರಿ ನಿನ್ನಂ ಭಜಿಸಿದ। ರಾಜ ವೈಶ್ಯರತಿ ಧನ್ಯತೆ ಯಾಂತರ್।। ದೀನ ದಯಾಪರೆ ಜಗದೋದ್ಧಾರೇ। ದಾನವ ಸಂಹರ ದುರಿತವಿದೂರೇ।। ಶಿಷ್ಟ ವಸಿಷ್ಟಂ ಋಷಿಯೇ ನಿನ್ನ। ಭ್ರಷ್ಟನಾಗಿ ತಾ ಬೆದರಿದ ಮುನ್ನ।। ಆದಿ ಶಕ್ತಿಯೇ ನಿನ್ನಯ ಮಹಿಮೆಯ। ಆದಿ ಶೇಷತಾನ್ ವರ್ಣಿಸಲರಿಯ।। ಕಾಲ ಗಾಲೆ ಮಹಾಕಾಳಿಯೆ ಪೊರೆಯೌ। ಬಾಲರೆಮ್ಮ ಮೊರೆಯಾಲಿಸಿ ಕೃಪೆಯಿಂ।। ಮಾತೆ ನಿನ್ನ ತನುಜಾತರನೆಮ್ಮ। ಪ್ರೀತಿಯಿಂದ ಪರಿಪಾಲಿಪುದೆಮ್ಮ।। ಅನ್ನಪೂರ್ಣೆ ನಾ ನಮಿಪೆನು ನಿನ್ನ। ಅನ್ನವಿತ್ತು ಸಂರಕ್ಷಿಸು ಎನ್ನ।। ಕ್ಷುದ್ರೋಪದ್ರವನೆಲ್ಲವ ರುದ್ರೇ। ಛಿದ್ರಗೊಳಿಸಿ ನೀ ಸಲಹೌ ಭದ್ರೇ।। ವಿಧವಿಧ ಘೋರ ಜ್ವರಗಳನೆಲ್ಲಾ। ಸದೆಬಡಿದೋಡಿಸಿ ಸಲಹೌ ಮಾತೆ।। ಭೂತಪ್ರೇತ ಪಿಶಾಚಿಗಳೆಮ್ಮ। ಭೀತಿಗೊಳಿಪುದಂ ಪರಿಹರಿಸಮ್ಮ।। ಸರ್ವಮಂಗಳೆಯೆ ಸರ್ವಕಾಲದೊಳ್। ಸರ್ವಮಂಗಳವ ಪಾಲಿಸು ಮುದದೊಳ್।। ಜ್ಞಾನ ಹೀನರಾವ್ ಗೈದಪರಾಧವ। ಜ್ಞಾನ ಪೂರ್ಣೇ ನಿ ಮನ್ನಿಸಿ ಸಲಹೌ।। ಅಮ್ಮನೆ ಬಾ ಜಗದಮ್ಮನೆ ಬಾ। ಒಮ್ಮನದಿಂದಲಿ ಭಜಿಪೆವು ಬಾಬಾ।। ನಿನ್ನ ಭಜನೆಯೇ ಬಲು ಇಂಪಮ್ಮ।। ಕಲಿಯುಗದೊಳು ಬಲು ಮಹಿಮೆಯ ತೋರಿ। ಸಲಹುವೆ ಭಕ್ತರ ಸಲೆಮೈದೋರಿ।। ಇಂದಿನ ಚೆಂದದಿ ನಿನ್ನಂ ಭಜಿಸಿದ। ಇಂದಿನ ದಿನವೆ ಶುಭದಿನ ನಮಗೆ।। ಇಂದಿನ ವಾರವೆ ಶುಭವಾರ। ಇಂದಿನ ತಾರೆಯೆ ಶುಭತಾರೆ।। ಇಂದಿನ ಯೋಗವೆ ಶುಭಯೋಗ। ಇಂದಿನ ಕರಣವೆ ಶುಭಕರಣ।। ಜಯ್ ಜಯ್ ಶಂಕರಿ ದೈತ್ಯ ಭಯಂಕರಿ। ಜಯ್ ಜಯ್ ಜಯಕರಿ ಶುಭಕರಿ ಜಯ್ ಜಯ್।। ಜಯ್ ಜಯ್ ಶಾಂಭವಿ ಜಯ್ ಜಯ್ ಭೈರವಿ। ಜಯ್ ಜಯ್ ಭಾರ್ಗವಿ ದೇವಿಯೆ ಜಯ್ ಜಯ್।। ಜಯ್ ಜಯ್ ಮಂಗಳ ಜಗ ಜೀವನೆಯೆ। ಜಯ್ ಜಯ್ ಮಂಗಳ ಜಗ ಪಾವನೆಯೇ।। ಕಾಯೇನ ವಾಚಾ ಮನಸೇಂದ್ರಿಯೈರ್ವಾ। ಬುದ್ಧ್ಯಾತ್ಮನಾ ವಾ ಪ್ರಕೃತೇ ಸ್ವಭಾವಾತ್। ಕರೋಮಿಯದ್ಯತ್ ಸಕಲಂ ಪರಸ್ಮೈ। ನಾರಾಯಣಾಯೇತಿ ಸಮರ್ಪ ಯಾಮಿ।।

❖ ❖ ❖

ದೇವಿ ಸ್ತುತಿ

ಶ್ರೀಮಂಗಳ ದೇವಿ ನಿನಗೆ ಪ್ರಣಾಮ **ರಾಗ: ವಲಚಿ**

ಶ್ರೀಮಂಗಳ ದೇವಿ ನಿನಗೆ ಪ್ರಣಾಮ। ನೀಡೇ ಅನುಗ್ರಹ ಭಕ್ತರ ವೃಂದಕೆ।।ಪ।। ಸಕಲೋಪಚಾರದಿ ಭಕ್ತರು ಪೂಜಿಪರು। ಸಕಲಸಂಪತ್ತು ನೀಡೇ ನಿರಂತರ। ವೇದಾಂತ ರೂಪಿಣಿ ಮಂಗಳ ಸ್ವರೂಪಿಣಿ। ಸರ್ವವಂದಿತೆ ತ್ರಿಲೋಕ ಜನನಿ।।1।। ಶ್ರಾವಣ ಮಾಸದಿ ಪಂಚಾಮೃತ ಅಭಿಷೇಕ। ಧನುರ್ಮಾಸದಲಿ ಪೂಜೆ ಪುನಸ್ಕಾರ। ಆಶ್ವಿಜ ಮಾಸದಿ ನವರಾತ್ರಿ ವೈಭವ। ವಿಜಯ ದಶಮಿಯಂದೇ ಮಹಾರಥೋತ್ಸವ।।2।।

ಧಿಮಿತಕ ಧಿಮಿತಕ ಕುಣಿಯಮ್ಮ **ರಾಗ: ಆನಂದಭೈರವಿ**

ಧಿಮಿತಕ ಧಿಮಿತಕ ಕುಣಿಯಮ್ಮ। ಝಣಝಣ ಝಣಝಣ ಬಾರಮ್ಮ। ಧಿಮಿತಕ ಧಿಮಿತಕ ಕುಣಿಯಮ್ಮ। ಮನೆಯೊಳು ಸ್ಥಿರವಾಗಿ ನಿಲ್ಲಮ್ಮ।।ಪ।। ತುಳಜಾ ಭವಾನಿಯೆ ಬಾರಮ್ಮ। ತಲ್ಲಣ ಗೊಳಿಸದಿರು ತಾಯಮ್ಮ। ನಾಟ್ಯವಾಡುತಲಿ ಬಾರಮ್ಮ। ನಸುನಗುತಲಿ ಬಂದು ಕೂರಮ್ಮ।।1।। ಗಂಗಾ ಭವಾನಿಯೆ ಬಾರಮ್ಮ। ಗಾನಪಾಡುವೆ ಕೇಳಮ್ಮ। ಮಂಗಳ ದ್ರವ್ಯದಿ ಪೂಜಿಪೆನಮ್ಮ। ಮಾಂಗಲ್ಯಭಾಗ್ಯವ ಕರುಣಿಸಮ್ಮ।।2।। ದುರ್ಗಾಭವಾನಿ ಬಾರಮ್ಮ। ತಲ್ಲಣಗೊಳಿಸದಿರು ತಾಯಮ್ಮ। ಪಂಚ ಜ್ಯೋತಿಯ ಬೆಳಗಿಸುವೆ। ಚಿಟಿಕೆ ವಾದ್ಯದ ಪ್ರಿಯಳಮ್ಮ।।3।। ಅಖಿಲಾಂಡೇಶ್ವರಿ ಬಾರಮ್ಮ। ಅಚ್ಚರಿಯಿಂದಲಿ ನೋಡುವೆನಮ್ಮ। ಆಪದ್ಬಾಂಧವೆ ಬಾರಮ್ಮ। ಅನಾಥ ರಕ್ಷಕಿ ಕಣ್ತೆರೆಯಮ್ಮ।।4।। ಕಾಮಿತಾರ್ಥವ ನೀಡಮ್ಮ। ಕಾದುಕೊಂಡಿಹೆ ನಿನಗಮ್ಮ। ಪಡಿಮೆಟ್ಟಿ ಮುದದಿಂದ ಬಾರಮ್ಮ। ಪಾದ ಸೇವೆಯ ಕರುಣಿಸಮ್ಮ।।5।। ಶಾರದ ದೇವಿಯೆ ಬಾರಮ್ಮ। ಶಾಶ್ವತ ಪದವಿಯ ತೋರಮ್ಮ। ಬೇಸರವಿಲ್ಲದೆ ಬಾರಮ್ಮ। ನೊಂದಿಹ ಮನವನು ತಣಿಸಮ್ಮ।।6।।

ನಮೋಸ್ತುತೇ ಜಗದೀಶ್ವರೀ

ನಮೋಸ್ತುತೇ ಜಗದೀಶ್ವರೀ। ಕೃಪಾಕರೀ ಪರಮೇಶ್ವರೀ।।ಪ।। ಕಾತ್ಯಾಯಿನಿ ಕಲವಿದಾರಿಣಿ। ಕಮಲಾಸನಾದಿ ಕಾಮರೂಪಿಣೀ।।1।। ಶುಭಸೌಖ್ಯದಾತೇ ವಿಭಪಾರಿಜಾತೇ। ಅಷ್ಟಭಾಗ್ಯ ಪ್ರೀತೆ ಅಮರಾಳಿಗೀತೆ।।2।। ಸರ್ವಮಂಗಳೇ ಶ್ಯಾಮಸುಂದರೀ।ಸಕಲಾಗಮಾಂತೇ ಸಂಭಾಷಿಣೀಂ।।3।।

ಅಂಬಾ ನಿನ್ನಯ ಪಾದ **ರಾಗ: ತೋಡಿ**

ಅಂಬಾ ನಿನ್ನಯ ಪಾದಾಂಬುಜಯುಗ। ಮನದಂಬುಜಾದೊಳಗತಿ ಸಂಭ್ರಮದಿಂದಲಿ। ನಂಬಿ ಭಜಿಪೆನೆ ಚಿತ್ತದಿಇಂಬುಗೊಂಡಿರುವೋ ಬಿಂಬ ರೂಪನ ತೋರೆ। ಅಂಬುಜಾಂಬಕ ಶಂಭು ದೇವನ ಪ್ರಿಯಾಂಭೋಲೀಧರನ ವಿನುತೆ। ಅಂಬರಮಾನ್ವಿತೆ ಪ್ರಖ್ಯಾತೆ। ಶುಂಭನಿಶುಂಭಾಸುರ ಕದಂಬ ಸಂಗ್ರಾಮ ಹಾರಿ। ಕುಂಭಿಣೀಧರಜಾತೆ ರಾಜಿತೆ। ಕಂಬು ಚಕ್ರಪಾಣೆ ವಿಶ್ವಂಬರ ಮಾರುತಿ। ಅಂಬುಜಾಪತಿ ನಮ್ಮ ಗುರು ಜಗನ್ನಾಥ ವಿಠ್ಠಲನ್ನ। ಕಾಂಬುವ ತೆರಮಾಡೆ ಕರುಣಾಕರಳೆ।

ಜಯ ಜಯ ಶಂಕರಿ ಜಗದಂಬಾ **ರಾಗ: ಪುನ್ನಾಗವರಾಳಿ**

ಜಯ ಜಯ ಶಂಕರಿ ಜಗದಂಬಾ। ಜಯಪರಮೇಶ್ವರಿ ಜಗದಂಬಾ। ಓಂಕಾರೇಶ್ವರಿ ಜಗದಂಬಾ। ಶ್ರೀಚಕ್ರೇಶ್ವರಿ ಜಗದಂಬಾ।। ಕಾಮಿತ ದಾಯಿನಿ ಜಗದಂಬಾ। ತ್ಯಾಗರಾಜನುತೆ ಜಗದಂಬಾ। ಯದುವರ ಸೋದರಿ ಜಗದಂಬಾ। ನಾರದಾವಿನುತೆ ಜಗದಂಬಾ।। ಯಜ್ಞಾರಾಧಿತೆ ಜಗದಂಬಾ। ವಿದ್ಯಾದಾಯಕಿ ಜಗದಂಬಾ। ಮಹಿಷಮರ್ದಿನಿ ಜಗದಂಬಾ। ಹೇಮ ಕಳಾನಿಧಿ ಜಗದಂಬಾ।। ರಿಪುಕುಲಮರ್ದಿನಿ ಜಗದಂಬಾ। ಧೀರ ಪ್ರಭಾಮಯಿ ಜಗದಂಬಾ।

ಮಯೂರವಾಹಿನಿ ಜಗದಂಬಾ। ಹಿಮಗಿರಿ ತನಯೇ ಜಗದಂಬಾ।। ತಮಪರಿಹಾರಕಿ ಜಗದಂಬಾ। ಒಲವಿನ ಗುಣಮಣಿ ಜಗದಂಬಾ। ದುರಿತ ನಿವಾರಿಣಿ ಜಗದಂಬಾ। ಗೀತಾರೂಪಿಣಿ ಜಗದಂಬಾ।। ಕನ್ನಿಕಾಂಬಿಕಾ ಜಗದಂಬಾ। ಯಶಪ್ರದಾಯಕಿ ಜಗದಂಬಾ। ಕುಂಕುಮ ಶೋಭಿಣಿ ಜಗದಂಬಾ। ಮಾಯಾ ಮೋಹಿನಿ ಜಗದಂಬಾ।। ಪ್ರಣವ ಸ್ವರೂಪಿಣಿ ಜಗದಂಬಾ। ಚೋದ್ಯ ಶಿಖಾಮಣಿ ಜಗದಂಬಾ। ದನುಜಭಂಜಿನಿ ಜಗದಂಬಾ। ಯತಿಜನ ರಕ್ಷಕಿ ಜಗದಂಬಾ।। ಶ್ರೀಶುಭಮಂಗಳೆ ಜಗದಂಬಾ। ಜಯಶುಭ ಮಂಗಳೆ ಜಗದಂಬಾ। ಶ್ರೀ ಶುಭಮಂಗಳೆ ಜಗದಂಬಾ। ಜಯಶುಭ ಮಂಗಳೆ ಜಗದಂಬಾ।। ಜಯಶುಭ ಮಂಗಳೆ ಜಗದಂಬಾ।।

ಶ್ರೀಚಕ್ರವಾಸಿನಿ ದೇವಿ ನಮಸ್ತೆ

ಶ್ರೀಚಕ್ರವಾಸಿನಿ ದೇವಿ ಸಮಸ್ತೆ। ಶಿವಕಾಮಸುಂದರಿ ದೇವಿ ಸಮಸ್ತೆ। ಶ್ರೀಕೃಷ್ಣಸೋದರಿ ದೇವಿ ನಮಸ್ತೆ। ರಾಜರಾಜೇಶ್ವರಿ ದೇವಿ ನಮಸ್ತೆ।।1।। ಪದ್ಮದಳಲೋಚನೆಯೆ ದೇವಿ ನಮಸ್ತೆ। ಭಕ್ತಪರಿಪಾಲಿನಿಯೆ ದೇವಿ ನಮಸ್ತೆ। ಪರ್ವತವರ್ಧಿನಿದೇವಿ ನಮಸ್ತೆ। ರಾಜರಾಜೇಶ್ವರಿ ದೇವಿ ನಮಸ್ತೆ।।2।। ಕರುಣಾ ವಿಲಾಸಿನಿ ದೇವಿ ನಮಸ್ತೆ। ಕಾತ್ಯಾಯಿನಿ ಗೌರಿ ದೇವಿ ನಮಸ್ತೆ। ಕದಂಬವನವಾಸಿನಿ ದೇವಿ ನಮಸ್ತೆ। ರಾಜರಾಜೇಶ್ವರಿ ದೇವಿ ನಮಸ್ತೆ।।3।। ಶಕ್ತಿಪರಮೇಶ್ವರಿ ದೇವಿ ನಮಸ್ತೆ। ಶಂಭುಮನಮೋಹಿನಿ ದೇವಿ ನಮಸ್ತೆ। ಶಂಕರಿ ಮಹೇಶ್ವರಿ ದೇವಿ ನಮಸ್ತೆ। ರಾಜರಾಜೇಶ್ವರಿ ದೇವಿ ಸಮಸ್ತೆ।।4।। ಅನ್ನಪೂರ್ಣೇಶ್ವರಿ ದೇವಿ ನಮಸ್ತೆ। ಅಖಿಲಾಂಡ ನಾಯಕಿಯೇ ದೇವಿ ನಮಸ್ತೆ। ಅಭಯ ಪ್ರದಾಯಿನಿ ದೇವಿ ನಮಸ್ತೆ। ರಾಜರಾಜೇಶ್ವರಿ ದೇವಿ ನಮಸ್ತೆ।।5।।

ಶಕ್ತಿಯ ಕೊಡು ಶಕ್ತಿಯ ಕೊಡು — ರಾಗ: ಕಲ್ಯಾಣಿ

ಶಕ್ತಿಯ ಕೊಡು ಶಕ್ತಿಯ ಕೊಡು ಶಕ್ತಿಯ ಕೊಡು ಶಂಕರೀ। ಭಕ್ತಿಯಿಂದ ಭಜಿಸುವಂಥ ಭಾಗ್ಯ ನೀಡು ಈಶ್ವರೀ।।ಪ।। ಹಗಲು ಇರುಳು ನಿನ್ನ ಧ್ಯಾನ ನಿನ್ನ ಸ್ಮರಣೆ ಅಮೃತಪಾನ। ಎನ್ನ ಮನದ ತಾಪ ಹರಿಸಿ ಭಿನ್ನಪವ ನೀನಾಲಿಸು।।1।। ಭವದ ಬದುಕು ಬಯಲಿಗಾಯ್ತು ಇಹದ ಚಿಂತೆ ಬೇಡವಾಯ್ತು। ಜನುಮ ಜನುಮದಲ್ಲು ನಿನ್ನ ಚರಣ ಕಮಲ ಸ್ಮರಿಸುವಂಥ।।2।।

ನಿತ್ಯಾನಂದಳೆ ನಿಗಮಾತೀತಳೆ

ನಿತ್ಯಾನಂದಳೆ ನಿಗಮಾತೀತಳೆ। ಸರ್ವಸ್ವರೂಪಳೆ ನಮೋ ನಮೋ।। ಭಕ್ತಪ್ರಿಯಳೆ ಭವಭಯ ನಾಶಿನಿ। ಭವಾನಿ ದೇವಿಯೇ ನಮೋ ನಮೋ।।ಪ।। ಕಲಿಮಲನಾಶಿನಿ ಮುನಿಜನರಂಜಿನಿ। ಮಂಗಳದೇವಿಯೇ ನಮೋ ನಮೋ।। ಅಪಾರಮಹಿಮಳೆ ಅನಂತರೂಪಿಣಿ। ಅಂಬಿಕ ದೇವಿಯೇ ನಮೋ ನಮೋ।। ಪ್ರೇಮಸ್ವರೂಪಳೆ ಪ್ರಣವಾಕಾರಳೆ। ಪದ್ಮಾವತಿಯೇ ನಮೋ ನಮೋ।। ಭದ್ರಸ್ವರೂಪಳೆ ವೇದೋದ್ಧಾರಳೆ। ಸೀತಾದೇವಿಯೇ ನಮೋ ನಮೋ।।1।। ಜಗದ್ಧಾತ್ರಿಯೇ ಜಗದೋದ್ಧಾರಳೆ। ಜಗದೀಶ್ವರಿಯೇ ನಮೋ ನಮೋ।। ಪ್ರಶಾಂತ ಮಹಿಮಳೆ ಪ್ರಭಾವ ಶಾಲಿನಿ। ಪ್ರಸನ್ನ ಲಕ್ಷ್ಮಿಯೆ ನಮೋ ನಮೋ।। ಗಣಪತಿ ಜನನಿ ಧೀರಗಂಭೀರಳೆ। ಪಾರ್ವತಿ ದೇವಿಯೇ ನಮೋ ನಮೋ।। ಅಖಿಲಾಂಡೇಶ್ವರಿ ಉಮಾಮಹೇಶ್ವರಿ। ಅನ್ನಪೂರ್ಣೇಶ್ವರಿ ನಮೋ ನಮೋ।।2।। ಈಶ್ವರರ್ಧಾಂಗೀ ಸರ್ವಾಲಂಕಾರಿಣಿ। ಶಂಕರಾಂಬಿಕೇ ನಮೋ ನಮೋ।।ಈಶ ಸರ್ವೇಶ್ವರಿ ಕೇಶವಭಗಿನೀ। ಚಾಮುಂಡೇಶ್ವರಿ ನಮೋ ನಮೋ।। ಅಸುರಸಂಹಾರಿಣಿ ಅಭಯ ಪ್ರದಾಯಿನಿ। ಅಂಬಾಭವಾನಿ ನಮೋ ನಮೋ।। ಭಾರತಮಾತೆಯೇ ಭಜನ ಪ್ರಿಯಳೇ। ಬನಶಂಕರಿ ದೇವಿಯೇ ನಮೋ ನಮೋ।।3।। ರಜತಗಿರೀಶ್ವರಿ ರಾಜೀವ ಲೋಚನೆ। ರಾಜರಾಜೇಶ್ವರಿ ನಮೋ ನಮೋ।। ಮಂತ್ರ ಸ್ವರೂಪಳೆ ಯಂತ್ರೋದ್ಧಾರಳೆ ಶ್ರೀಚಂಕ್ರಾಂಕಿತೆ ನಮೋ ನಮೋ।। ಶಿವಶಕ್ತಿ ಮಹಿಮಳೆ ಚಿತ್ ಸ್ವರೂಪಳೆ। ಲಲಿತಾ ಅಂಬಿಕೆ ನಮೋ ನಮೋ।। ಸರ್ವಸ್ವರೂಪಳೆ ಧರ್ಮ ಪ್ರಕಾಶಳೆ। ಮಹಾಲಕ್ಷ್ಮಿ ದೇವಿಯೆ ನಮೋ ನಮೋ।।4।। ದನುಜ ಸಂಹಾರಿಣಿ ದಾರಿದ್ರನಾಶಿನಿ। ದಾಕ್ಷಾಯಿಣಿ ದೇವಿಯೆ ನಮೋ ನಮೋ।।ಪ್ರಕೃತಿ ಸ್ವರೂಪಳೆ ಪ್ರಚಂಡ ರುದ್ರಳೆ।

ಭಕ್ತ ಪ್ರಸನ್ನಳೆ ನಮೋ ನಮೋ।। ದೇವಾದಿ ವಂದ್ಯಳೆ ದಿವ್ಯ ಮಹಿಮಳೆ। ದೀನೋದ್ಧಾರಳೆ ನಮೋ ನಮೋ।। ಅಕ್ಷರ ರೂಪಳೆ ಅರ್ಚನ ಪ್ರಿಯಳೆ। ಆದಿಶಕ್ತಿಯೆ ನಮೋ ನಮೋ।।5।। ಜನನ ಮರಣದ ಭಯವನು ಓಡಿಸುವ। ಸರ್ವಶಕ್ತಿಗೆ ನಮೋ ನಮೋ।। ಭಜಿಸಿದ ಭಕ್ತರು ಬೇಡಿದ ವರಗಳ। ನೀಡುವ ಶಕ್ತಿಗೆ ನಮೋ ನಮೋ।। ಸಿಂಹವಾಹಿನಿ ಖಡ್ಗಧಾರಿಣಿ। ನಿರ್ಭಯ ಮೂರ್ತಿಗೆ ನಮೋ ನಮೋ।। ಚಂದ್ರಶೇಖರ ಭಾರತಿ ಪೂಜಿತ। ವಿದ್ಯಾದೇವಿಗೆ ನಮೋ ನಮೋ।।6।। ತುಂಗಾತೀರದಿ ಕಂಗೊಳಿಸುತಲಿಹ। ಶಾರದಾಂಬಿಕೆಗೆ ನಮೋ ನಮೋ।। ಅಂಬಾ ಭವಾನಿ ತುಳಜಾಭವಾನಿ। ಗಂಗಾಭವಾನಿಗೆ ನಮೋ ನಮೋ।। ಅದ್ವೈತರೂಪಿಗೆ ನಮೋ ನಮೋ। ಅದ್ಭುತ ಶಕ್ತಿಗೆ ನಮೋ ನಮೋ।।7।। ಕಾಲಶಕ್ತಿಗೆ ಮುಕ್ತಿಯ ತೋರುವ। ಮೂಕಾಂಬಿಕೆಗೆ ನಮೋ ನಮೋ।ಅನಂತ ಮಹಿಮಳೆ ಮಂತ್ರರಹಸ್ಯಳೆ। ಶಂಕರ ಪೂಜಿತೆ ನಮೋ ನಮೋ।। ಮಂಗಳ ರೂಪಿಣಿ ಯಂತ್ರಾ ರೂಪಳೆ। ಸಂತರಪೋಷಿಣಿ ನಮೋ ನಮೋ।। ಬ್ರಹ್ಮಾನಂದಳೆ ಬ್ರಹ್ಮಸ್ವರೂಪಿಣಿ। ಬ್ರಹ್ಮ ಸದಾ ನಂದಿನಿ ನಮೋ ನಮೋ।।8।। ಓಂ ಶಕ್ತಿ ಓಂ। ಆದಿಶಕ್ತಿ, ಮಹಾಶಕ್ತಿ, ಪರಾಶಕ್ತಿ ಓಂ।। ಓಂ ಶಕ್ತಿ ಓಂಶಕ್ತಿ ಓಂಶಕ್ತಿ ಓಂ। ಶಿವಶಕ್ತಿ ವಿಷ್ಣುಶಕ್ತಿ ಬ್ರಹ್ಮಶಕ್ತಿ ಓಂ।। ಇಚ್ಛಾಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಓಂ। ಓಂ ಶಕ್ತಿ ಓಂಶಕ್ತಿ ಓಂಶಕ್ತಿ ಓಂ।। ಓಂ ತತ್ ಸತ್ ಓಂ ತತ್ ಸತ್। ಓಂ ತತ್ ಸತ್।। ಓಂ ಶಾಂತಿ ಓಂ ಶಾಂತಿ ಓಂ ಶಾಂತಿಃ।।

ಅಂಬ ಪರಮೇಶ್ವರಿ

ರಾಗ: ಕಾನಡ–ಆದಿತಾಳ

ಅಂಬ ಪರಮೇಶ್ವರಿ ಅಖಿಲಾಂಡೇಶ್ವರಿ। ಆದಿ ಪರಾಶಕ್ತಿ ಪಾಲಯಮಾಂ। ಶ್ರೀ ಭುವನೇಶ್ವರಿ ರಾಜರಾಜೇಶ್ವರಿ। ಆನಂದ ರೂಪಿಣಿ ಪಾಲಯಮಾಂ।। ಶಿವಶಕ್ತಿ ಸ್ವರೂಪಿಣಿ ಶಾಂಭವಿ ಶಂಕರಿ। ಶಾಂತಸ್ವರೂಪಿಣಿ ಪಾಲಯಮಾಂ।। ಓಂ ಮಾತಾ ಶ್ರೀ ಮಾತಾ ಓಂ। ಶ್ರೀಮಾತಾ ಲಲಿತಾಂಬ।। ಕಂಚಿ ಕಾಮಾಕ್ಷಿ ಮಧುರೆ ಮೀನಾಕ್ಷಿ। ಕಾಶಿ ವಿಶಾಲಾಕ್ಷಿ ಪಾಲಯಮಾಂ।।

ಭವಾನಿ ಭಕ್ತಸುಖದಾಯಿನೀ

ಭವಾನೀ ಭಕ್ತಸುಖದಾಯಿನೀ।। ಭಕ್ತಿಗಮ್ಯಾ ಭಕ್ತಿವಶ್ಯಾ ಭಾವಕಪ್ರಚೋದಿನೀ। ಭವಾನೀ ಭಕ್ತಸುಖದಾಯಿನಿ।।1।। ಮಹಾಮಾಯಾ ಮಹಾನಿಲಯಾ। ಮಾನವಕುಲಜನನೀ। ಮಾಲಿನೀ ಮದನಬಲನಾಶಿನೀ।। ಪ್ರಭಾರೂಪ ಪ್ರೇಮರೂಪ ಪಾತಕನಿವಾರಿಣೀ। ಪಾವನೀ ಪರಮಪದ ದಾಯಿನೀ।।2।।

ಕಂಬು ಕಂದರೀ ಶ್ರೀಂ ಕಾಳೀಂ (ಅಂಬಾಷ್ಟಕಂ)

ಕಂಬು ಕಂದರೀ ಶ್ರೀಂ ಕಾಳೀಂ ಪರಾಂ ಹ್ರೀಂ ಬಿಂಬೋದರೀಂ ಶ್ರೀಂ ಅಂಬುಜಾಕ್ಷಿ ಹ್ರಾಂ ಹ್ರೀಂ ಕುಂಭಸಂಭವಾದಿ ಮುನಿವಂದಿತೆ ಪದಾರವಿಂದೆ।।1।। ಅಂಬಾಂ ಭಜಾಮಿ ಜಗದಾಂಬಾ ಭಜಾಮಿ ಶಾರದಾಂಬಾ ಭಜಾಮಿ ಲಲಿತಾಂಬಾಂ ಭಜಾಮಿ ಆದಿದೇವಿಂ ಭಜಾಮಿ ಗೌರಿದೇವೀಂ ಭಜಾಮಿ। ಲಕ್ಷ್ಮೀದೇವೀಂ ಭಜಾಮಿ। ಕಾಳಿದೇವೀಂ ಭಜಾಮಿ। ಭಕ್ತಿದೇವೀಂ ಭಜಾಮಿ। ಮುಕ್ತಿದೇವೀಂ ಭಜಾಮಿ ಯುಕ್ತಿದೇವೀಂ ಭಜಾಮಿ ಶಕ್ತಿದೇವೀಂ ಭಜಾಮ್ಯಹಂ।।2।। ಮಾಣಿಕ್ಯಂ ಚಿತ್ರಕೂಟ ಮಹಳೀಂ ಏಕವೀರವೇಣೀಂ ಪ್ರಯಾಗ ಮಾಧವೇಶ್ವರೀಂ ಶರ್ವಾಣೀಂ ಹ್ರಾಂ ಮೃದುವೇಣೀಂ ಜೀವೇಶ ದಿಗ್ಬಂಧಯಾಮಿ ದಂಧಯಾಮಿ ದಂಧಯಾಮಿ।।3।। ಲಂಕಾದಿ ನಾಯಕೀಂ ಶಂಕರೀಂ ಚಾರೂವೆ ಕಾಂಚೀಪುರಾಧ್ಯಕ್ಷ ಸಾಲಂಕಾದಿ ಓಂಕಾರ ಶಾಮಲ ಭಯಂಕರೀ ಪೂರ್ವ ದಿಗ್ಬಂಧಯಾಮಿ ಬಂಧಯಾಮಿ ಬಂಧಯಾಮಿ।।4।। ಗಯಾ ಮಂಗಳಯುತೆ ಗೌರೀ ತುಲಜಭವೆ ಮಾಯೇ ಕುರೂಕ್ಷೇತ್ರ ಹಸ್ತಿನೀಂ ಉಜ್ಜನೀಂ ನಾಯಕೀಂ ಕೌಬೇರ ಭೂತನಾಥ ಊರ್ದ್ವ ದಿಗ್ಬಂಧಯಾಮಿ ಬಂಧಯಾಮಿ ಬಂದಯಾಮಿ।।5।। ಪರಮಂತ್ರ ಪರತಂತ್ರ ರಕ್ಷಿಣೀಂಶಿಕ್ಷಿಣೀ ಪರತಂತ್ರ ಪರಯಂತ್ರಮೌವ್ಯ ಭವ್ಯ ರುಕ್ಷಿಣೀಂ ಶಿಕ್ಷೀಣೀಂ ಪರಮಾತ್ಮ ಗೂಢ ಕೂಟ ಪಟ್ಟಣಾಧೀಶ್ವರೀಂ ಪರಮಾತ್ಮ ಸೋದರೀ ಹಾಂ ಹ್ರೀಂ ಶ್ರೀಂ ಕ್ಲೀಂ ಭೂಂ ಪಟು।।6।। ಶ್ರೀಶೈಲಾಪುರಿ ಶಿಮತ್ ಕೊಲ್ಲಾಪುರಿ ವಾಸಿನೀಂ ವಾರಿಜೋಗ ಲಾಗ ವಿನ್ಯಾಸಿ ನೀಂ ಭ್ರಮರ ವಂದ್ಯ ನಂದೀನೀಂ ಕರಾಳಿಕಾಮಾಂ ಹ್ರಾಂಹ್ರೀಂ ಶ್ರೀಂ ಕ್ಲೀಂ।।7।। ಶ್ರೀಮದ್ಧಖಿಳ ಸುಂದರೀಂ ಸಿಂಹಳೀಂ ಕೌಂಚಿತ ಚಾಮುಂಡೀಂ ಚಂಡಮುಂಡ ಮರ್ಧಿನೀಂ ವಾಮಲೋಚನೀಂ

ವಿದ್ಯಾದಿ ಶಾಂಭವೀಂ ನಾಮಾವೀತಿ ಹೋತ್ರ ಶಮನ ದಿಧ್ಬಂಧ ಯಾಮಿ ಬಂಧಯಾಮಿ ಬಂಧಯಾಮಿ॥8॥ ಅಂಬಾಷ್ಟಕಮಿದಂ ಪುಣ್ಯಂ ಯಃ ಪಠೇನ್ನ ಶಿವಸನಿಧೌ ಶಿವಲೋಕಮವಾಪ್ನವತಿ ಶಿವೇನ ಸಹಮೋದತೇ ಇತಿ ಶ್ರೀ ಅಂಬಾಷ್ಟಕಂ ಸಂಪೂರ್ಣಂ॥

ಅಂಬಾ ಶಾಂಭವಿ (ರಾಜರಾಜೇಶ್ವರಿ ಅಷ್ಟಕಂ)

ಅಂಬಾ ಶಾಂಭವಿ ಚಂದ್ರಮೌಳಿ ರಬಲಾ ಪರ್ಣಾ ಉಮಾ ಪಾರ್ವತೀ। ಕಾಳೀ ಹೈ ಮವತೀ ಶಿವ ತ್ರಿಣಯನೀ ಕಾತ್ಯಾಯನೀ ಭೈರವೀ। ಸಾವಿತ್ರೀ ನವಯೌವನಾ ಶುಭಕರೀ ಸಾಮ್ರಾಜ್ಯ ಲಕ್ಷ್ಮೀಪ್ರದಾ। ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ॥ ಅಂಬಾ ಮೋಹಿನಿ ದೇವತಾ ತ್ರಿಭುವನೀ ಆನಂದಸಂದಾಯನೀ। ವಾಣಿ ಪಲ್ಲವ ಪಾಣಿವೇಣುಮುರಳೀ ಗಾನಪ್ರಿಯಾಲೋಲಿನೀ। ಕಲ್ಯಾಣೀ ಉಡುರಾಜಬಿಂಬವದನಾ ಧೂಮ್ರಾಕ್ಷಸಂಹಾರಿಣೀ। ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ॥ ಅಂಬಾ ನೂಪುರ ರತ್ನಕಂಕಣಧರೀ ಕೇಯೂರಹಾರಾವಳೀ। ಜಾಜೀ ಚಂಪಕವೈಜಯಂತಿಲಹರೀ ಗ್ರೈವೇಯವೈರಾಜಿತಾ। ವೀಣಾವೇಣುವಿನೋಧಮಂಡಿತಕರಾ ವೀರಸನಾಸಂಸ್ಥಿತಾ। ಚಿದ್ರೂಪಿ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ॥ ಅಂಬಾ ರೌದ್ರಿಣಿ ಭದ್ರಕಾಳಿ ಬಗಳಾ ಜ್ವಾಲಾಮುಖಿ ವೈಷ್ಣವೀ। ಬ್ರಹ್ಮಾಣಿ ತ್ರಿಪುರಾಂತಕೀ ಸುರನುತಾ ದೇದೀಪ್ಯ ಮಾನೋಜ್ವಲಾ। ಚಾಮುಂಡಾ ಶ್ರಿತರಕ್ಷ ಪೋಷಜನನೀ ದಾಕ್ಷಾಯಣೀ ಪಲ್ಲವೀ। ಚಿದ್ರೂಪಿ ಪರದೇವತಾ ಭಗವತಿ ಶ್ರೀ ರಾಜರಾಜೇಶ್ವರೀ॥ ಅಂಬಾಶೂಲಧನುಃಕುಶಾಂಕುಶಧರೀ ಅರ್ಧೇಂದುಬಿಂಬಾಧರೀ। ವಾರಾಹಿ ಮಧು ಕೈಟಭಪ್ರಶಮನೀ ವಾಣೀರಮಾಸೇವಿತಾ। ಮಲ್ಲಾ್ಯದ್ಯಾಸುರಮೂಕ ದೈತ್ಯದಮನೀ ಮಹಾಶ್ವರೀ ಅಂಬಿಕಾ। ಚಿದ್ರೂಪಿ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ॥ ಅಂಬಾ ಸೃಷ್ಟಿವಿನಾಶಪಾಲನಕರೀ ಆರ್ಯಾವಿಸಂಶೋಭಿತಾ। ಗಾಯತ್ರೀ ಪ್ರಣವಾಕ್ಷರಾಮೃತಪರಃ ಪೂರ್ಣಾನು ಸಂಧೀಕೃತಾ। ಓಂಕಾರೀ ವಿನುತಾ ಸುರಾರ್ಚಿತಪದಾ ಉದ್ದಂಡದೈತ್ಯಾಪಹಾ। ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ॥ ಅಂಬಾ ಶಾಶ್ವತ ಆಗಮಾದಿ ವಿನುತಾ ಆರ್ಯಾ ಮಹಾದೇವತಾ। ಯಾ ಬ್ರಹ್ಮಾದಿ ಪಿಪೀಲಕಾಂತ ಜನನೀ ಯಾ ವೈ ಜಗನ್ಮೋಹಿನೀ। ಯಾ ಪಂಚ ಪ್ರಣವಾದಿ ರೇಫ ಜನನೀ ಯಾ ಚಿತ್ಕಳಾಮಾಲಿನೀ। ಚಿದ್ರೂಪಿ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರಿ॥ ಅಂಬಾ ಪಾಲಿತಭಕ್ತರಾಜಿ ರವಿಶಂ ಅಂಬಾಷ್ಟಕಂ ಯಃ ಪಠೇ। ಅಂಬಾ ಲೋಕಕಟಾಕ್ಷ ವೀಕ್ಷಲಲಿತಾ ಐಶ್ವರ್ಯಾ ಮವ್ಯಾಹತಾ। ಅಂಬಾ ಪಾವನಮಂತ್ರ। ರಾಜ ಪಠನಾದ್ದಂತೀಶ ಮೋಕ್ಷಪ್ರದಾ। ಚಿದ್ರೂಪಿ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರಿ॥

ಏನೆಂದು ನಾ ಹಾಡಲಿ ದೇವಿ (ಅವತಾರಗಳು) ರಾಗ: ಮೋಹನ

ಏನೆಂದು ನಾ ಹಾಡಲಿ। ದೇವಿ ದಶಾವತಾರ ವೈಭವವಾ॥ಪ॥ ಮಧುಕೈಟಭರನು ಮರ್ದಿಸಲೆನುತ। ಅವತಾರ ಮಾಡಿದೆ ಮಹಾಕಾಳಿಯೇ। ಅಸುರರ ಹರಿಸಲು ಅಮರರ ಕಾಯಲು। ಅವತರಿಸಿದೆ ಮಹಾಲಕ್ಷ್ಮೀ॥1॥ ಬ್ರಹ್ಮನ ಸೃಷ್ಟಿಯ ಕಾರ್ಯವು ಸಾಗಿದೆ। ಸ್ಫೂರ್ತಿಯು ನೀನಾದೆ ಸರಸ್ವತಿ। ವಿಶ್ವಾಮಿತ್ರನ ತಪಕೆ ಒಲಿದು। ಗೋಚರವಾದೆ ಗಾಯತ್ರಿಯೇ॥2॥ ನಂದಗೋಪನಿಗೆ ನಂದಿನಿಯಾದ। ಯೋಗ ಮಾಯೆಯೇ ನಂದಾದೇವಿ। ಜಗದಲಿ ಹಸಿವಿನ ತಾಪವ ಕಳೆಯೇ। ಅನ್ನಪೂರ್ಣೇಯೇ ಶಾಖಾಂಬರೀ॥3॥ ಮೂಕಾಸುರನನು ಸಂಹಾರಗೈದ। ಮೂಕಾಂಬಿಕೆಯೆ ಮಾತೆ ಜನನಿ। ಮಹಿಷಾಸುರನನು ಮರ್ದಿಸಿದಂತೆ। ಚಾಮುಂಡೇಶ್ವರಿ ತಾಯೇ ಭವಾನಿ॥4॥ ರಕ್ತರೂಪಿಣಿ ಸಿಂಹವಾಹಿನಿ। ಸಿಂಹಾದ್ರಿ ನಿಲಯೇ ಭೀಮಾದೇವಿ। ಭ್ರಮರಾಸುರನನು ಅಂತ್ಯಮಾಡಿದ ಭ್ರಮರರೂಪಿಣಿ ಬ್ರಾಮರಿ। ದಶಾವತಾರವ ಧರೆಯಲಿ ಎತ್ತಿ ಧರ್ಮವ ನೆಲೆಸಿದೆ ಈಶ್ವರಿ॥5॥

ನಿಖಿಲ ಜಗದೀಶ್ವರಿಕಿ (ಆರತಿ) ರಾಗ: ಸಿಂಧುಭೈರವಿ

ನಿಖಿಲ ಜಗದೀಶ್ವರಿಕಿ ನಿತ್ಯ ಕಾಮೇಶ್ವರಿಕಿ। ನಿಗನಿಗಲ ಕರ್ಪೂರ ನಿರಾಜನಂ...। ಸತ್ಯ ಶಿವ ಸುಂದರಿಕಿ ಶಂಭು

ಹೃದ್ರಂಜನಿಕಿ...। ನೆನರು ತಲಪುಲತೋಡ ನೀರಾಜನಂ....॥ಪ॥ ಆಪಾದ ಮಸ್ತಕಮು ಮಾಂಗಲ್ಯಮುಲ ನೆಲವು। ನಿಂಡೈನ ತನುವುನಕು ನೀರಾಜನಂ...॥1॥ ನಕ್ಷತ್ರ ಹಾರತುಲ ನವ್ಯಮಣಿ ಹಾರತುಲ ಗೌರಿಕಿ ಪರಾಂಬಿಕಕು ನೀರಾಜನಂ...॥2॥ ಕುಂಭಿನೀಧರ ಸುತಕು ಕುಂಭಹಾರ ತುಲತೋ ನಿತ್ಯ ಪೂಜಲನಲರು ನೀರಾಜನಂ॥3॥ ಜಗಮುಲಕು ನಾಧಾರಮೈನ ರಾಜೇಶ್ವರಿಕಿ... ನಿಗಮ ಮಂತ್ರಮುಲತೋ ನೀರಾಜನಂ....॥4॥

ಜಯಜಯ ಜಗನ್ಮಾತೆ (ಲಾಲಿ) ರಾಗ: ಕುರಂಜಿ

ಜಯ ಜಯ ಜಗನ್ಮಾತೆ ಜಗದಂಬೆ ಲಾಲಿ। ಜಯ ಜಯ ಶಿವ ಪ್ರೀತೆ ಪಾರ್ವತಿಯೇ ಲಾಲಿ॥ಪ॥ ಲೋಕಪಾವನಿ ಮಾತೆ ಲಲಿತಾಂಬ ಲಾಲಿ। ಮೂರ್ಜಗವ ಪಾಲಿಸುವ ಮುಕ್ತಿದಾಯಕಿ ಲಾಲಿ। ಶೃಂಗಗಿರಿಯೊಳು ನೆಲಸಿರುವ ಶಾರದಾಂಬೆ ಲಾಲಿ। ರಜತಗಿರಿಯೊಳು ಮೆರೆವ ರಾಜರಾಜೇಶ್ವರಿ ಲಾಲಿ॥1॥ ಕೊಲ್ಲಾಪುರದಿ ಮೆರೆವ ಮಹಾಲಕ್ಷ್ಮೀ ಲಾಲಿ। ತುಳಜಾಪುರದಿ ಮೆರೆವ ಭವಾನಿದೇವಿ ಲಾಲಿ। ಹೃದಯ ಕಮಲದಲಿರುವ ಶಕ್ತಿ ಮಾತೆಗೆ ಲಾಲಿ। ಸಹಸ್ರಾರದಲಿ ಹೊಳೆವೊ ಮಹಾಶಕ್ತಿಗೆ ಲಾಲಿ॥2॥ ಮಂಗಳಂ ದುರ್ಗಾಂಬಾ ಅಂಬಾ। ದಾರಿದ್ರ್ಯ ನಾಶಿನಿ ದುಷ್ಟ ಸಂಹಾರಿಣಿ। ಸಾನುರಾಗದಿ ನಿಮಗಾರುತಿ ಬೆಳಗುವೆ। ಶಂಕರಿ ಪ್ರಿಯ ಸರ್ವೇಶ್ವರಿ ಮಾತೆ॥3॥

ಜಯ ಸುಮಂಗಲಜಾತೆ (ಮಂಗಳ) ರಾಗ: ಶ್ರೀ

ಜಯ ಸುಮಂಗಲಜಾತೆ ಜಯ ಮಹೇಶ್ವರಿ ಪ್ರೀತೆ। ಜಯ ಕೀರ್ತಿ ವಿಖ್ಯಾತೆ ಜಯ ಜಗನ್ಮಾತೆ॥ ಜಯಮಂಗಲಂ ನಿತ್ಯ ಶುಭಮಂಗಲಂ। ಆದಿ ಮಾಯಾದೇವಿ ಅಮರ ಗುಣ ಸಂಜೀವಿ। ವೇದಾಂತ ಪ್ರತಿಪಾದ್ಯೆ ಅಮರಜಾರಾಧ್ಯೆ। ಭೂರಿ ದಿಜನುತಿಪಾತ್ರೆ ಬಹುಜನ ಸುಚರಿತ್ರೆ। ಸಾಧುಜನ ಸುಹೃದಯೆ। ಪೂರ್ಣೇಂದು ವದನೆ॥1॥ ವಿಶ್ವರೂಪಿಣಿ ದುರ್ಗೆ ವಿಮಲಾಂಗಿ ಸರ್ವಗೆ। ಶಾಶ್ವತಾಶ್ವಭಿಲಾಷೆ ರವಿಕೋಟಿ ಭಾಷೆ। ವಿಶ್ವನಾಥಗೆ ಕಾಂತೆ ಸಿಂಹವಾಹಿನಿ ಶಾಂತೆ। ದುಸ್ವಪ್ನ ಭಯನಾಶೆ ನವರತ್ನ ಭೂಷೆ॥2॥ ಮಹಿಪ ದೈತ್ಯವಿಧಾರೆ ಮಹಸಮರದೊಳು ಧೀರೇ ಅಹಿವೇಣಿ ಶುಕವಾಣಿ ಅಂಬುರುಹ ಪಾಣಿ। ವಿಹಿತ ಶಾಸ್ತ್ರವಿಧಾರೆ ವಾರಿನಿಧಿ ಗಂಭೀರೆ। ಮಹಬಲ್ವಾನಿತ ಗೌರಿ ದೈತ್ಯ ಸಂಹಾರಿ॥3॥

❖ ❖ ❖

43. ಶ್ರೀಮಧ್ವಜಯಂತಿ

ಪಂಚಭೇದಾತ್ಮಕ ಪ್ರಪಂಚಕೆ

ಪಂಚಭೇದಾತ್ಮಕ ಪ್ರಪಂಚಕೆ। ಪಂಚರೂಪಾತ್ಮಕನೆ ದೈವಕ। ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ॥ ಪಂಚವಿಂಶತಿ ತತ್ವತರತಮ। ಪಂಚಿಕೆಗಳನು ಪೇಳ್ದ ಭಾವಿವಿ। ರಿಂಚಿ ಎನಿಪಾನಂದತೀರ್ಥರ ನೆನೆವೆನನುದಿನವು॥

ಪ್ರಥಮೋ ಹನುಮನ್ನಾಮಾ

ಪ್ರಥಮೋ ಹನುಮನ್ನಾಮಾ। ದ್ವಿತೀಯೋ ಭೀಮ ಏವಚ। ಪೂರ್ಣಪ್ರಜ್ಞಸ್ತೃತೀಯಸ್ತು। ಭಗವತ್ಕಾರ್ಯ ಸಾಧಕಃ॥

ನೆನೆವೆನು ಅನುದಿನ ನಿಮ್ಮ ಮಹಿಮೆಯನು

ನೆನೆವೆನು ಅನುದಿನ ನಿಮ್ಮ ಮಹಿಮೆಯನು ಮಧ್ವರಾಯಾ॥ಪ॥ ಸನಕಾದಿ ಮುನಿವೃಂದ ಸೇವಿತ ಪಾದಾಬ್ಜ ಮಧ್ವರಾಯಾ॥ಅ.ಪ॥ ಕಲಿಮಲದಿಂ ಜ್ಞಾನ ಕಲುಷಿತವಾಗಲು ಮಧ್ವರಾಯಾ। ನಳಿನಾಕ್ಷನಾಜ್ಞದಿ ಇಳೆಯೊಳಗುದಿಸಿದ್ಯೊ ಮಧ್ವರಾಯಾ॥1॥ ಗೋವಿತ್ತ ವಿಪ್ರಗೆ ನಿರುತ ಮೋಕ್ಷವನಿತ್ಯೋ ಮಧ್ವರಾಯಾ। ಜೀವೇಶರೊಂದೆಂಬ ಮತವ ಭೇದಿಸಿದ್ಯೊ ಮಧ್ವರಾಯಾ ॥2॥ ಸೂತ್ರರ್ಥಗಳನ್ನೆಲ್ಲಾ ವೇತೃಗಳಿಗೆ ತಿಳಿಸಿ ಮಧ್ವರಾಯಾ। ಶಾಸ್ತ್ರದ ತಾತ್ಪರ್ಯ ಪ್ರಕರಣ ರಚಿಸಿದ್ಯೋ ಮಧ್ವರಾಯಾ॥3॥ ಸುಜನರ ಹೃದಯದಿ ಸೇರಿದ್ದ ತಮಸಿಗೆ ಮಧ್ವರಾಯಾ। ನಿಜಜ್ಞಾನ ಕಿರಿಯಂತೆ ಕಿರಣವ ಹರಡಿದ್ಯೋ ಮಧ್ವರಾಯಾ॥4॥ ವ್ಯಾಸದೇವರಿಗಭಿವಂದಿಸಿ ಬದರಿಲಿ

ಮಧ್ವರಾಯ। ಶ್ರೀಶ ಪುರಂದರ ವಿಠ್ಠಲ ದಾಸನಾದ್ಯೋ ಮಧ್ವರಾಯಾ॥5॥

ಮಧ್ವರಾಯಾ ಗುರು ಮಧ್ವರಾಯಾ **ರಾಗ: ನೀಲಾಂಬರಿ**

ಮಧ್ವರಾಯಾ ಗುರು ಮಧ್ವರಾಯಾ ಮಧ್ವರಾಯಾ ಗುರು ಮಧ್ವರಾಯಾ॥ಪ॥ ರಾಮಾವತಾರ ದಲೊಮ್ಮೆ ಮಧ್ವರಾಯಾ। ಆ ಮಹಾ ಹನುಮನಾದ್ಯೊ ಮಧ್ವರಾಯಾ॥ ವಾಮಮುಷ್ಟಿಲಿ ರಾವಣನ ಗೆಲಿದ್ಯೋ ಮಧ್ವರಾಯಾ। ಕಾಮಿತಾರ್ಥ ಸುರರಿಗಿತ್ಯೋ ಮಧ್ವರಾಯಾ॥1॥ ಕೃಷ್ಣಾವತಾರ ದೊಳೊಮ್ಮೆ ಮಧ್ವರಾಯಾ। ದುಷ್ಟಕುಲಕ್ಕೆ ಭೀಮನಾದ್ಯೊ ಮಧ್ವರಾಯಾ। ಕುಟ್ಟದೆ ಕೌರವರನ್ನೆಲ್ಲ ಮಧ್ವರಾಯಾ। ಕೃಷ್ಣನ ಪ್ರೀತಿಯ ಪಡೆದ್ಯೊ ಮಧ್ವರಾಯಾ॥2॥ ಧರೆಯೊಳು ಯತಿಯಾಗಿ ಜನಿಸಿದ್ಯೊ ಮಧ್ವರಾಯಾ। ಗುರುವ್ಯಾಸರ ಹಿತವ ಪಡೆದ್ಯೊ ಮಧ್ವರಾಯಾ। ದುರುಳ ಮಾಯಮತವ ಮುರಿದ್ಯೊ ಮಧ್ವರಾಯಾ। ಪುರಂದರವಿಠಲನ ದಾಸನಾದ್ಯೊ ಮಧ್ವರಾಯಾ ॥3॥

ಇದಿರ್‍ಯಾರೊ ಗುರುವೆ ಸಮನ್ಯಾರೊ **ರಾಗ: ಆನಂದಭೈರವಿ-ಏಕತಾಳ**

ಇದಿರ್‍ಯಾರೊ ಗುರುವೆ ಸಮನ್ಯಾರೊ॥ಪ॥ ಮದನಜನಕ ಪ್ರಿಯ ಗುರು ಮಧ್ವರಾಯಾ॥ಅ.ಪ॥ ಸನ್ನುತ ಮಹಿಮ ಪ್ರಸನ್ನ ವದನ ನಿನ್ನ ಗನ್ಯನಲ್ಲವೋ ನಿ ಎನ್ನ ರಕ್ಷಿಸಬೇಕೋ। ನಿನ್ನ ನೋಡಿದವರು ಧನ್ಯರಾಗುವರು ಎನ್ನ ದಯಾಮೂರ್ತಿ ಮನ್ನಿಸಿ ನೋಡೋ॥1॥ ದುರ್ಜನರನು ಗರ್ಜನದಿಂದ ಓಡಿಸಿ ಸಜ್ಜನರನು ಸಂರಕ್ಷಿಸಿದಾತನೆ। ಈ ಜಗದಲ್ಲಿ ಮಧ್ಯಗೇಹರ ಪತ್ನಿಯ ಪೂಜ್ಯ ಜಠರದಲ್ಲಿ ಜನಿಸಿದ ಧೀರ॥2॥ ವೇದಶಾಸ್ತ್ರಗಳಿಂದ ಮಾಯ್ಗಳ ಖಂಡಿಸಿ ಸಾಧಿಸಿ ಹರಿಯೆ ಸರ್ವೋತ್ತಮ ನೆಂತೆಂದು। ಮೋದಭರಿತವಾದ ದಿವ್ಯಶಾಸ್ತ್ರವ ಮಾಡ್ದ ಮೋದ ತೀರ್ಥ ಪುರಂದರ ವಿಠ್ಠಲ ದಾಸ॥3॥

ಮಧ್ವರಾಯರ ನೆನೆದು ಪರಿಶುದ್ಧರಾಗಿರೊ **ರಾಗ: ಸುವ್ವಿಮಟ್ಟು**

ಮಧ್ವರಾಯರ ನೆನೆದು ಪರಿಶುದ್ಧರಾಗಿರೊ॥ಪ॥ ಹೊದ್ದಿ ವೈಷ್ಣವ ಮತವ ಭವಾಬ್ಧಿ ದಾಟಿರೊ॥ಅ.ಪ॥ ಉದಯದಲಿ ಎಳುವಾಗ ಮುದದಿ ಸ್ನಾನ ಮಾಡುವಾಗ। ಒದಗಿ ನಿತ್ಯ ಕರ್ಮಗಳನು ನಡೆಸುವಾಗ। ಹೃದಯದಲಿ ಬೀಜಾಕ್ಷರ ಮಂತ್ರಗಳನು ಜಪಿಸುವಾಗ। ಸದಮಲಾನಂದ ಹನುಮನ ನೆನೆಯಿರೊ॥1॥ ಕಾಮವಿಲ್ಲದೆ ಹರಿಯ ಪೂಜೆ ವೈಶ್ವದೇವ ಮಾಡುವಾಗ। ಪ್ರೇಮದಿ ವೈಷ್ಣವೋತ್ತಮರ ಅರ್ಚಿಸುವಾಗ। ಆ ಮಹಾಭಕ್ಷ್ಯಭೋಜ್ಯ ಆರೋಗಣೆಯ ಮಾಡುವಾಗ। ನಿಸ್ಸೀಮ ಕೌರವಾಂತಕ ಭೀಮಸೇನನ ನೆನೆಯಿರೊ॥2॥ ಕರುಗಳನು ತೊಳೆದು ತೀರ್ಥ ತುಳಸೀದಳವನೀಯುವಾಗ। ಪರಿಪರಿಯ ಪುಷ್ಪ ವೀಳ್ಯ ಅರ್ಪಿಸುವಾಗ। ಸರವರಂತರ್ಯಾಮಿ ನಮ್ಮ ಪರಮಗುರು ಮಧ್ವಾಂತರಾತ್ಮಕ। ಸಿರಿ ಪುರಂದರ ವಿಠ್ಠಲಗೆ ಸರುವಸಮರ್ಪಣೆ ಮಾಡಿರೊ॥3॥

ಮಧ್ವರಾಯರ ಕರುಣೆ ಪಡೆಯದವ

ಮಧ್ವರಾಯರ ಕರುಣೆ ಪಡೆಯದವ ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು॥ಪ॥ ಮಧ್ವಮತವೇ ಮತವು ಸಕಲ ಶೃತಿ ಸಮ್ಮತವು। ಮಧ್ವರಾಯಾರ ಧ್ಯಾನ ಅಮೃತಪಾನ। ಮಧ್ವರಾಯರ ಲೀಲೆ ನವರತುನದ ಮಾಲೆ। ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ॥1॥ ಮಧ್ವರಾರಯರ ಕಥಾ ಕೇಳುವುದು ದುರಿತಹತ। ಮಧ್ವರಾಯರ ಭಕುತಿ ಮಾಡೆ ಮುಕುತಿ॥ ಮಧ್ವರಾಯರ ಸ್ತೋತ್ರಮಾಡಿದವ ಸತ್ಪಾತ್ರ। ಮಧ್ವರಾಯರ ಭಜನೆ ದುಷ್ಕರ್ಮತ್ಯಜನೆ॥2॥ ಮಧ್ವರಾಯರ ದಾಸನಾದವನೆ ನಿರ್ದೋಷ। ಮಧ್ವರಾಯರ ಬಂಟ ಜಗಕೆ ನೆಂಟ। ಮಧ್ವರಮಣ ವಿಜಯವಿಠಲಕಿಂಕರರಾದ। ಮಧ್ವೇಶರಾಕರುಣೆ ಪಡೆದವನೆ (ಧನ್ಯ) ಹರಿಚರಣ॥3॥

ಮಧ್ವರಾಯರ ದೇವತಾರ್ಚನೆಯ

ಮಧ್ವರಾಯರ ದೇವತಾರ್ಚನೆಯ॥ಪ॥ ಪ್ರಸಿದ್ಧ ರಘುನಾಥರು ಪೂಜಿಸುವ ಸೊಬಗಿನ ॥ಅ.ಪ॥ ಮೂಲ ರಘುಪತಿ

ಒಂದು ಮುದ್ದು ಜಾನಕಿ ಒಂದು। ಲೀಲೆ ದಿಗ್ವಿಜಯ ರಾಮಮೂರ್ತಿ ಒಂದು॥ ಶಾಲಗ್ರಾಮ ಹಯಗ್ರೀವ ಮೊದಲಾದುವು ನಾಲ್ಕು। ಚೆಲುವ ಸುದರ್ಶನಗಳೆರಡು ಚಕ್ರಾಂಕಿತಗಳೈದು॥1॥ ಅಭಿಷೇಕಶಂಖ ಒಂದು ಅಕ್ಷಯ ಪಾತ್ರೆಯು ಒಂದು। ಶುಭನಿಧಿಯ ಬಲಮುರಿ ಶಂಖ ಒಂದು॥ ಉಭಯ ಪಶ್ಚಿಮದೇನು ಒಂದು ಉತ್ತಮವಾದ ಮುದ್ರೆ ಒಂದು। ಚಕ್ರಾಂಕಿತಗಳೆರಡು ಬಾಣವೆರಡು॥2॥ ವೇದವ್ಯಾಸಮೂರ್ತಿ ನಾಲ್ಕು ಕ್ಷೀರದಿ ಲೋಲಾಡುವ ಕೂರ್ಮ ಒಂದು। ಸ್ಮರಿಸಿ ಇಪ್ಪತ್ತೆಂಟು ಮೂರುತಿಗಳನು। ಪುರಂದರ ವಿಠಲನ್ನ ಪೂರ್ಣಭಕ್ತರೆಂಬ। ಈ ರಘುನಾಥ ತೀರ್ಥರು ಎಷ್ಟು ಪುಣ್ಯವಂತರೊ॥3॥

ಅಜ್ಞಾನ ನಾಶಾಯ ಸತಾಂ ಜನಾನಾಂ (ಶ್ರೀಮಧ್ವಾಷ್ಟಕಮ್)

ಅಜ್ಞಾನ ನಾಶಾಯ ಸತಾಂ ಜನಾನಾಂ। ಕೃತಾವತಾರಾಯ ವಸುಂಧರಾಯಾಮ್। ಮಧ್ವಭಿಧಾನಾಯ ಮಹಾಮಹಿಮ್ನೇ। ಹತಾರಿಸಂಘಾಯ ನಮೋಽನಿಲಾಯ॥1॥ ಯೇನ ಸ್ವಸಿದ್ಧಾಂತಸರೋಜಮದ್ಧಾ। ವಿಕಾಸಿತಂ ಗೋಭಿರಲಂ ವಿಶುದ್ಧೈಃ। ದುಸ್ತರ್ಕನೀಹಾರಕುಲಂ ಚ ಭಿನ್ನಂ ತಸ್ಮೈ ನಮೋ ಮಧ್ವದಿವಾಕರಾಯ॥2॥ ಪ್ರಪನ್ನತಾಪಪ್ರಶಮೈಕಹೇತುಂ ದುರ್ವಾದಿ ವಾದೀಂಧನಧೂಮಕೇತುಮ್। ನಿರಂತರಂ ನಿರ್ಜಿತಮೀನಕೇತುಂ ನಮಾಮ್ಯಹಂ ಮಧ್ವಮುನಿ ಪ್ರಕಾಂಡಮ್॥3॥ ಶಾಂತಂ ಮಹಾಂತಂ ನತಪಾತಕಾಂತಂ। ಕಾಂತಂ ನಿತಾಂತಂ ಕಲಿತಾಗ ಮಾಂತಮ್। ಸ್ವಾಂತಂ ನಯಂತಂ ತ್ರಿಪುರಾರಿಕಾಂತಂ। ಕಾಂತಂ ಶ್ರೀಯೋ ಮಧ್ವಗುರುಂ ನಮಾಮಿ॥4॥ ಪುನ್ನಾಮನಾಮ್ನೇ ಮುರವೈರಿ ಧಾಮ್ನೇ। ಸಂಪೂರ್ಣನಾಮ್ನೇ ಸಮಧೀತನಾಮ್ನೇ। ಸಂಕೀರ್ತಿತಾಧೋಕ್ಷಜಪುಣ್ಯನಾಮ್ನೇ। ನಮೋಽಸ್ತು ಮಧ್ವಾಯ ವಿಮುಕ್ತಿನಾಮ್ನೇ॥5॥ ಸನ್ಮಾನ ಸಂಸಜ್ಜನತಾಶರಣ್ಯಂ। ಸನ್ಮಾನಸಂತೋಷಿತರಾಮಚಂದ್ರಮ್। ಸನ್ಮಾನಸವ್ಯಕ್ತಪದಂ ಪ್ರಶಾಂತಂ। ನಮಾಮ್ಯಹಂ ಮಧ್ವಮುನಿಪ್ರಕಾಶಮ್॥6॥ ಸಂಸ್ತೂಯ ಮಾನಾಯ ಸತಾಂ ಸಮೂಹೈ-। ಶ್ಚಂದ್ರಾಯಮಾನಾಯ ಚಿದಂಬುರಾಶೇಃ। ದೀಪಾಯ ಮಾನಾಯ ಹರಿಂ ದಿದೃಕ್ಷೋರಲಂ ನಮೋ ಮಧ್ವಮುನೀಶ್ವ ರಾಯ॥7॥ ಗುಣೈಕಸಿಂಧುಂ ಗುರುಪುಂಗವಂ ತಂ। ಸದೈಕಬಂಧುಂ ಸಕಲಾಕಲಾಪಮ್। ಮನೋಜ ಬಂಧೋಃ ಶ್ರೀತಪಾದಪದ್ಮಂ। ನಮಾಮ್ಯಹಂ ಮಧ್ವಮುನಿಂ ವರೇಣ್ಯಮ್॥8॥ ಮಧ್ವಾಷ್ಟಕಂ ಪುಣ್ಯಮಿದಂ ತ್ರಿಸಂಧ್ಯಂ। ಪಠಂತ್ಯಲಂ ಭಕ್ತಿಯುತಾ ಜನಾ ಯೇ। ತೇಷಾಮಭೀಷ್ಟಂ ವಿತನೋತಿ ವಾಯುಃ। ಶ್ರೀಮದ್ವನಾಮಾ ಗುರುಪುಂಗವೋಽ ಯಮ್ ॥9॥

ಜಯಜಯ ಜಗತ್ರಾಣ (ಮಧ್ವನಾಮ)

ಜಯಜಯ ಜಗತ್ರಾಣ ಜಗದೊಳಗೆ ಸೂತ್ರಾಣ। ಅಖಿಲ, ಗುಣಸದ್ಧಾಮ, ಮಧ್ವನಾಮ ॥ಪ॥ ಆವ ಕಚ್ಛಪ ರೂಪದಿಂದಲ್ಯಂಡೋದಕದಿ। ಓವಿ ಧರಿಸಿಹ ಶೇಷಮೂರುತಿಯನು। ಅವನ, ಬಳಿಪಿಡಿದು ಹರಿಯ ಸುರರೈದುವರು। ಆ ವಾಯು ನಮ್ಮ ಕುಲ, ಗುರುರಾಯನು ॥1॥ ಆವಾತನು ತೊಲಗೆ, ಹರಿ ತಾ, ತೊಲಗುವ। ಆವಾತನು, ದೇಹದೊಳ, ಹೊರಗೆ ನಿಯಾಮಕನು। ಆ ವಾಯು ನಮ್ಮ ಕುಲಗುರುರಾಯನು॥2॥ ಕರುಣಾಭಿಮಾನಿ, ದಿವಿಜರು ದೇಹವನು ಬಿಡಲು। ಕುರುಡು ಕಿವುಡನು, ಮೂಕನೆಂದೆನಿಸುವ॥ ಪರಮ ಮುಖ್ಯಪ್ರಾಣ, ತೊಲಗಲಾದೇಹವನು। ಅರಿತು, ಪೆಣನೆಂದು, ಪೇಳುವರು, ಬುಧಜನಾ॥3॥ ಸುರರೊಳಗೆ, ನರರೊಳಗೆ ಸರ್ವ ಭೂತಗಳೊಳಗೆ। ಪರತರನೆನಿಸಿ, ನೇಮದಿ, ನೆಲೆಸಿಹ॥ ಹರಿಯನಲ್ಲದೆ, ಬಗೆಯ ಅನ್ಯರನು ಲೋಕದೊಳು। ಗುರುಕುಲ, ತಿಲಕ, ಮುಖ್ಯ ಪವಮಾನನು॥4॥ ತ್ರೇತೆಯಲಿ ರಘುಪತಿಯು, ಸೇವೆ, ಮಾಡುವೆನೆಂದು। ವಾತಸುತ, ಹನುಮಂತನೆಂದೆನಿಸಿದ॥ ಪೋತ, ಭಾವದಿ, ತರಣಿ ಬಿಂಬಕ್ಕೆ ಲಂಘಿಸಿದ। ಈತ ಗೆಣೆ, ಯಾರು, ಮೂರ್ಲೋಕದೊಳಗೆ॥5॥ ತರಣಿಗಭಿ ಮುಖವಾಗಿ, ಶಬ್ದಶಾಸ್ತ್ರವ ಪಠಿಸಿ। ಉರವಣಿಸಿ, ಹಿಂದೆ, ಮುಂದಾಗಿ ನಡೆದ॥ ಪರಮ, ಪವಮಾನಸುತ, ಉದಯಾಸ್ತ ಶೈಲಗಳ। ಭರದ, ಐದಿದ, ಈತಗುಪಮೆಯುಂಟೆ॥6॥ ಅಖಿಲ, ವೇದಗಳ, ಸಾರವ ಮುನ್ನ ತಾ। ನಿಖಿಳ, ವ್ಯಾಕರಣ, ಶಾಸ್ತ್ರವನು ಪೇಳೆ॥

ಮುಖದಲ್ಲಿ, ಕಿಂಚಿದಪಶಬ್ದ ಇವಗಿಲ್ಲವೆಂದು। ಮುಖ್ಯಪ್ರಾಣನನು ರಾಮನನು ಕರಿಸಿದ॥7॥ ತರುಣಿಸುತನನು, ಕಾಯ್ದು ಶರಧಿಯನ್ನು ನೆರೆ ದಾಟಿ। ಧರಣಿ, ಸುತೆಯಳ, ಕಂಡು, ದನುಜರೊಡನೆ॥ ಭರದಿ, ರಣವನು, ಮಾಡಿ, ಗೆಲಿದು ದಿವ್ಯಾಸ್ತ್ರಗಳ। ಉರುಹಿ, ಲಂಕೆಯಿಂ ಬಂದ, ಹನುಮಂತನು॥8॥ ಹರಿಗೆ, ಚೂಡಾರತ್ನವಿತ್ತು, ಹರಿಗಳ ಕೂಡಿ। ಶರಧಿಯನು, ಕಟ್ಟಿ ಬಹುರಕ್ಕಸರನು॥ ಒರೆಸಿ ರಣದಲ್ಲಿ, ದಶಶಿರನ, ಹುಡಿಗಟ್ಟಿ ತಾ। ಮೆರೆದ, ಹನುಮಂತ, ಬಲವಂತ ಧೀರಾ॥9॥ ಉರಗ ಬಂಧಕೆ, ಸಿಲುಕಿ, ಕಪಿವರರು, ಮೈ ಮರೆಯೆ। ತರುಣಿಕುಲತಿಲಕನಾಜ್ಞೆಯ ತಾಳಿ, ತಾ। ಗಿರಿ, ಸಹಿತ ಸಂಜೀವನವ, ಕಿತ್ತಿ, ತಂದಿತ್ತ। ಸುರನರರೋಳ್, ಸರಿಯುಂಟೆ, ಹನುಮಂತಗೆ॥10॥ ವಿಜಯ ರಘುಪತಿಯೊಲಿಸಿ, ಧರಣಿ ಸುತೆಯುಳ, ನೀತ। ಭಜಿಸಿ, ಮೌಕ್ತಿಕದ ಹಾರವನು ಪಡೆದ॥ ಅಜಪದವಿ ರಾಮ, ಕೊಡ, ಬರಲು, ಹನುಮಂತ। ನಿಜ, ಭಕುತಿಯನೆ ಬೇಡಿ, ವರವ ಪಡೆದ॥11॥

(ಭೀಮಸೇನ)

ಆ, ಮಾರುತನೆ, ಭೀಮನೆನಿಸಿ, ದ್ವಾಪರಯುಗದಿ। ಸೋಮ, ಕುಲದಲಿ, ಜನಿಸಿ, ಪಾರ್ಥ ರೊಡನೆ॥ ಭೀಮವಿಕ್ರಮ, ರಕ್ಕಸರನು, ಮುರಿದಿಕ್ಕಿದ। ಆ, ಮಹಿಮ ನಮ್ಮ ಕುಲ, ಗುರುರಾಯನು॥12॥ ಕರದಿಂದ, ಶಿಶುಭಾವನಾದ, ಭೀಮನ ಬಿಡಲು। ಗಿರಿಯೊಡೆದು, ಶತಶೃಂಗವೆಂದೆನಿಸಿತು॥ ಹರಿಗಳನು, ಹರಿಗಳಿಂ, ಕರಿಗಳನು, ಕರಿಗಳಿಂ। ಅರೆದ, ವೀರನಿಗೆ, ಸುರನರರು ಸರಿಯೇ॥13॥ ಕುರುಪ, ಗರಳವನಿಕ್ಕೆ, ನೆರೆಯುಂಡು, ತೇಗುತಲಿ। ಉರುಗಗಳ, ಮೇಲ್ಬಿಡಲು, ಅವನೊರಿಸಿದ॥ ಅರಗಿನ ಮನೆಯಲ್ಲಿ, ಉರಿಯನಿಕ್ಕಿ ತಾ, ಧೀರ। ಧರಿಸಿ, ಜಾಹ್ನವಿಗೊಯ್ದು ತನ್ನನುಜರ॥14॥ ಅಲ್ಲಿದ್ದ ಬಕಹಿಡಂಬಕರೆಂಬ ರಕ್ಕಸರ। ನಿಲ್ಲದೊರೆಸಿದ, ಲೋಕ ಕಂಟಕರನು॥ ಬಲ್ಲಿದ ಸುರರ, ಗೆಲಿದು, ದ್ರೌಪದಿಯ, ಕರವಿಡಿದು। ಎಲ್ಲ, ಸುಜನರಿಗೆ, ಹರುಷವ ಬೀರಿದ॥15॥ ರಾಜಕುಲ ವಜ್ರನೆನಿಸಿದ ಮಾಗಧನ ಸೀಳಿ। ರಾಜಸೂಯಯಾಗವನು, ಮಾಡಿಸಿದನು॥ ಅಜೆಯಲಿ, ಕೌರವರ, ಬಲವ ಸವರುವೆನೆಂದು। ಮೂಜಗವರಿಯೇ, ಕಂಕಣ ಕಟ್ಟಿದ॥16॥ ಮಾನನಿಧಿ, ದ್ರೌಪದಿಯ ಮನದಿಂಗಿತವನರಿದು। ದಾನವರ, ಸವರಬೇಕೆಂದು, ಬೇಗ। ಕಾನನವ, ಪೊಕ್ಕು ಕಿರ್ಮೀರಾದಿಗಳ ತರಿದು। ಮಾನಿನಿಗೆ ಸೌಗಂಧಿಕವನಿತ್ತ॥17॥ ದುರುಳ, ಕೀಚಕನು, ದ್ರೌಪದಿ ದೇವಿ ಚಲ್ವಿಕೆಗೆ। ಮರುಳಾಗಿ, ಕರೆಕರೆಯ ಮಾಡಲವನು॥ ಗರಡಿ ಮನೆಯೊಳು, ಬರೆಸಿ, ಒರೆಸಿ ಅವನನುಜರ। ಕುರುಪನಟ್ಟಿದ, ಮಲ್ಲಕುಲವ ಸದೆದ॥18॥ ವೈರಿ ದುಶ್ಯಾಸನನ, ತೊಡೆಯ ಮೇಲಿರಿಸಿ। ವೀರ, ನರಹರಿಯ ಲೀಲೆಯ ತೋರಿದ॥ ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ। ಓರಂತೆ, ಕೌರವರನ್ನೆಲ್ಲ ತೆರೆದ॥19॥ ಗುರುಸುತನು ಸಂಗರದಿ, ನಾರಾಯಣಾಸ್ತ್ರ ಬಿಡೆ। ಉರವಣಿಸಿ, ಬರಲು, ಶಸ್ತ್ರವ ಬಿಸುಡದೆ॥ ಹರಿಯ, ಕೃಪಾ ಪಡೆದಿದ್ದ ಭೀಮ ಹೂಂಕಾರ ಗೈದು। ಎರಗದಲೆ ದಿವ್ಯಾಸ್ತ್ರಟ್ಟಿದ॥20॥ ನಾರಿ, ರೋಧನ ಕೇಳಿ, ಮನ, ಮರುಗಿ, ಗುರುಸುತನ। ಹಾರ್ಹಿಡಿದು, ಶಿರೋರತ್ನ ಕಿತ್ತಿ ತೆಗೆದ। ನೀರೊಳಡಗಿದ್ದ ದುರ್ಯೋಧನನ, ಹೊರಗೆಡಹಿ। ಉರುದ್ವಯ, ತನ್ನ ಗದೆಯಿಂದ, ಮುರಿದ॥21॥ ಚಂದ್ರವಿಕ್ರಮನ, ಗದೆಗೊಂಡು ರಣದೊಳಗೆ, ಭೂ ಮಂಡಲದೊಳುದ್ಭವಿಸಿದಖಿಲ, ಖಳರ॥ ಹಿಂಡಿ, ಬಿಸುಟಿದ, ವೃಕೋದರನ, ಪ್ರತಾಪವನು। ಕಂಡು, ನಿಲ್ಲುವರಾರು ತ್ರಿಭುವನದೊಳು ॥22॥

(ಮಧ್ವಚಾರ್ಯ)

ದಾನವರು, ಕಲಿಯುಗದೊಳವತರಿಸಿ, ಸುಜನರಿಗೆ ವೇನಸ, ಕುಮತವ ಬೋಧಿಪುದನರಿತು॥ ಜ್ಞಾನಿ, ತಾ ಪವಮಾನ, ಭೂತಳದೊಳವತರಿಸಿ। ಮಾನನಿಧಿ, ಮಧ್ವಾಖ್ಯನೆಂದೆನಿಸಿದ॥23॥ ಅರ್ಭಕರ್ತನಳೈದು, ನೀಗಿ, ಬದರಿಯಲ್ಲಿ, ಮದ್ವಮುನಿ। ನಿರ್ಭಯದಿ,ಸಕಲಶಾಸ್ತ್ರರ್ಥ, ಪಠಿಸಿ॥ ಉರ್ವಿಯೊಳು, ಅಮ್ನಾಯದ ತತ್ವಮಾರ್ಗವನು। ಸರ್ವ, ಸುಜನರಿಗೆ ಅರುಹಿದ ಮೋದದಿ ॥24॥ ಸರ್ವೇಶ, ಹರಿ ವಿಶ್ವವೆಲ್ಲವೂ, ಪುಸಿಯೆಂಬ। ದುರ್ವಾದಿಗಳ, ಮತವ, ನೆರೆ ಖಂಡಿಸಿ॥ ಸರ್ವೇಶ, ಹರಿ ವಿಶ್ವ ಸತ್ಯವೆಂದರುಹಿದ। ಶರ್ವಾದಿಗೀರ್ವಾಣ, ಸಂತತಿ ಯಲಿ॥25॥ ಏಕವಿಂಶತಿ,

ಕುಭಾಷ್ಯಗಳ, ಬೇರನು ತರಿದು। ಶ್ರೀಕರಾರ್ಚಿತನೊಲುಮೆ, ಶಾಸ್ತ್ರ ರಚಿಸಿ।। ಲೋಕತ್ರಯದೊಳಿದ್ದ, ಸುರರು ಆರಿಸುವಂತೆ। ಅಕಮನಾಯಭಯತಿನಿಕರಕ್ಕೊರೆದ ।।26।। ಬದರಿಕಾಶ್ರಮಕ್ಕೆ ಪುನರಪಿ, ಪೋಗಿ ವ್ಯಾಸಮುನಿ। ಪದಕೆರಗಿ, ಸಕಲ ವೇದಾರ್ಥಗಳನು।। ಪದುಮನಾಭನ, ಮುಖದಿ, ತಿಳಿದು, ಬ್ರಹ್ಮತ್ವ ವೈದದಿ ಮಧ್ವಮುನಿರಾಯಾ-ಗಭಿನಮಿಪೆನು।।27।। ಜಯ, ಜಯತು, ದುರ್ವಾದಿ, ಮತತಿಮಿರ ಮಾರ್ತಾಂಡ। ಜಯ, ಜಯತು, ವಾದಿಗಜ, ಪಂಚಾನನ।। ಜಯ ಜಯತು ಚಾರ್ವಾಕ ಗರ್ವಪರ್ವತ ಕುಲಿಶ। ಜಯ, ಜಯತು, ಜಗನ್ನಾಥ ಮಧ್ವನಾಥಾ।।28।। ತುಂಗಕುಲ, ಗುರುವರನ, ಹೃತ್ಕಮಲದೊಳು ನೆಲೆಸೆ। ಭಂಗವಿಲ್ಲದ ಸುಖವ ಸುಜನಕೆಲ್ಲ।। ಹಿಂಗದೆ ಕೊಡುವ ಗುರುಮಧ್ವಾಂತರ್ಯಾಮಿ। ಶ್ರೀರಂಗವಿಠ್ಠಲನೆಂದು ನೆರೆನಂಬಿರೋ।।29।। ಇಲ್ಲಿಗೆ ಶ್ರೀಪಾದರಾಜರು ಮಾಡಿರುವ ಮಧ್ವನಾಮ ಮುಗಿಯಿತು.

ಫಲಸ್ತುತಿ (ಶ್ರೀಜಗನ್ನಾಥದಾಸರಿಂದ)

ಸೋಮ, ಸೂರ್ಯೋಪರಾಗದಿ, ಗೋಸಹಸ್ರಗಳ। ಭೂಮಿ, ದೇವರಿಗೆ ಸುರನದಿಯ ತಟದಿ।। ಶ್ರೀಮುಕುಂದಾರ್ಪಣ ವೆನುತ, ಕೊಟ್ಟ ಫಲವಕ್ಕು। ಈ ಮಧ್ವನಾಮ, ಬರೆದೋದಿದವರಿಗೆ ।।30।। ಪುತ್ರರಿಲ್ಲದವರು, ಸತ್ಪುತ್ರರೈದುವರು, ಸ। ರ್ವತ್ರದಲಿ, ದಿಗ್ವಿಜಯವಾಹುದು, ಸದಾ ಶತ್ರುಗಳ, ಬೀಳ್ವರಪಮೃತ್ಯು ಬರಲಂಜುವುದು। ಸೂತ್ರನಾಮಕನ, ಸಂಸ್ಕೃತಿ ಮಾತ್ರದಿ।।31।। ಶ್ರೀಪಾದರಾಜರು ಪೇಳಿದ, ಮಧ್ವನಾಮ ಸಂ। ತಾಪವನು ಕಳೆದು, ಸೌಖ್ಯವನೀವುದು।। ಶ್ರೀಪತಿ, ಜಗನ್ನಾಥವಿಠ್ಠಲನ, ತೋರಿ, ಭವ। ಕೂಪಾರದಿಂದ, ಕಡೆಹಾಯಿಸುವುದು।। (ಇಲ್ಲಿಗೆಶ್ರೀ ಜಗನ್ನಾಥದಾಸರಿಂದ ರಚಿತವಾದ ಶ್ರೀಮಧ್ವನಾಮದ ಫಲಸ್ತುತಿಯು ಸಂಪೂರ್ಣ)

ಜಯ ಪ್ರಾಣದೇವ ಜಯ ಅನಿಲದೇವ

ಜಯ ಪ್ರಾಣದೇವ ಜಯ ಅನಿಲದೇವ। ಜಯ ವಾಯುದೇವ ಜಯಭೋ।। ಜಯಜಯಜ ಯಭೋ।।ಪ।। ಜಯವಂತ ಹನುಮ ಬಲವಂತ ಭೀಮ। ಮತಿವಂತ ಮಧ್ವ ಜಯಭೋ।। ಜಯಪ್ರಾಣದೇವ।।1।। ತರಸಾವತೀರ್ಯ ಹರಿಕಾರ್ಯನಿರತ। ಪರಿಪೂತ ಚರಿತ ಜಯಭೋ। ಹರಿರೂಪ ವಿನುತ ರಘುವೀರಚರಣ। ಅರಿಗರ್ವದಮನ ಜಯಭೋ।। ಜಯಜಯ ಹನುಮ।।2।। ಕುರುವಂಶದಹನ ಕೃತಸತ್ಪ್ರತಿಜ್ಞ ಮುಖಶಾರ್ವರೀಶ ವದನ।। ದರಹಾಸಮುದಿತ ಅರಿರಕ್ತಲೇಪ। ಪರಿಬದ್ಧ ಕೇಶ ಜಯಭೋ।। ಜಯಜಯ ಭೀಮ।।3।। ಹರಿರೇಖ ಏವ ಸರ್ವೋತ್ತಮೋ ನಿಖಿಲ ಗುಣಯುತೋಖಿಲಜಗತ್। ಸತ್ಯಮೇವ ಪರಜೀವಭೇದ ವರತಾರತಮ್ಯ ವಚನೈಃ।। ಪರತತ್ವನಿವಹ ಭಾಷ್ಯೋಕ್ತಿಭಿರ್ಮುದಿತ ಬಾದರಾಯಣ ಜಯ। ದುರ್ವಾದಿ ಮತ್ತ ಮಾತಂಗ ವಿಜಯ। ಕಮಲೇಶ ದಾಸ ಜಯಭೋ। ಜಯಜಯ ಮಧ್ವ।।4।।

ಕುಂದಣದ ತೊಟ್ಟಿಲೊಳ್ ಅಂದದಿ ಮಲಗಿರುವ (ಲಾಲಿ)

ಕುಂದಣದ ತೊಟ್ಟಿಲೊಳ್ ಅಂದದಿ ಮಲಗಿರುವ। ತಂದೇ ವಂದೇ ಆನಂದತೀರ್ಥ। ಜೋ ಜೋ ಜೋ ಜೋ।।ಪ।। ಬೃಂದಾರಕರೆಲ್ಲ ಮೂರವತಾರನ। ಅಂದದಿ ತೂಗುತ ಜೋಗುಳವ ಪಾಡುವ ಪರಿಯೇನು ಅಂದ। ನೋಡಲು ಚಂದ। ನಯನಾನಂದ।।ಜೋ।। ವೇದಗಳನು ಭಾಗಿಸಿದ ವ್ಯಾಸರಲತಿಓದಿಹನೇ। ಮೋದದಿ ಪರವಾದಗಳು ಭೇದಿಸಿ ಮತ ರಚಿಸಿಹನೇ। ಸುಂದರ ಯದು ನಂದನ ಪದ ಪಂಕಜಕೆಮಧುಕರನೆ। ವಂದಿಸಿ ರಘುನಂದನನ ಧ್ಯಾನದಿ ಮೈಮರೆದಿಹನೇ।।ಜೋ।। ರಕ್ಕಸರೆಲ್ಲರ ಸೊಕ್ಕನು ಮುರಿದು ನೀ ಲೇಕ್ಕಿಸದೆ ಕೌರವರ ಶಿಕ್ಷಿಸಿದ ಧೀರ। ಅಕ್ಕರೆಯಿಂ ನಮ್ಮ ಕಮಲೇಶನ ಭಜಿಸುತ್ತಾ ಮಕ್ಕಳಂದದಿ ಮಲಗು। ಹನುಮಭೀಮಮಧ್ವ ಮುನಿರಾಯ।।ಜೋ।।

ಜಯಮಂಗಳಂ ಆನಂದತೀರ್ಥ (ಮಂಗಳ)

ಜಯಮಂಗಳಂ ಆನಂದತೀರ್ಥ ಜಯಮಂಗಳಂ ನಿತ್ಯ ಶುಭಮಂಗಳಂ।।ಪ।। ಮಂಗಳಂ ಆನಂತೀರ್ಥ

ಗುರುರಾಯರಿಗೆ। ಮಂಗಳಂ ಮಧುರನುಡಿ ಸಂಭಾಷ್ಯಗೆ। ಮಂಗಳಂ ಮೈಥಿಲಿಗೆ ಅಂಗುಲಿಯನಿತ್ತವಗೆ। ಮಂಗಳಂ ಜಯವೀರ ಮಧ್ವಮುನಿಗೆ॥1॥ ಅಂಜನೆಯ ಗರ್ಭಸಂಜಾತ ವಿಖ್ಯಾತನಿಗೆ। ಸಂಜೀವನವ ತಂದ ಹನುಮಂತಗೆ। ಅಂಜದಂಥಭಯಕರ ಕಪಿಗಳಿಗೆ ತೋರಿದಗೆ। ಕಂಜಾಕ್ಷ ರಾಮನ ಭಜಿಸುವವಗೆ॥2॥ ದ್ವಾಪರದಿ ಕುಂತಿಯ ಗರ್ಭದಲಿ ಜನಿಸುತಲಿ। ಪಾಪಿ ದೈತ್ಯರನೆಲ್ಲ ಸೀಳಿದವಗೆ। ದ್ರೌಪದಿಗೆ ಸೌಗಂಧಿಕ ಕುಸುಮ ತಂದವಗೆ। ಶ್ರೀಪತಿಯ ದಾಸ ಭೀಮಸೇನನಿಗೆ॥3॥ ಕಲಿಯುಗದಿ ಶಂಕರನ ದರ್ಮತವ ಮುರಿದವಗೆ। ಖಳಬೌದ್ಧ ಚಾರ್ವಕ ಮತಗೆಲಿದವಗೆ। ಒಲಿದು ಸಚ್ಛಾಸ್ತ್ರವನು ಸಾಧುಗಳಿಗೊರೆದವಗೆ। ಸುಲಭ ಪುರಂದರವಿಠಲನ ಮಂತ್ರಿಗೆ॥4॥

❖ ❖ ❖

44. ನರಕ ಚತುರ್ದಶಿ – ದೀಪಾವಳಿ

ನಾಡಿನ ಗುಡಿಯಲಿ ನರಕಾಸುರನಿಗೆ **ರಾಗ: ಕಾನಡ**

ನಾಡಿನ ಗುಡಿಯಲಿ ನರಕಾಸುರನಿಗೆ। ನವೀನ ಪೂಜೆಯು ನಡೆಯುತಿದೇ। ಸಾಸಿರ ಕೈಗಳ ರಕ್ತಾಂಗುಲಿಯಲಿ। ಶೋಷಣೆಯಾರುತಿ ಬೆಳಗುತಿದೆ॥ಪ॥ ದೀನರ ಮೇಘಕೆ ಶಿಶುಬಲಿಯಾಗಿದೆ। ದೈತ್ಯಾಗ್ನಿಯೆ ಚಿತೆಯೇರುತಿದೆ। ನೇಸರ ತೇರಿಗೆ ಆಸರೆ ಇಲ್ಲದೆ। ಭಸ್ಮಾಸುರನನು ಬೇಡುತಿದೆ॥1॥ ಕತ್ತಲ ಬಳ್ಳಿಯೆ ಹೂ ಬಿಟ್ಟಿತೊ ಎನೆ। ಸುತ್ತಲು ಬೆಳಗುವ ಓ ಬೆಳಕೇ। ದೀಪಾವಳಿಯಲಿ ದಿವದಿಂದಿಳಿಯುವ। ಶುಭ್ರ ಸನಾತನ ಕೆಂಬೆಳಕೇ॥2॥ ಚೆಲುವಿನ ಚಿಲುಮೆಗೆ ಪದ್ಮ ಪ್ರಣತಿಗೆ। ಇಳೆಯಂಗಳವನು ಬೆಳಗಿಸುವಾ। ತಿಳಿವಿನ ಹೊಳೆಯನು ಹರಿ ಹರಿಸುತೆ ಬಾ। ದೀವಳಿಗೆಯ ನವ ತೇಜವೆ ಬಾ॥3॥

ಹಕ್ಕಿಯ ಹೆಗಲೇರಿ ಬಂದವಗೇ **ರಾಗ: ಮೋಹನ**

ಹಕ್ಕಿಯ ಹೆಗಲೇರಿ ಬಂದವಗೇ। ನೋಡಕ್ಕ ಮನಸೋತೆ ನಾನವಗೇ॥ಪ॥ ಸತ್ರಾಜಿತನ ಮಗಳೆತ್ತಿದಾ। ಉನ್ಮತ್ತ ನರಕನೊಳು ತಾ ಕಾದಿದ। ಮತ್ತೆ ಕೆಡಹಿದ ಅವನಂಗದಾ। ಸತಿಗಿತ್ತನು ತಾ ಆಲಿಂಗನವಾ॥1॥ ಹದಿನಾರುಸಾವಿರ ನಾರಿಯರ ಸೆರೆ। ಮುದದಿಂದ ಬಿಡಿಸಿ ಮನೋಹರ। ಅಧಿತಿಯ ಕುಂಡಲ ಕಳಿಸಿದಾ। ಹರ ವಿಧಿಸುರ ನೃಪರನ್ನು ಸಲಹಿದ ಧೀರ॥2॥ ನರಕ ಚತುರ್ದಶಿ ಪರ್ವದಾ ದಿನ। ಹರುಷಾದಿ ಪ್ರಕಟಾದನು ದೇವಾ। ಶರಣಾಗತಜನವತ್ಸಲ ರಂಗ। ಪರಮ ಭಾಗವತರ ಪರಿಪಾಲ॥3॥ ಹೊಗಳಿ ಕೃಷ್ಣಯ್ಯನ ಮಹಿಮೆಯ। ಮುಕ್ತಿ ನಗರದ ಅರಸನ ಕೀರ್ತಿಯ। ಜಗದೀಶ ಪ್ರಸನ್ವೇಂಕಟೇಶನು। ಭಕ್ತರಘ ರವಿಕೋಟಿ ಪ್ರಕಾಶನು॥4॥

ಹದಿನಾರು ಸಾವಿರ ಚದುರೆಯರಾಳಿದ

ಹದಿನಾರು ಸಾವಿನ ಚದುರೆಯರಾಳಿದ ಚದುರಾ ಕೃಷ್ಣನಿಗೇ॥ಪ॥ ಮಧುಸೂಧನಗೆ ಮದಗಜಗಮನಗೆ ಮುದದಿ ನರಹರಿಗೇ॥ ಅರಸಿಯರೇ ಸರಸಿಯರೇ। ಅರಸಾದ ಸುಂದರ ಚದುರೆಯರೊಳಗಿನ। ಚದುರಾ ಕೃಷ್ಣನಿಗೆ॥1॥

ಕಮಲಜಾಯತ ವಿಮಲ **ರಾಗ:ಕಲ್ಯಾಣಿ**

ಕಮಲಜಾಯತ ವಿಮಲ ಸುನಯನ। ಕರಿವರದ ಕರುಣಾಂಬುದೇಹರಿ। ಕರುಣ ಶರಧೇ। ಕಮಲಾಕಾಂತ। ಕಂಸ ನರಕಾಸುರ ವಿಭೇದನ। ವರದವೇಲಾಪುರ ನೃಪೋತ್ತಮ। ಕರುಣಶರಧೇ ಕಮಲಾಕಾಂತ॥2॥

ದೀಪಾವಳಿ ಇಂದು ದೀಪಾವಳಿ **ರಾಗ: ಅಭೇರಿ**

ದೀಪಾವಳಿ ಇಂದು ದೀಪಾವಳಿ। ಮನಜ್ಯೋತಿ ಬೆಳಗಿಪ ದೀಪಾವಳಿ॥ಪ॥ ಮಕ್ಕಳು ನಲಿಯುವ ದೀಪಾವಳಿ। ಮಾಧವನ ಸ್ಮರಿಸುವ ದೀಪಾವಳಿ। ನರಕಾಸುರನಳಿದ ದೀಪಾವಳಿ। ನಂದನ ಭಜಿಸುವ ದೀಪಾವಳಿ॥1॥ ಜಗವನೆ

ನಲಿಸುವ ದೀಪಾವಳಿ। ಜಗದೀಶ ನಿರ್ಮಿಸಿಹ ದೀಪಾವಳಿ। ಕಾರ್ತೀಕ ಮಾಸದ ದೀಪಾವಳಿ। ಶಾರದ ದಾಸಿ ವಂದಿತ ಶ್ರೀ ಹರಿಯ। ಪಾಡಿಕೊಂಡಾಡುವ ದೀಪಾವಳಿ।।2।।

ಆರತಿಗಯ್ಯುವೆನಾ ಶ್ರೀಹರಿಗೇ **ರಾಗ: ಹಿಂದೋಳ**

ಆರತಿಗಯ್ಯುವೆನಾ ಶ್ರೀಹರಿಗೇ। ನೀಲಾಮೇಘವರ್ಣನಿಗೆ।।ಪ।। ನಾರದ ವಂದ್ಯಗೆ ನವನೀತ ಚೋರಗೆ। ನಾರಿಯ ಮಾನವ ಕಾಯ್ದಹರಿಗೇ।।1।। ಮಂದರೋದ್ಧಾರಗೆ ಮಾತಾಪಿತನಿಗೆ। ಮಾವನ ಕೊಂದವಗೇ ಮಾಧವಗೇ।।2।। ಸೋಳ ಸಾಸಿರ ಬಾಲೆಯರ ಕರಪಿಡಿದ। ನರಕಾಂತಕನಿಗೆ ನಾರಾಯಣಗೇ।।3।।

ಮಂಗಳಾರತೀಯನೆತ್ತಿರೆ **ರಾಗ: ಭೈರವಿ**

ಮಂಗಳಾರತೀಯನೆತ್ತಿರೆ ರಂಗನಾಥನಿಗೆ। ಅಂಗನೆಯರು ಸಂಗದಿಂದ ಮಂಗಳಾಂಗಗೆ ಶ್ರೀ ರಂಗನಾಥಗೆ।।ಪ।। ವಸುದೇವ ದೇವಕಿ ಉದರಾದಿ ಜನಿಸಿ। ಗೋಕುಲಾದಲಿ ಶಿಶುವು ರೂಪಿನಿಂದ। ನೀನು ಲೀಲೆ ತೋರಿದೆ।।1।। ಕ್ಷೀರಸಾಗರ ಮಧ್ಯದಲ್ಲಿ। ಆಲದೆಲೆ ಮೇಲೆ ಬಾಲನಾಗಿ ಮಲಗಿ। ನೀನು ಲೀಲೆ ತೋರಿದೆ।।2।। ಹದಿನಾರು ಸಾವಿರ ಸುದತಿಯರೊಡನೆ। ದ್ವಾರಕೆಯಲಿ ಚದುರಂಗವಾಡಿ। ಚದುರೆಯೊಡನೆ ಸುಖದಿ ನಲಿಯುತ।।3।।

❖ ❖ ❖